ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 3 ಬುಧವಾರ 2024


ಸಂಪುಟ: 44 | ಸಂಚಿಕೆ: 345 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



2024ನೇ ಸಾಲಿನ ಚಂಪಕ ಕಲಾರತ್ನ ಪ್ರಶಸ್ತಿ ಘೋಷಣೆ


ಡಾ.ನಾಗರಾಜರಾವ್


ಡಾ.ಕೆ.ಅನಂತರಾಮು


ಡಾ.ಮಾಣಿಕ್ ಬೆಂಗೇರಿ


ಬಿ.ಕೆ.ವಸಂತಲಕ್ಷ್ಮಿ

ಮೈಸೂರು,ಏ.2–ಮೈಸೂರಿನ ಚಂಪಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಕಳೆದ 20 ವರ್ಷಗಳಿಂದ ಭಾರತೀಯ ಕಲೆ ಹಾಗೂ ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತಾ ಬಂದಿದೆ. ಅಂತೆಯೇ 2024ರ ಚಂಪಕ ಕಲಾರತ್ನ ಪ್ರಶಸ್ತಿಯನ್ನು ಘೋಷಿಸಲಾಗಿದೆ. ವಿದ್ವಾನ್ ಡಾ.ಎಚ್.ವಿ.ನಾಗರಾಜರಾವ್ (ಪ್ರಖ್ಯಾತ ಸಂಸ್ಕೃತ ಲೇಖಕರು ಹಾಗೂ ವಿದ್ವಾಂಸರು), ಡಾ.ಕೆ.ಅನಂತರಾಮು (ಪ್ರಖ್ಯಾತ ಕನ್ನಡ ಲೇಖಕರು), ಡಾ.ಮಾಣಿಕ್ ಎ.ವಿ.ಬೆಂಗೇರಿ (ಪ್ರಖ್ಯಾತ ಸಂಸ್ಕೃತ, ಮರಾಠಿ ಹಾಗೂ ಹಿಂದಿ ವಿದ್ವಾಂಸರು ಹಾಗೂ ಲೇಖಕರು) ಹಾಗೂ ಗುರು ವಿದುಷಿ ಬಿ.ಕೆ.ವಸಂತಲಕ್ಷ್ಮಿ (ಪ್ರಖ್ಯಾತ ಭರತನಾಟ್ಯ ಗುರುಗಳು) ಅವರು ಈ ವರ್ಷದ ಪ್ರಶಸ್ತಿಗೆ ಭಾಜನ ರಾಗಿದ್ದಾರೆ. ಪ್ರಶಸ್ತಿಯನ್ನು ಇದೇ ಏಪ್ರಿಲ್ 6 (ಶನಿವಾರ) ಸಂಜೆ 5 ಗಂಟೆಗೆ ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಡೆಯಲಿರುವ ಕಾರ್ಯಕ್ರಮ ದಲ್ಲಿ ಪ್ರದಾನ ಮಾಡಲಾಗುವುದು.

ಕಳೆದ ವರ್ಷಗಳಲ್ಲಿ ಡಾ.ವಸುಂಧರಾ ದೊರಸ್ವಾಮಿ, ಡಾ.ಆರ್.ಎನ್.ಶ್ರೀಲತಾ ಹಾಗೂ ಡಾ.ಗೌರಿ ಕುಪ್ಪಸ್ವಾಮಿ 2022ರಲ್ಲಿ, ಗಂಜೀಫಾ ರಘುಪತಿ ಭಟ್, ಅಡ್ಡಂಡ ಕಾರಿಯಪ್ಪ ಗುರು ವಿದುಷಿ ನಂದಿನಿ ಈಶ್ವರ್ ಹಾಗೂ ಯೋಗಾಚಾರ್ಯ ಸುಧೇಶ್ ಚಂದ್ 2023ರಲ್ಲಿ ಪ್ರಶಸ್ತಿಗೆ ಭಾಜನ ರಾಗಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಆರ್.ಗುರು, ಅಧ್ಯಕ್ಷರು, ಎನ್‌ಆರ್ ಸಂಸ್ಥೆಗಳ ಸಮುಚ್ಚಯ, ಮೈಸೂರು, ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಮಾರಂಭದ ನಂತರ ಮಾಸಿಕ ಚಂಪಕ ರಾಷ್ಟ್ರೀಯ ಕಲಾ ಉತ್ಸವದ ಪಾಲ್ಗುಣ ಮಾಸದ ಕಾರ್ಯಕ್ರಮವು ಜರುಗಲಿದೆ.

ಚಂಪಕ ಅಕಾಡೆಮಿ ಸಂಸ್ಥಾಪಕಿ ವಿದುಷಿ ಡಾ.ನಾಗಲಕ್ಷ್ಮಿ ನಾಗರಾಜನ್ ಅವರು 'ಶ್ರೀಮದ್ ಶಂಕರ ದಿಗ್ವಿಜಯ–ದಿವ್ಯಾದ್ಭುತ ಬಾಲ್ಯವ್' ವಿಷಯಾಧಾರಿತ ಕಾವ್ಯ ನಾಟಕವನ್ನು ಪ್ರಸ್ತುತಪಡಿಸಲಿದ್ದಾರೆ. ಇದು ಶ್ರೀ ಮಾಧವ ವಿದ್ಯಾರಣ್ಯ ವಿರಚಿತ ಕಾವ್ಯದಲ್ಲಿ ಶ್ರೀಮದ್ ಆದಿಶಂಕರರ ಬಾಲ್ಯವನ್ನು ಪ್ರತಿಬಿಂಬಿಸುವ ರೂಪಕ. ಇದರ ಸಂಗೀತ ಸಂಯೋಜನೆ ಹಾಗೂ ಗಾಯನವನ್ನು ವಿದುಷಿ ಚೇತನ ನಾಗರಾಜ್ ನಡೆಸಿಕೊಡಲಿದ್ದು, ಕೊಳಲಿನಲ್ಲಿ ವಿದ್ವಾನ್ ರಾಕೇಶ್ ಸುಧೀರ್ ಮತ್ತು ಮೃದಂಗದಲ್ಲಿ ವಿದ್ವಾನ್ ಸಾಯಿವಂಶಿ ಸಹಕಾರ ನೀಡಲಿದ್ದಾರೆ. ಆನಂತರ ಗುರು ವಿದುಷಿ ಬಿ.ಕೆ.ವಸಂತ ಲಕ್ಷ್ಮಿ ಅವರ ಶಿಷ್ಯಂದಿರು 'ಮಧುರಾಗಮನಂ' ಕಿರು ನೃತ್ಯ ನಾಟಕವನ್ನು ಪ್ರಸ್ತುತಪಡಿಸಿ, ಗುರುವಿಗೆ ವಂದನೆಯನ್ನು ಸಲ್ಲಿಸಲಿದ್ದಾರೆ.


ಮೈಸೂರಿನ ಕುವೆಂಪುನಗರದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ವೃತ್ತದಲ್ಲಿ ಆಯೋಜಿಸಿದ್ದ ಸಿದ್ಧಗಂಗಾ ಮಠದ ಲಿಂಗೈಕ್ಯ ಶ್ರೀ ಡಾ.ಶಿವಕುಮಾರ ಸ್ವಾಮೀಜಿಗಳ 117ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಪ್ರದೀಪ್ ಕುಮಾರ್, ಹೆಚ್.ವಿ.ರಾಜೀವ್, ಕೆ.ವಿ.ಮಲ್ಲೇಶ್ ಮತ್ತಿತರರು ಭಾಗವಹಿಸಿದ್ದರು.


ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ ಶ್ರೀ ಭಕ್ತ ಕನಕದಾಸ ಸೇವಾ ಸಂಘವನ್ನು ಜ್ಯೋತಿ ಬೆಳಗಿಸುವ ಮೂಲಕ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಉದ್ಘಾಟಿಸಿದರು. ಸ್ಥಳೀಯ ಮುಖಂಡರು, ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಚಿತ್ರದಲ್ಲಿದ್ದಾರೆ.

ಪುನೀತ್ ರಾಜ್‌ಕುಮಾರ್ ಜನ್ಮದಿನ: ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ
ಬೆಂಗಳೂರಿನ ರಂಗ XI ತಂಡಕ್ಕೆ ಪ್ರಥಮ ಬಹುಮಾನ

ಮೈಸೂರು,ಏ.2–ಮೈಸೂರಿನ ಜೆಪಿ ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ



ಕರುನಾಡ ಸೇವಾ ಸೇನೆಯ ವತಿಯಿಂದ ಪುನೀತ್ ರಾಜ ಕುಮಾರ್ ಜನ್ಮದಿನ ಪ್ರಯುಕ್ತ ಆಯೋಜಿಸಿದ ವ'ುೂರ'ು ದಿನದ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯದ 16 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು, ಅದರಲ್ಲಿ ಬೆಂಗಳೂರಿನ ರಂಗ XI ತಂಡ ಮೊದಲನೇ ಬಹುಮಾನ ಹಾಗೂ ಬೆಂಗಳೂರಿನ ಡಿ.ಕೆ 9 ಸ್ಟಾರ್ಸ್ ತಂಡ ದ್ವಿತೀಯ ಬಹುಮಾನ ಪಡೆದುಕೊಂಡಿದೆ. ಸರಣಿ ಶ್ರೇಷ್ಠ ಆಟಗಾರ ಹರಿ ಅವರಿಗೆ ಬೈಸಿಕಲ್ ನೀಡಲಾಯಿತು. ಈ ಸಂದರ್ಭದಲ್ಲಿ ಕರುನಾಡ ಸೇವಾ ಸೇನೆಯ ಸಂಸ್ಥಾಪಕ ಅಧ್ಯಕ್ಷ ಬಿ.ಗಣೇಶ್, ಕಾರ್ಯದರ್ಶಿ ಕೆ.ಮುರಳಿ, ಸಂಘಟನಾ ಕಾರ್ಯದರ್ಶಿ ಎನ್.ನಂದೀಶ್, ವಿ.ಕುಮಾರಸ್ವಾಮಿ, ನಗರ ಕಾರ್ಯದರ್ಶಿ ಚೇತನ್, ಹೇಮಂತ್, ದಿಲೀಪ್‌ಕುಮಾರ್ ಅನಂತನಾಗ್, ಸಾಧಿಕ್ ನಿಶದ್, ಅನಿಲ್‌ಕುಮಾರ್, ಸನ್ನು ಇನ್ನಿತರರು ಹಾಜರಿದ್ದರು.

ನಿಧನ

ಹೀಥರ್ ದೋರ್ತಿ ಪೆರೇರಾ



ಮೈಸೂರು, ಏ. 2– ಮೈಸೂರಿನ ಗೋಕುಲಂ ನಿವಾಸಿ ರಾಜನ್ ವಿಲಿಯಮ್ ಪೆರೇರಾ ಅವರ ಪತ್ನಿ ಹೀಥರ್ ದೋರ್ತಿ ಪೆರೇರಾ (68) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಳವಾಡಿ ಸಿಮೆಟ್ರಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫಿಲೋಮಿನಾ ಮಾನ್ಸುರೇಟ್



ಮೈಸೂರಿನ ಉದಯಗಿರಿ ನಿವಾಸಿ ಫಿಲೋಮಿನಾ ಮಾನ್ಸುರೇಟ್ (ಬೇಬಿ ಕೋಟ್ಸ್) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರಿಗೆ 91 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಏ.3) ಬೆಳಗ್ಗೆ 11 ಗಂಟೆಗೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೊಲೀಸ್ ಧ್ವಜ ದಿನಾಚರಣೆ: 17 ಮಂದಿ ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಸನ್ಮಾನ

ಮೈಸೂರು,ಏ.2(ಆರ್‌ಕೆ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಮೈದಾನದಲ್ಲಿ ಮಂಗಳವಾರ ಪೊಲೀಸ್ ಧ್ವಜ ದಿನ ಆಚರಿಸಲಾಯಿತು.

ಮೈಸೂರು ನಗರ ಪೊಲೀಸ್ ಅಶ್ವ ರೋಹಿ ದಳ, ಕರ್ನಾಟಕ ಪೊಲೀಸ್ ಅಕಾಡೆಮಿ, ಜಿಲ್ಲಾ ಪೊಲೀಸ್, ಕೆಎಸ್‌ಆರ್‌ಪಿ, ಪೊಲೀಸ್ ತರಬೇತಿ ಶಾಲೆ, ರಾಜ್ಯ ಗುಪ್ತ ವಾರ್ತೆ, ಡಿಸಿಆರ್‌ಇ, ಲೋಕಾಯುಕ್ತ, ಚೆಸ್ಕಾಂ, ಐಎಸ್‌ಡಿ ಸಂಯುಕ್ತಾಶ್ರಯ ದಲ್ಲಿ ಏರ್ಪಡಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಕಮಾಂಡೆಂಟ್ ಶಿವರಾಜು ಮುಖ್ಯ ಅತಿಥಿಯಾಗಿ



ಪಾಲ್ಗೊಂಡು, ವಂದನೆ ಸ್ವೀಕರಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಅಧಿಕಾರಿಗಳು, ಸಿಬ್ಬಂದಿಗಳನ್ನು ಗೌರವಿಸುವ ಮೂಲಕ, ಸಿಬ್ಬಂದಿಯಲ್ಲಿ ಸ್ಫೂರ್ತಿ ತುಂಬುವುದೇ ಧ್ವಜ ದಿನಾಚರಣೆಯ ಮುಖ್ಯ ಉದ್ದೇಶವಾಗಿದ್ದು, ಪೊಲೀಸರ ಯೋಗಕ್ಷೇಮಕ್ಕಾಗಿ ಹಲವು ಕಾರ್ಯಕ್ರಮ ಅನುಷ್ಠಾನ ಮಾಡಿರುವುದನ್ನು ಬಳಸಿಕೊಂಡು ತಮ್ಮ ಆರೋಗ್ಯವನ್ನು ಸುಸ್ಥಿರವಾಗಿರಿಸಿಕೊಳ್ಳಿ ಎಂದರು.

ಇದೇ ವೇಳೆ 17 ಮಂದಿ ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳನ್ನು ಧ್ವಜ ಸಮರ್ಪಣೆ ಮಾಡುವ ಮೂಲಕ ಆತ್ಮೀಯವಾಗಿ ಸನ್ಮಾನಿಸಲಾಯಿತು. ಆಕರ್ಷಕ ಪಥ ಸಂಚಲನ, ಧ್ವಜಗಳ ವಿತರಣೆ ಹಾಗೂ ನಿರ್ಗಮನ ಪಥಸಂಚಲನವೂ ನಡೆಯಿತು. ದಕ್ಷಿಣ ವಲಯ ಡಿಐಜಿಪಿ ಅಮಿತ್ ಸಿಂಗ್, ಕೆಪಿಎ ನಿರ್ದೇಶಕ ಲೋಕೇಶ್ ಬಿ.ಜಗಲಾಸತ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಡಿಸಿಆರ್‌ಇ ಎಸ್ಪಿ ಬಿ.ಟಿ.ಕವಿತಾ, ಡಿಸಿಪಿ ಎಂ.ಮುತ್ತುರಾಜ್ ಕಾರ್ಯಕ್ರಮದಲ್ಲಿದ್ದರು.

ನೈಪುಣ್ಯ ಶಾಲಾ ವಾರ್ಷಿಕೋತ್ಸವದಲ್ಲಿ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಭಾಗಿ

ಮೈಸೂರು, ಏ. 2– ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಎರಡನೇ



ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಸಂಸ್ಥೆಯ ಶೈಕ್ಷಣಿಕ ಸಲಹೆಗಾರರೂ ಆದ, ಖ್ಯಾತ ಶಿಕ್ಷಣ ತಜ್ಞರು ಹಾಗೂ ಅಂಕಣಕಾರ ಡಾ। ಗುರುರಾಜ ಕರಜಗಿ ಭಾಗವಹಿಸಲಿದ್ದಾರೆ.

ಏ.5ರಂದು ಸಂಜೆ 4.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮವನ್ನು ಸಮಗ್ರ ಹಾಗೂ ಸಹೋದರ ಕರ್ನಾಟಕ ಕಲ್ಪನೆಯೊಂದಿಗೆ ರೂಪಿಸಲಾಗಿದ್ದು, ವಿದ್ಯಾರ್ಥಿಗಳು ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಮತ್ತು ಗಡಿ ರಾಜ್ಯಗಳ ಸಹೋದರತ್ವವನ್ನು ಸಾರುವ, ಅಲ್ಲಿನ ಸಾಂಸ್ಕೃತಿಕ ವಿಶಿಷ್ಟತೆಗಳನ್ನು ಸಂಯೋಜಿಸಿ, ಕಾರ್ಯಕ್ರಮವನ್ನು ಸಮರ್ಪಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವಿಶೇಷ ಆಯುಕ್ತ ಶಿವಾನಂದ ಹೆಚ್.ಕಲಕೇರಿ ಆಗಮಿಸಲಿದ್ದಾರೆ.


ಮೈಸೂರು ಜಿಲ್ಲಾ ವಕೀಲರ ಸಂಘದ ನೂತನ ಅಧ್ಯಕ್ಷ ಎಸ್.ಲೋಕೇಶ್ ಅವರನ್ನು ನಂಜನಗೂಡು ವಕೀಲರು ದಕ್ಷಿಣಕಾಶಿ ನಂಜನಗೂಡು ಪಂಚ ಮಹಾ ರಥೋತ್ಸವದ ಭಾವಚಿತ್ರ ನೀಡಿ, ಶುಭ ಕೋರಿದರು. ಈ ವೇಳೆ ಹಿರಿಯ ವಕೀಲರಾದ ಮಾದೇವಸ್ವಾಮಿ, ಕಿರಣ್‌ಕುಮಾರ್, ರಾಚಪ್ಪ, ಶಿವಾನಂದಸ್ವಾಮಿ, ಹಳಗಂಚಿ ಮಾದೇವಸ್ವಾಮಿ, ಶಿವಾನಂದಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಅಯೋಧ್ಯೆಯಿಂದ ಮರಳಿದ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥರಿಗೆ ಗುರುವಂದನೆ

ಮೈಸೂರು,ಏ.2–ಮೈಸೂರಿನ ಟಿ.ಕೆ.ಲೇಔಟ್‌ನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಅಯೋಧ್ಯೆಯಲ್ಲಿ ಬಾಲರಾಮರನ್ನು ಪ್ರತಿಷ್ಠಾಪನೆ ಮಾಡಿ, 48 ದಿನಗಳ ಮಂಡಲೋತ್ಸವ ಹಾಗೂ ಮಂಗಳೋತ್ಸವ ಪೂರೈಸಿ ಮೈಸೂರಿಗೆ ಆಗಮಿಸಿದ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥರಿಗೆ ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ನೇತೃತ್ವದಲ್ಲಿ ಗುರುವಂದನೆ ಸಲ್ಲಿಸಲಾಯಿತು.

ಬಳಿಕ ಡಿ.ಟಿ.ಪ್ರಕಾಶ್ ಮಾತನಾಡಿ, ಅಯೋಧ್ಯೆಯಲ್ಲಿ ಬಾಲ ರಾಮನ ಪ್ರಾಣ ಪ್ರತಿಷ್ಠೆ ನಂತರ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀ ಪಾದರ ನೇತೃತ್ವದಲ್ಲಿ ಅಯೋಧ್ಯೆಯಲ್ಲಿ ಜನವರಿ 30ರಿಂದ ಮಾರ್ಚ್ 11ವರೆಗೆ ಶ್ರದ್ಧಾಭಕ್ತಿಯಿಂದ ಮಂಡಲ ಪೂಜೆ ನೆರವೇರಿದೆ. ಇದೀಗ ಆ ಪವಿತ್ರ ಕ್ಷೇತ್ರದಿಂದ



ಆಗಮಿಸಿರುವ ಶ್ರೇಷ್ಠ ಸಂತರಾದ ಶ್ರೀಗಳಿಗೆ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಎಲ್ಲಾ ಪದಾಧಿಕಾರಿಗಳ ಪರವಾಗಿ ಅಭಿನಂದಿಸುತ್ತಿರುವುದು ನಮ್ಮ ಸುಯೋಗ. ಅಯೋಧ್ಯೆಯಲ್ಲಿ ರಾಮದೇವರ ಪ್ರತಿಷ್ಠೆಯ ವೇಳೆ ಪ್ರಧಾನಿ ಮೋದಿ ಅವರ ಪಕ್ಕದಲ್ಲಿ ನಿಂತು ಪ್ರತಿಮೆಗೆ ಪ್ರಾಣ ಪ್ರತಿಷ್ಠೆ ಮಾಡಿದ ಪೇಜಾವರ ಶ್ರೀಗಳನ್ನು ಕಂಡು ಕನ್ನಡಿಗರು ರೋಮಾಂಚನಗೊಂಡಿದ್ದರು. ಸಾಂಸ್ಕೃತಿಕ ಪುನರುತ್ಥಾನದ ಕಾಲಘಟ್ಟದಲ್ಲಿ ಶ್ರೀಗಳ ಈ ಮಹತ್ವದ ಪಾತ್ರ ಎಲ್ಲರ ಗಮನಸೆಳೆದಿತ್ತು ಎಂದರು. ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಉದ್ಯಮಿ ಅಪೂರ್ವ ಸುರೇಶ್, ಡಾ.ಕೆಚಕ್ರಪಾಣಿ, ಎಸ್.ಬಿ.ವಾಸುದೇವ ಮೂರ್ತಿ, ಮಿರ್ಲೆ ಪನೀಶ್, ಸುಚಿಂದ್ರ, ಮಂಜುನಾಥ್ ಹಾಗೂ ಭಕ್ತಾದಿಗಳು ಇದ್ದರು.

ಬೈಕ್‌ಗಳ ನಡುವೆ ಡಿಕ್ಕಿ: ಬಂಡೀಪುರ ಸಫಾರಿ ಬಸ್ ಚಾಲಕ ಸಾವು

ಸಫಾರಿ ಕ್ಯಾಂಪಸ್ ಮುಂದೆಯೇ ಕಳೆದ ರಾತ್ರಿ ನಡೆದ ಘಟನೆ

ಬಂಡೀಪುರ, ಏ.2(ಎಂಟಿವೈ)– ಎರಡು ಬೈಕ್‌ಗಳ ನಡುವೆ ಅಪಘಾತ ಸಂಭವಿಸಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಬಸ್ ಚಾಲಕ ಮೃತಪಟ್ಟಿದ್ದಾರೆ. ಈ ದುರಂತ ಕಳೆದ ರಾತ್ರಿ ಬಂಡೀಪುರದ ಸಫಾರಿ ಕ್ಯಾಂಪಸ್ ಮುಂಭಾಗ ಸಂಭವಿಸಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಕೆಲ್ಲಿಪುರದ ನಿವಾಸಿ ಮಹದೇವಪ್ಪ ಎಂಬುವರ ಮಗ ಎಂ.ಕೆ.ಆನಂದ್(37) ಬೈಕ್ ಅಪಘಾತದಲ್ಲಿ ಮೃತಪಟ್ಟ ಅರಣ್ಯ ಸಿಬ್ಬಂದಿ. ಗುಂಡ್ಲುಪೇಟೆ ತಾಲೂಕಿನ ಮೇಲುಕಾಮನಹಳ್ಳಿ ಬಳಿ ಇರುವ ಬಂಡೀಪುರ ಸಫಾರಿ ಕೇಂದ್ರದ ಬಳಿಯಿರುವ ಕ್ವಾಟ್ರಸ್‌ನಿಂದ ಕ್ಯಾನ್‌ಗಳಲ್ಲಿ ನೀರು ತರಲು ಮೇಲುಕಾಮನಹಳ್ಳಿ ಕಡೆಗೆ ಹೋಗಲು ಆನಂದ್ ತನ್ನ ಬೈಕ್(ಕೆಎ.10, ಇಡಿ.1629)ನಲ್ಲಿ ಕಳೆದ ರಾತ್ರಿ 8.25ರಲ್ಲಿ ಮುಖ್ಯ ರಸ್ತೆಗೆ ಬಂದಾಗ ಈ ದುರ್ಘಟನೆ ಸಂಭವಿಸಿದೆ.

ಮೇಲುಕಾಮನಹಳ್ಳಿ ಕಡೆಯಿಂದ ಗುಂಡ್ಲುಪೇಟೆ ಕಡೆಗೆ ವೇಗವಾಗಿ ಪಲ್ಸರ್ ಬೈಕ್‌ನಲ್ಲಿ (ಕೆಎ.10, ಇಎ.9665) ಬರುತ್ತಿದ್ದ ಅದೇ ಗ್ರಾಮದ ನಿವಾಸಿಗಳಾದ ನವೀನ್(32), ಕುಮಾರ್(40) ನಿಯಂತ್ರಣ ಕಳೆದುಕೊಂಡು ಆನಂದ್ ಅವರ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಇದರಿಂದ ಸಫಾರಿ ಬಸ್ ಚಾಲಕ ಆನಂದ್‌ಗೆ ತಲೆ, ಮುಖಕ್ಕೆ ಗಂಭೀರವಾದ ಗಾಯಗಳಾಗಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.


ಎಂ.ಕೆ.ಆನಂದ್

ಪಲ್ಸರ್ ಸವಾರ ನವೀನ್ ಅವರಿಗೂ ಗಾಯ ಗಳಾಗಿದ್ದರೆ, ಹಿಂಬದಿ ಸವಾರ ಕುಮಾರ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇಬ್ಬರನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತ ಆನಂದ್ ಅವರಿಗೆ ಐದು ಹಾಗೂ ಎರಡೂವರೆ ವರ್ಷದ ಗಂಡು ಮಕ್ಕಳು, ಪತ್ನಿ, ತಂದೆ, ತಾಯಿ ಇದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಪ್ರಭಾಕರನ್, ಎಸಿಎಫ್ ನವೀನ್‌ಕುಮಾರ್, ಆರ್‌ಎಫ್‌ಓಗಳಾದ ಮಂಜುನಾಥ್, ದೀಪಾ, ಡಿಆರ್‌ಎಫ್‌ಓ ಗಜೇಂದ್ರ, ಸಿದ್ದುಹರಿ, ನೇತ್ರಾವತಿ, ಜ್ಞಾನಶೇಖರ್, ತಿಮ್ಮರಾಜು, ಕಾರ್ತಿಕ್, ಮಂಜು, ಸಫಾರಿ ಕೇಂದ್ರದ ಸಿಬ್ಬಂದಿಗಳು, ಸಫಾರಿ ಬಸ್, ಜೀಪ್ ಚಾಲಕರು, ಗಾರ್ಡ್, ವಾಚರ್ ಸೇರಿದಂತೆ ಸಿಬ್ಬಂದಿ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರು. ಈ ನಿಮಿತ್ತ ಮಧ್ಯಾಹ್ನದ ಸಫಾರಿಯನ್ನು ಸ್ಥಗಿತಗೊಳಿಸಲಾಗಿತ್ತು.


ನಗರಪಾಲಿಕೆಯಿಂದ ಆಸ್ತಿ ತೆರಿಗೆ ಹೆಚ್ಚಿಸಿಲ್ಲ: ಕಮಿಷ್ನರ್

ಮೈಸೂರು, ಏ.2(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆಯಿಂದ 2024–25ನೇ ಸಾಲಿಗೆ ಆಸ್ತಿ ತೆರಿಗೆ ದರ ಹೆಚ್ಚಿಸಿಲ್ಲ ಎಂದು ಪಾಲಿಕೆ ಆಯುಕ್ತರಾದ ಡಾ. ಎನ್.ಎನ್.ಮಧು ಅವರು ಸ್ಪಷ್ಟಪಡಿಸಿದ್ದಾರೆ.


ಡಾ.ಎನ್.ಎನ್.ಮಧು

ಈ ಕುರಿತು ಸ್ಪಷ್ಟೀಕರಣ ನೀಡಿರುವ ಅವರು, ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆಯು ದರ ಹೆಚ್ಚುವರಿ ಮಾಡಿರುವುದಿಲ್ಲ ಎಂದು ತಿಳಿಸಿದ್ದಾರೆ. ಆದರೆ, ರಾಜ್ಯ ಸರ್ಕಾರವು ರಾಜ್ಯಾದ್ಯಂತ 2023ರ ಅಕ್ಟೋಬರ್ ಮಾಹೆಯಿಂದ ಅನ್ವಯವಾಗುವಂತೆ 2023ರ ಸೆಪ್ಟೆಂಬರ್ ಮಾಹೆಯಲ್ಲಿ ಆಸ್ತಿಗಳ ಮಾರ್ಗಸೂಚಿ ಮೌಲ್ಯ (ಗೈಡ್ಲೆನ್ಸ್ ವ್ಯಾಲ್ಯೂ) ಹೆಚ್ಚಿಸಿರುವುದರಿಂದ ಸಹಜವಾಗಿಯೇ ಅದರನ್ವಯ ಆಸ್ತಿ ತೆರಿಗೆ ಲೆಕ್ಕಾಚಾರ ಮಾಡುವುದರಿಂದ ಪ್ರಸಕ್ತ ಸಾಲಿನ ಏ.1ರಿಂದ ಆಸ್ತಿ ತೆರಿಗೆ ದರವೂ ಹೆಚ್ಚಾಗಲಿದೆ ಎಂಬುದಿಲ್ಲಿ ಗಮನಾರ್ಹ ವಿಚಾರ. ಈ ಸಂಬಂಧ ಮಂಗಳವಾರ 'ಮೈಸೂರು ಮಿತ್ರ'ನಲ್ಲಿ ವರದಿ ಪ್ರಕಟವಾಗಿತ್ತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.04.2024 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ,
ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಚಿತ್ರಕಲಾ ಶಿಬಿರ, ಅಧ್ಯಕ್ಷತೆ: ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಉದ್ಘಾಟನೆ: ಗ್ರಾಫಿಕ್ ವಿಭಾಗದ ರೀಡರ್ ಎ.ಪಿ.ಚಂದ್ರಶೇಖರ, ಮುಖ್ಯ ಅತಿಥಿಗಳು: ಪತ್ರಕರ್ತ ಎಂ.ಆರ್.ಸತ್ಯನಾರಾಯಣ, ಉಪಸ್ಥಿತರು: ಹಿರಿಯ ಕಲಾವಿದ ಎಸ್.ಎಂ. ಜಂಬುಕೇಶ್ವರ, ಸ್ಥಳ: ಜೆಎಸ್‌ಎಸ್ ಬಾಲಜಗತ್ ಶಾಲೆ ಆವರಣ, ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಬಿ.ಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರು ನರ (ವೆರಿಕೋಸ್ ವೈನ್), ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯಿಡ್, ಮೊಣಕಾಲು ನೋವು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸತ್ಯನಾರಾಯಣ ಸನ್ನಿಧಿ, ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ರಿಂದ

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯಿ ಶಾರದಾ ಪೀಠ, ಶೃಂಗೇರಿ:** ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ, ಬೆಳಗ್ಗೆ 8.30ಕ್ಕೆ ವೇದಸಭೆಯ ಪ್ರಾರಂಭ, ಬೆಳಗ್ಗೆ 9ಕ್ಕೆ ಗೀತಾ ರಸ್ತೆಯ ಶ್ರೀ ಪ್ರಸನ್ನ ವಿಶ್ವೇಶ್ವರ ದೇವಸ್ಥಾನದಲ್ಲಿ ಕುಂಭಾಭಿಷೇಕ, ಬೆಳಗ್ಗೆ 10.30ಕ್ಕೆ ಸಾರ್ವಜನಿಕ ದರ್ಶನ ಪಾದಪೂಜೆ ಮತ್ತು ಭಿಕ್ಷಾವಂದನೆ, ಸಂಜೆ 4.30ಕ್ಕೆ ವಿವಿಧ ದೇವಾಲಯಗಳು ಹಾಗೂ ಸಂಘ ಸಂಸ್ಥೆಗಳಿಗೆ ಭೇಟಿ, ಸಂಜೆ 5.30ಕ್ಕೆ ಶಾಸ್ತ್ರ ಸಭೆ ಹಾಗೂ ವೇದಸಭೆಗಳ ಸಮಾರೋಪ, ರಾತ್ರಿ 7 ರಿಂದ ವಿದ್ವಾನ್ ಮೈಸೂರು ಎನ್.ಶ್ರೀನಾಥ್ ಅವರಿಂದ ಗಾಯನ, ವಿದ್ವಾನ್ ಅಮೋಘ್ ನಾದದೂರ್–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ರಾತ್ರಿ 8.30ಕ್ಕೆ ಚಂದ್ರಮೌಳೇಶ್ವರ ಪೂಜೆ, ಸ್ಥಳ:ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ:** ಡಾ.ರಾಜ್‌ಕುಮಾರ್ ಸ್ಮಾರಕ ಅಂತರ ಕಾಲೇಜು ಗೀತ ಗಾಯನ ಸ್ಪರ್ಧೆ, ಉದ್ಘಾಟನೆ: ಮಹಾರಾಜ ಕಾಲೇಜು ನಿಕಟಪೂರ್ವ ಪ್ರಾಂಶುಪಾಲ ಪ್ರೊ. ಸಿ.ಎ.ಶ್ರೀಧರ್, ಮುಖ್ಯ ಅತಿಥಿಗಳು: ಹಿರಿಯ ಸಾಹಿತಿ ಕಾ.ತ.ಚಿಕ್ಕಣ್ಣ, ಅಧ್ಯಕ್ಷತೆ: ಪ್ರಾಂಶುಪಾಲ ಪ್ರೊ. ಎಚ್.ಸೋಮಶೇಖರಪ್ಪ, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಸಂಚಾಲಕ ಪ್ರೊ.ಸಿ.ಈ. ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** ಸಮಾಜ ವಿಜ್ಞಾನ ಸಂಶೋಧನಾ ವಿಧಾನಗಳು: ಪ್ರಸ್ತುತ ಪ್ರವೃತ್ತಗಳು ಮತ್ತು ಮುಂದಿನ ದಾರಿ ಕುರಿತು ಆರು ದಿನಗಳ ಕಾರ್ಯಾಗಾರ, ಬೆಳಗ್ಗೆ 10ಕ್ಕೆ ಗೋಷ್ಠಿ–8 ವಿಷಯ : ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ಬಹು ವಿಧಾನಗಳ ಅಳವಡಿಕೆ, ಉಪಸ್ಥಿತರು : ಹರಿಯಾಣ ಜಿಂದಾಲ್ ಗ್ಲೋಬಲ್ ವಿಶ್ವವಿದ್ಯಾ ನಿಲಯದ ಪ್ರೊ. ಸುಮಿತ್ ಮಷ್ಕರ್, ಬೆಳಗ್ಗೆ 11.45ಕ್ಕೆ ಗೋಷ್ಠಿ–9 ವಿಷಯ : ಕ್ಷೇತ್ರ ಅಧ್ಯಯನಗಳು, ಉಪಸ್ಥಿತರು : ದಕ್ಷಿಣ ವಲಯ, ಭಾರತದ ಮಾನವಶಾಸ್ತ್ರೀಯ ಸಮೀಕ್ಷೆ ವಿಶ್ರಾಂತ ನಿರ್ದೇಶಕ ಪ್ರೊ. ಪಿ.ಕೆ. ಮಿಶ್ರಾ, ಮಧ್ಯಾಹ್ನ 2ಕ್ಕೆ ಗೋಷ್ಠಿ–10, ವಿಷಯ : ಸಂಶೋಧನಾ ಮನೋಭಾವ, ಉಪಸ್ಥಿತರು: ಮೈಸೂರು ವಿವಿ ಮನೋವಿಜ್ಞಾನದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಜಿ. ವೆಂಕಟೇಶ್‌ಕುಮಾರ್, ಮಧ್ಯಾಹ್ನ 3.45ಕ್ಕೆ ಗೋಷ್ಠಿ–11, ವಿಷಯ : ಅಂಕೀಯ ಯುಗದಲ್ಲಿ ಸಂಚರಿಸುವುದು : ಪಿಪಿಟಿಗಳ ಪ್ರಸ್ತುತಿಯಲ್ಲಿ ಪರಿಣಿತಿಯನ್ನು ಪಡೆಯುವುದು ಮತ್ತು ಮೂಲ ವಿಷಯಗಳ ಸೂಕ್ತ ಉಲ್ಲೇಖ, ಉಪಸ್ಥಿತರು : ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರೊ. ಎನ್.ಎಸ್. ಹರಿನಾರಾಯಣ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ಶ್ರೀರಾಘವೇಂದ್ರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ–ಎನ್.ಎನ್.ಸುರೇಂದ್ರನಾಥ್ ಸಾತ್ವಿಕ್, 6.40 ಪದಸಂಸ್ಕೃತಿ–ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, 9.00 ವೃತ್ತಿ ಮಾರ್ಗದರ್ಶನ–ಮನೋವೈದ್ಯಕೀಯ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ರವೀಶ್ ಬಿ.ಎನ್.ಅವರೊಂದಿಗೆ ಸಂದರ್ಶನ, 10.00 ಪಂಡಿತ್ ರಾಜೇಂದ್ರ ಪ್ರಸನ್ನ–ಬಾನ್ಸುರಿ ವಾದನ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.35 ದೇವರನಾಮ–ಎನ್.ಶ್ರೀನಾಥ್, 12.45 ಜನಪದ ಸಂಗೀತ, 1.00 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕಾರ್ಯಕ್ರಮ, 1.20 ಭಾವಗೀತೆಗಳು–ಜಯಂತಿ ವಿ ಭಟ್, 3.00 ಎಂ.ಎಸ್.ಅನಂತರಾಮನ್–ವಯೋಲಿನ್, 4.00 ಮಹಿಳಾರಂಗ 'ಸ್ತ್ರೀ ಚೇತನ'. ಭಾಗವಹಿಸುವವರು ಲೇಖಕಿ ಹಾಗೂ ಉದ್ಯಮಿ ಸುಚಿತ್ರಾ ಹೆಗಡೆ, 4.45 ಹಿಂದಿ ಪಾಠ, ಪ್ರಸ್ತುತಿ– ಕಿಶೋರ್ ಎಂ. ಕಾಕಡೆ, 6.50 ಕೃಷಿರಂಗ–ಸಾವಯವ ವಿಧಾನದಲ್ಲಿ ಗೊಣ್ಣುಹುಳು ಹಾಗೂ ಗೆದ್ದಲಿನ ನಿರ್ವಹಣೆ ಕುರಿತು ಡಾ.ಟಿ. ಶಿವಶಂಕರ್ ಅವರೊಂದಿಗೆ ಸಂದರ್ಶನ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಲೋಕ್ ಪ್ರಸಾರಕ್ ಕೆ ಸಾಥ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 3 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 345 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಎಂ ಕುರ್ಚಿಗಾಗಿ ಹೋರಾಟ

ಒಬ್ಬರು ಕುರ್ಚಿ ಉಳಿಸಿಕೊಳ್ಳಲು ಹೋರಾಡಿದರೆ ಮತ್ತೊಬ್ಬರು ಅದನ್ನು ಕಿತ್ತುಕೊಳ್ಳಲು ಹೋರಾಡುತ್ತಿದ್ದಾರೆ!

● ಕೇಂದ್ರ ಗೃಹ ಸಚಿವ ಅಮಿತ್ ಷಾ ವ್ಯಂಗ್ಯ ● ಬರ ಪರಿಸ್ಥಿತಿಯಲ್ಲೂ ಜನರ ಮರೆತಿರುವ ಬಗ್ಗೆ ತರಾಟೆ ● ದಿನ ಬೆಳಗಾದರೆ ಪ್ರಧಾನಿ ಮೋದಿ ಟೀಕಿಸುವುದನ್ನ ಬಿಟ್ಟರೆ ಅಭಿವೃದ್ಧಿ ಕಡೆ ಗಮನವಿಲ್ಲ ● ಬೆಂಗಳೂರು ಅರಮನೆ ಆವರಣದಲ್ಲಿ ಕಾರ್ಯಕರ್ತರ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ



ಕೇಂದ್ರ ಗೃಹ ಸಚಿವ ಅಮಿತ್ ಷಾ ಲೋಕಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿಗಳ ಪರ ಶಕ್ತಿಪ್ರದರ್ಶನ ಮಾಡಿದರು.

ಬೆಂಗಳೂರು, ಏ.2(ಕೆಎಂಶಿ)– ಕರ್ನಾಟಕದಲ್ಲಿ ಒಬ್ಬರು ಕುರ್ಚಿ ಉಳಿಸಿಕೊಳ್ಳಲು ಹೋರಾಟ ನಡೆಸಿದರೆ, ಇನ್ನೊಬ್ಬರು ಕುರ್ಚಿ ಕಿತ್ತುಕೊಳ್ಳಲು ಹೋರಾಟ ಮಾಡಿಕೊಂಡು ಜನರನ್ನು ಮರೆತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಿದ್ದರಾಮಯ್ಯ ಪ್ರತಿನಿತ್ಯ ಅಧಿಕಾರ ಉಳಿಸಿಕೊಳ್ಳಲು ತಲ್ಲೀನರಾಗಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಗಾದಿ ಹೇಗೆ ಪಡೆಯಬೇಕೆಂಬ ಚಿಂತನೆಯಲ್ಲಿದ್ದಾರೆ. ಇಂತಹವರು ಒಳ್ಳೆ ಸರ್ಕಾರ ನೀಡಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಕರ್ನಾಟಕದಲ್ಲಿ ಬರ ತಾಂಡವವಾಡುತ್ತಿದೆ, ಜನ ಸಂಕಷ್ಟದಲ್ಲಿ ಇದ್ದಾರೆ. ಅತ್ತ ಗಮನ ಕೊಡದ ಈ ನಾಯಕರು ಕುರ್ಚಿಯನ್ನು ಒಬ್ಬರು ಮೇಲೆ ಹಿಡಿದುಕೊಂಡರೆ, ಇನ್ನೊಬ್ಬರು ಕೆಳಗೆ ಹಿಡಿದುಕೊಂಡಿದ್ದಾರೆ. ಇವರು ಜನರ ಕಷ್ಟಕ್ಕೆ ಸ್ಪಂದಿಸುತ್ತಾರಾ ಎಂದರು.

ದಿನ ಬೆಳಗಾದರೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರವನ್ನು ಟೀಕಿಸುವುದನ್ನು ಬಿಟ್ಟರೆ ಅಭಿವೃದ್ಧಿ ಕಡೆ ಗಮನ ಹರಿಸುತ್ತಿಲ್ಲ ಎಂದು ಸಿದ್ದರಾಮಯ್ಯ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಭ್ರಷ್ಟಾಚಾರ ತಾಂಡವವಾಡುತ್ತಿದೆ, ಇದನ್ನು ಕರ್ನಾಟಕದ ಜನತೆ ಸಹಿಸುವುದಿಲ್ಲ. ಒಬ್ಬರು ● 9ನೇ ಪುಟಕ್ಕೆ

ಮೋದಿ ಮತ್ತೆ ಪ್ರಧಾನಿಯಾಗಲು ಒಗ್ಗಟ್ಟಿನಿಂದ ಕೆಲಸ ಮಾಡಿ

ಬೆಂಗಳೂರು, ಏ.2(ಕೆಎಂಶಿ)–ಒಳ ಒಪ್ಪಂದದ ರಾಜಕಾರಣವನ್ನು ದೂರವಿರಿಸಿ, ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿ ಆಗಲು ಒಗ್ಗಟ್ಟಿನಿಂದ ಕೆಲಸ ಮಾಡಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯದ ಬಿಜೆಪಿ ನಾಯಕರಿಗೆ ತಾಕೀತು ಮಾಡಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿಯ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲು ಕಳೆದ ರಾತ್ರಿ ನಗರಕ್ಕೆ ಧಾವಿಸಿದ ಅಮಿತ್ ಷಾ, ಇಂದು ಇಡೀ ದಿನ ಪ್ರತ್ಯೇಕ ಸಭೆಗಳನ್ನು ನಡೆಸಿ 28 ಕ್ಷೇತ್ರಗಳನ್ನು ಗೆಲ್ಲುವ ಗುರಿಯನ್ನು ನೀಡಿದ್ದಾರೆ. ನಗರದ ಪಂಚತಾರಾ ಹೋಟೆಲ್‌ನಲ್ಲಿ ಬಿಜೆಪಿ–ಜೆಡಿಎಸ್ ಕೋರ್ ಕಮಿಟಿ ಸದಸ್ಯರ ಸಭೆಯಲ್ಲೂ, ಎನ್‌ಡಿಎ ಕೂಟದ ● 9ನೇ ಪುಟಕ್ಕೆ

ಹೆಚ್.ಡಿ.ದೇವೇಗೌಡರ ಕುಟುಂಬದ ಯಾರೂ ಗೆಲ್ಲುವುದಿಲ್ಲ

ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಭವಿಷ್ಯ

● ದೇವೇಗೌಡ, ಕುಮಾರಸ್ವಾಮಿ ಕಣ್ಣೀರಿಗೆ ಮರುಗಬೇಡಿ ● ಆತ್ಮಗೌರವವಿದ್ದರೆ ಬಿಜೆಪಿ ಜೊತೆ ಸೇರುತ್ತಿರಲಿಲ್ಲ ● 2014ರಲ್ಲಿ ಮೋದಿ ಹೇಳಿದ್ದೇನು; 2024ರವರೆಗೆ ಮಾಡಿದ್ದೇನು ● ಮೋದಿ ಕಂಡರೆ ಬಿಜೆಪಿಯವರು ಗಡ ಗಡ ನಡುಗುತ್ತಾರೆ



ಮೈಸೂರಿನ ಹೆಬ್ಬಾಳಿನ ಅಭಿಷೇಕ್ ಸರ್ಕಲ್ ಬಳಿ ಮಂಗಳವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಗ್ಗಟ್ಟು ಪ್ರದರ್ಶಿಸಿದರು.

ಮೈಸೂರು, ಏ.2(ಬಿಎಲ್‌ಯು)– ಲೋಕಸಭಾ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಯಾರೂ ಗೆಲ್ಲುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭವಿಷ್ಯ ನುಡಿದಿದ್ದಾರೆ.

ಮೈಸೂರಿನ ಹೆಬ್ಬಾಳಿನ ಅಭಿಷೇಕ್ ಸರ್ಕಲ್ ಬಳಿ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮಂಡ್ಯದಲ್ಲಿ ದೇವೇಗೌಡರ ಸುಪುತ್ರ ಹೆಚ್.ಡಿ. ಕುಮಾರಸ್ವಾಮಿ ಗೆಲ್ಲಲ್ಲ, ಹಾಸನದಲ್ಲಿ ಮೊಮ್ಮಗ ಪ್ರಜ್ವಲ್ ಗೆಲ್ಲುವುದಿಲ್ಲ, ಬೆಂಗಳೂರು ಗ್ರಾಮಾಂತರದಲ್ಲಿ ಅಳಿಯ ಡಾ. ಮಂಜುನಾಥ್ ಗೆಲ್ಲುವುದಿಲ್ಲ ಇನ್ನು ಕೋಲಾರದಲ್ಲಿ ಕೂಡ ಜೆಡಿಎಸ್ ಗೆಲ್ಲುವುದಿಲ್ಲ ಎಂದು ಹೇಳಿದರು. ದೇವೇಗೌಡರ ಕುಟುಂಬದ ಯಾರೂ ಗೆಲ್ಲುವುದಿಲ್ಲ ಎಂಬುದು ನನಗೆ ದೊರೆತಿರುವ ಮಾಹಿತಿ. ಡಾಕ್ಟರ್ ಆಗಿದ್ದ ಮಂಜುನಾಥ್ ಅವರನ್ನು ಬಿಜೆಪಿಗೆ ತಳ್ಳಿದ್ದಾರೆ. ಇವರ್ಯಾರಿಗೂ ಗೆಲುವು ಸಾಧ್ಯವಿಲ್ಲ ಎಂದು ಹೇಳಿದರು.

ಕಣ್ಣೀರಿಗೆ ಕರಗಬೇಡಿ: ಹೆಚ್.ಡಿ.ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ ಬಂದು ಕಣ್ಣೀರು ಹಾಕಬಹುದು. ಆದರೆ ಅವರ ಕಣ್ಣೀರಿಗೆ ನೀವು ಯಾರೂ ಮರುಗಬೇಡಿ. ಏಕೆಂದರೆ ಅವರು ಹೇಳುವುದೆಲ್ಲಾ ಸುಳ್ಳು, ಆದ್ದರಿಂದ ಅವರ ಕಣ್ಣೀರಿನ ಮಾತು ನಂಬಬೇಡಿ ಎಂದು ಸಿದ್ದರಾಮಯ್ಯ ಸಲಹೆ ನೀಡಿದರು. ● 6ನೇ ಪುಟಕ್ಕೆ

ಅಮಿತ್ ಷಾ ಕರ್ನಾಟಕಕ್ಕೆ ಬರುವುದು ಕೊಡುವುದಕ್ಕೋ...! ಕಿತ್ತುಕೊಳ್ಳುವುದಕ್ಕೋ...!!

ಬೆಂಗಳೂರು, ಏ.2(ಕೆಎಂಶಿ)–ಅಮಿತ್ ಷಾ ಅವರು ಕರ್ನಾಟಕಕ್ಕೆ ಬರುವುದು ಕನ್ನಡಿಗರಿಗೆ ಕೊಡುವುದಕ್ಕೋ, ಕಿತ್ತುಕೊಳ್ಳುವುದಕ್ಕೋ! ಬರ ಪರಿಹಾರಕ್ಕೆ ಮನವಿ ಮಾಡಿ ನಾಲ್ಕು ತಿಂಗಳು ಕಳೆದಿದೆ. ನಯಾಪೈಸೆ ಕೊಟ್ಟಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಳೆ ಕೊರತೆಯಿಂದಾಗಿ ರಾಜ್ಯದ 223 ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. 33,770 ಕೋಟಿ ರೂ. ಹಾನಿಯಾಗಿದೆ. ಕನಿಷ್ಠ 17,901 ಕೋಟಿ ರೂ. ಪರಿಹಾರ ನೀಡಬೇಕೆಂಬುದು ರಾಜ್ಯದ ಬೇಡಿಕೆಯಾಗಿದೆ ಎಂದಿದ್ದಾರೆ. ರಾಜ್ಯದಲ್ಲಿ 2019ರಲ್ಲಿ ● 6ನೇ ಪುಟಕ್ಕೆ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬದಲಿಸಿದರೆ ಕಣದಿಂದ ಹಿಂದಕ್ಕೆ ಸರಿಯುವೆ



ಶಿವಮೊಗ್ಗ, ಏ.2– ಕೇಂದ್ರ ಗೃಹ ಸಚಿವ ಅಮಿತ್ ಷಾ ನನಗೆ ಕರೆ ಮಾಡಿ ದೆಹಲಿಗೆ ಬುಧವಾರ ಬರುವಂತೆ ಸೂಚಿಸಿದ್ದಾರೆ.

ನಾನೂ ಹೋಗುತ್ತಿದ್ದೇನೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ತಿಳಿಸಿದರು. ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ನಾಯಕರು ಕರೆದಾಗ ಹೋಗಬೇಕಾಗುತ್ತದೆ. ಚುನಾವಣೆಗೆ ಸ್ಪರ್ಧೆ ಮಾಡುವುದು ಬೇಡ ಎಂದು ಅಮಿತ್ ಷಾ ನನಗೆ ಸಲಹೆ ನೀಡಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬದಲಾವಣೆ ಮಾಡಿ, ನಾಳೆಯೇ ಕಣದಿಂದ ಹಿಂದಕ್ಕೆ ಸರಿಯುವೆ ಎಂದು ಅವರಿಗೆ ಹೇಳಿದ್ದೇನೆ. ದೆಹಲಿಗೆ ಬಂದಾಗ ಚುನಾವಣಾ ಕಣದಿಂದ ಹಿಂದಕ್ಕೆ ಸರಿಯುವಂತೆ ಸೂಚಿಸುವಂತಿಲ್ಲ ಎಂದು ಅಮಿತ್ ಷಾ ಅವರಿಗೆ ಹೇಳಿದ್ದೇನೆ ಎಂದರು.

ಬಿಜೆಪಿಯವರು ಒಕ್ಕಲಿಗರ ಬಿಟ್ಟು ಅರಸು ಮನೆತನಕ್ಕೆ ಟಿಕೆಟ್ ಕೊಟ್ಟಿದ್ದಾರೆ...!

ಪ್ರತಾಪ್ ಸಿಂಹಗೆ ಟಿಕೆಟ್ ತಪ್ಪಲು ದೇವೇಗೌಡರು ಕಾರಣ: ಸಚಿವ ಕೆ.ವೆಂಕಟೇಶ್

ಮೈಸೂರು, ಏ.2(ಬಿಎಲ್‌ಯು)– ಬಿಜೆಪಿಯವರು ಒಕ್ಕಲಿಗರನ್ನು ಬಿಟ್ಟು ಅರಸು ಮನೆತನಕ್ಕೆ ಟಿಕೆಟ್ ಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದ ರಾಮಯ್ಯ ಮೈಸೂರು ಹೆಬ್ಬಾಳಿನ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಒಕ್ಕಲಿಗ ಅಸ್ತ್ರ ಪ್ರಯೋಗಿಸಿದ್ದಾರೆ.

ಹಾಲಿ ಸಂಸದ ಪ್ರತಾಪ ಸಿಂಹ ಸುಳ್ಳು ಹೇಳಿದ ಕಾರಣಕ್ಕೆ ಬಿಜೆಪಿ ಟಿಕೆಟ್ ಕೊಡಲಿಲ್ಲ. ಅಷ್ಟಕ್ಕೂ ಪ್ರತಾಪ್ ಸಿಂಹ ನಮ್ಮ ಜಿಲ್ಲೆಯವರಲ್ಲ. ಹಾಸನ ಜಿಲ್ಲೆ ಸಕಲೇಶಪುರ ತಾಲೂಕಿನವರು. ಲಕ್ಷ್ಮಣ ನಮ್ಮ ಜಿಲ್ಲೆಯವರು. 200 ಪರ್ಸೆಂಟ್ ಒಕ್ಕಲಿಗರು. ನಾವು ಒಕ್ಕಲಿಗರಿಗೆ ಟಿಕೆಟ್ ನೀಡಿದ್ದೇವೆ. ಇದನ್ನು ಒಕ್ಕಲಿಗ ಸಮುದಾಯ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಗಮನ ಸೆಳೆದರು.

ದೇವೇಗೌಡರು ಕಾರಣ: ಸಂಸದ ಪ್ರತಾಪ್ ಸಿಂಹಗೆ ಬಿಜೆಪಿಯಲ್ಲಿ ಟಿಕೆಟ್ ತಪ್ಪಿಸಿದ್ದು ಬೇರ್ಯಾರು ಅಲ್ಲ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಎಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಸಹ ಆರೋಪಿಸಿದರು. ಇದೇ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಯದುವೀರ್ ಹೆಸರೇ ಇರಲಿಲ್ಲ. ಆದರೆ ಕಡೆ ಕ್ಷಣದಲ್ಲಿ ಹೆಚ್.ಡಿ.ದೇವೇಗೌಡರು ಯದುವೀರ್ ಹೆಸರು ಸೇರಿಸಿದ್ದಾರೆ. ಯದುವೀರ್ ಅವರಿಂದ ತಮ್ಮ ಪುತ್ರ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧೆ ಮಾಡುವ ಮಂಡ್ಯದಲ್ಲಿ ಹಾಗೂ ಹಾಸನದಲ್ಲಿ ಸ್ಪರ್ಧೆ ಮಾಡುತ್ತಿರುವ ಮೊಮ್ಮಗ ಪ್ರಜ್ವಲ್‌ಗೆ ಅನುಕೂಲವಾಗುತ್ತದೆ. ಅಲ್ಲಿ ಯದುವೀರ್ ಕರೆದುಕೊಂಡು ಹೋಗಿ ಪ್ರಚಾರ ಮಾಡಿಸಬಹುದು ಎಂಬ ರಾಜಕೀಯ ಲಾಭಕ್ಕಾಗಿ ಅವರನ್ನು ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತೆ ದೇವೇಗೌಡರು ತಂತ್ರಗಾರಿಕೆ ಮಾಡಿದ್ದಾರೆ.

ಜೆಡಿಎಸ್ ನವರಿಗೆ ಯಾವುದೇ ಜಾತಿ, ಧರ್ಮ, ನೀತಿ, ಸಿದ್ಧಾಂತವಿಲ್ಲ. ಸ್ವಾರ್ಥ ರಾಜಕೀಯಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ, ಯಾರ ಜೊತೆಗಾದರೂ ಹೋಗುತ್ತಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪಕ್ಕಾ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಪ್ರತಾಪ್‌ಸಿಂಹ ಬೇರೆ ಕಡೆಯಿಂದ ಬಂದವರು, ಆದರೆ ಲಕ್ಷ್ಮಣ ಇದೇ ಕ್ಷೇತ್ರದವರು. ಆದ ಕಾರಣ ಲಕ್ಷ್ಮಣ್ ಗೆಲ್ಲಿಸಿ ಎಂದರು.

ಮೈಸೂರಲ್ಲಿ ಯದುವೀರ್ ಬಿರುಸಿನ ಪ್ರಚಾರ

● ಕುಕ್ಕರಹಳ್ಳಿ ಕೆರೆಯ ಏರಿ ಮೇಲೆ ವಾಯುವಿಹಾರಿಗಳೊಂದಿಗೆ ಸಮಾಲೋಚನೆ ● ಹಿನಕಲ್‌ನಲ್ಲಿ ಮಾರಮ್ಮನ ಜಾತ್ರೆಯಲ್ಲಿ ಭಾಗಿ ● ರಂಗರಾವ್ ಅಂಡ್ ಸನ್ಸ್ ಸಂಸ್ಥೆಗೆ ಭೇಟಿ; ಬೆಂಬಲ ಯಾಚನೆ ● ದೇವರಾಜ ಮಾರುಕಟ್ಟೆಯಲ್ಲಿ ವರ್ತಕರ ಭೇಟಿ; ಸಮಾಲೋಚನೆ



ಮೈಸೂರಿನ ಹಿನಕಲ್ ಮಾರಮ್ಮ ದೇವಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿ, ದೇವಿಯ ದರ್ಶನ ಪಡೆದರು.



ಕುಕ್ಕರಹಳ್ಳಿಕೆರೆ ಆವರಣದ ಕಟ್ಟೆ ಮೇಲೆ ಕುಳಿತು ಯದುವೀರರು 'ಮೈಸೂರು ಮಿತ್ರ' ಓದುತ್ತಿರುವುದು.

ಮೈಸೂರು, ಏ.2(ಆರ್‌ಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೈಸೂರು ನಗರದ ವಿವಿಧೆಡೆ ಬಿರುಸಿನ ಪ್ರಚಾರ ನಡೆಸಿದರು. ಬೆಳಗ್ಗೆ 6.45 ಗಂಟೆಗೆ ಕುಕ್ಕರಹಳ್ಳಿ ಕೆರೆ ಬಳಿ ತೆರಳಿದ ಅವರು, ವಾಯುವಿಹಾರಿಗಳೊಂದಿಗೆ ವಿಹರಿಸಿದರು. ಯುವ ಸಮೂಹ ಯದುವೀರ್ ಅವರೊಂದಿಗೆ ವಾಕ್ ಮಾಡುವ ಮೂಲಕ ಅವರೊಂದಿಗೆ ಸಂವಾದಿಸಿ, ಬೆಂಬಲ ಸೂಚಿಸಿದರಲ್ಲದೆ, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಪ್ರತೀ ದಿನ ಒಂದೂವರೆಯಿಂದ ಎರಡು ಸಾವಿರ ಮಂದಿ ವಾಯುವಿಹಾರಕ್ಕೆ ಬರುವ ಕುಕ್ಕರಹಳ್ಳಿ ಕೆರೆಯಲ್ಲಿ ಪ್ರತಿಯೊಬ್ಬರಿಗೂ ಕೈಮುಗಿದು ಮತ ಯಾಚಿಸಿದ ಅವರು, ತಾವು ಕೇವಲ ಅರಮನೆಗೆ ಸೀಮಿತವಾಗಿ ರದೆ, ಪ್ರತಿನಿತ್ಯ ಒಂದಲ್ಲಾ ಒಂದು ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದೆ. ಚುನಾವಣೆಯಲ್ಲಿ ಸ್ಪರ್ಧಿಸಿರುವುದರಿಂದ ಈಗ ಜನರೊಂದಿಗೆ ಹೆಚ್ಚಾಗಿ ಬೆರೆಯುತ್ತಿದ್ದೇನೆ ಎಂದು ಯದುವೀರ್ ನುಡಿದರು. ಕೆರೆಯ ದಂಡೆಯ ಕಟ್ಟೆಯೊಂದರ ಮೇಲೆ ಕುಳಿತು ಮಂಗಳವಾರದ 'ಮೈಸೂರು ಮಿತ್ರ' ಪತ್ರಿಕೆಯನ್ನು ಏಕಾಗ್ರತೆಯಿಂದ ಓದಿದ ಯದುವೀರ್, ನಂತರ ಪಾರ್ಕಿನಲ್ಲಿ ವಾಯುವಿಹಾರಿಗಳನ್ನುದ್ದೇಶಿಸಿ ಮಾತನಾಡಿದರು. ಹಿರಿಯ ನಾಗರಿಕರು, ಮಹಿಳೆಯರು, ಯುವ ಸಮೂಹದೊಂದಿಗೆ ಸಮಾಲೋಚನೆ ನಡೆಸಿದರು. ನಾಳೆ (ಏ.3) ತಾವು ಪಕ್ಷದ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ತಂದೆ : ನಿಮ್ಮ ಮೇಷ್ಟ್ರು ಸಿಕ್ಕಿದ್ರು, ಅವರ ಪ್ರಶ್ನೆಗಳಿಗೆ ನೀನು ಉತ್ತರ ಕೊಡಲಿಲ್ಲವಂತೆ
ಮಗ : ಹೌದು ಡ್ಯಾಡಿ
ತಂದೆ : ಯಾಕೆ ಹಾಗೆ ಮಾಡಿದೆ?
ಮಗ : ನೀನೇ ಹೇಳಿದ್ಯಲ್ಲ ಡ್ಯಾಡಿ, ದೊಡ್ಡವರ ಎದುರಿಗೆ ಮಾತನಾಡಬಾರದು ಅಂತ

ಮೈಸೂರು ಮಿತ್ರ

ಬುಧವಾರ, 3 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಾದ ಶುದ್ಧಿಯಿಂದ, ಭಾವ ಪುಷ್ಟಿಯಿಂದ ಕೂಡಿದ ಸಂಗೀತ ಕೊಡುವ ಆನಂದವನ್ನು ಎಂತಹ ಐಶ್ವರ್ಯವೂ ಕೊಡಲಾರದು. –ಬಾನ್ಸುರಿ ವಾದಕ ಪನ್ನಾಲಾಲ್ ಘೋಷ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಲಹವೇ ಕೇಡಿಗೆ ಮೂಲ

ನಿಮ್ಮ ಪತ್ರಗಳು

■ ಪ್ರಜಾಪ್ರತಿನಿಧಿ ಸಭೆ ಜಾರಿಗೆ ತಂದ 'ಹತ್ತನೇ ಚಾಮರಾಜ ಒಡೆಯರ್' ಭಾವಚಿತ್ರ ಅಳವಡಿಸಿ

ಮಾನ್ಯರೆ,

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚು ಚರ್ಚೆಗೆ ಗ್ರಾಸವಾಗಿರುವ ವಿಷಯವೆಂದರೆ ಅದು ಭಾವಚಿತ್ರ ಅಳವಡಿಕೆ. ಇತ್ತೀಚೆಗೆ ಬೆಳಗಾವಿ ಸುವರ್ಣ ಸೌಧದಲ್ಲಿ ರಾಷ್ಟ್ರದ ಹಲವಾರು ಮಹನೀಯರ ಭಾವಚಿತ್ರಗಳ ಜೊತೆ ಸಾವರ್ಕರ್ ಭಾವಚಿತ್ರವನ್ನು ಅಳವಡಿಸಿರುವುದು ಬಹಳಷ್ಟು ಚರ್ಚೆಗೆ ಕಾರಣವಾಗಿತ್ತು. ಆದರೆ ಇಲ್ಲಿ ಕನ್ನಡಿಗರಾದ ನಾವು ಮೊದಲು ಮಾಡಬೇಕಾದದ್ದು 1881ರಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆಯನ್ನು (ವಿಧಾನಪರಿಷತ್) ಸ್ಥಾಪಿಸಿ ಪ್ರಜೆಗಳಿಗೆ ಮಾನ್ಯತೆ ನೀಡಿ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳು ಪಾತ್ರರಾಗುವಂತೆ ಮಾಡಿದ್ದು ಮಹಾರಾಜ 10ನೇ ಚಾಮರಾಜ ಒಡೆಯರ್. ಮೈಸೂರು ಅರಮನೆಯಲ್ಲಿಯೇ ಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆಯನ್ನು ನಡೆಸಿದ್ದರು. ಮುಂದುವರಿದು 1923ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅದಕ್ಕೆ ಶಾಸನಬದ್ಧ ಮಾನ್ಯತೆಯನ್ನು ನೀಡಿ ಪ್ರಜಾಪ್ರತಿನಿಧಿ ಸಭೆಯನ್ನು ಮಾನ್ಯ ಮಾಡಿದರು. ಇದರ ಆಧಾರದ ಮೇಲೆ ಅಂಬೇಡ್ಕರ್ ಅವರು ಸಂವಿಧಾನ ರಚಿಸಿದರು. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಅಳವಡಿಸಲು ಕಾರಣವಾಯಿತು. 1950ಕ್ಕಿಂತ ಮುಂಚೆ ಪ್ರಜಾಪ್ರಭುತ್ವ ಪರಿಕಲ್ಪನೆಯನ್ನು ಜಾರಿಗೆ ತಂದಿದ್ದ ಕನ್ನಡದ ಹೆಮ್ಮೆಯ ಮಹಾರಾಜರಾದ 'ಹತ್ತನೇ ಚಾಮರಾಜ ಒಡೆಯರ್' ಹಾಗೂ 'ನಾಲ್ವಡಿ ಕೃಷ್ಣರಾಜ ಒಡೆಯರ್' ಭಾವಚಿತ್ರಗಳನ್ನು ಕರ್ನಾಟಕ ವಿಧಾನಸಭೆ, ವಿಧಾನಪರಿಷತ್‌ನಲ್ಲಿ ಅಳವಡಿಸಬೇಕು. ಅಲ್ಲದೆ ಬೆಳಗಾವಿ ಸುವರ್ಣ ಸೌಧದಲ್ಲಿಯೂ ಸಹ 10ನೇ ಚಾಮರಾಜ ಒಡೆಯರ್ ಭಾವಚಿತ್ರವನ್ನು ಅಳವಡಿಸಿ ನಮ್ಮ ನಾಡಿನ ಅನರ್ಘ್ಯ ರತ್ನಗಳಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು.

– ಲಕ್ಷ್ಮಿ ಕಿಶೋರ್ ಅರಸ್, ಉಪನ್ಯಾಸಕರು, ಮೈಸೂರು

■ ಕೇಂದ್ರ ಚುನಾವಣಾ ಆಯೋಗದ ಶ್ಲಾಘನೀಯ ಕಾರ್ಯ

ಮಾನ್ಯರೆ,

ಭಾರತದಲ್ಲಿ 2024ರ ಲೋಕಸಭಾ ಚುನಾವಣೆ ದಿನದಿಂದ ದಿನಕ್ಕೆ ಕಾವೇರುತ್ತಿದ್ದು, ಅಭ್ಯರ್ಥಿಗಳು ತಮ್ಮ ಗೆಲುವಿಗಾಗಿ ನಾನಾ ರಣತಂತ್ರವನ್ನು ರೂಪಿಸುತ್ತಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಕೇಂದ್ರ ಚುನಾವಣಾ ಆಯೋಗವು ಪ್ರಜಾಪ್ರಭುತ್ವದಲ್ಲಿ ಯಾರೂ ಕೂಡ ಮತದಾನದಿಂದ ದೂರ ಉಳಿಯಬಾರದು ಎಂಬ ದೃಷ್ಟಿಯಿಂದ ಏಪ್ರಿಲ್ 19 ರಂದು ನಡೆಯುವ ಅರುಣಾಚಲ ರಾಜ್ಯದ ಗುಡ್ಡಗಾಡು ಪ್ರದೇಶದಲ್ಲಿರುವ ಚೀನಾ ಗಡಿಗೆ ಹೊಂದಿಕೊಂಡಿರುವ ಮಾಲೋಗಮ್ ಗ್ರಾಮದ ತಯಾಂಗ್ ಮಹಿಳೆಯ ಕೇವಲ ಒಂದು ಮತದಾನಕ್ಕಾಗಿ ಮತಗಟ್ಟೆ ನಿರ್ಮಾಣ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇದಕ್ಕಾಗಿ ಚುನಾವಣಾ ಸಿಬ್ಬಂದಿಗಳು 40 ಕಿಲೋಮೀಟರ್ ಕಾಲು ನಡಿಗೆಯಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಸಾಗಬೇಕಿದೆ. ಇಲ್ಲಿ ಯಾವುದೇ ರೀತಿಯ ಮೂಲಸೌಕರ್ಯಗಳು ಇರುವುದಿಲ್ಲ.

ದೇಶದ ಬಹು ಭಾಗಗಳಲ್ಲಿ ನನ್ನ ಒಂದು ಮತದಿಂದ ಅವನು ಗೆದ್ದು ಬಿಡುತ್ತಾನೆಯೇ, ದೇಶ ಬದಲಾಗಿ ಬಿಡುತ್ತದೆಯೇ? ಎಂಬ ಆಲಸ್ಯ, ಉಡಾಫೆಯ ಮಾತುಗಳಿಂದ ಅನೇಕ ಸೋಮಾರಿತನದ ವಿದ್ಯಾವಂತ ಜನರೇ ಮತಗಟ್ಟೆಯ ಕಡೆಗೆ ತಿರುಗಿ ನೋಡುವುದೇ ಇಲ್ಲ. ಇನ್ನೊಂದಷ್ಟು ಜನರು ಇದೇ ಸದವಕಾಶವೆಂದು ಭಾವಿಸಿ ಈ ರಜೆಯನ್ನು ಕುಟುಂಬದೊಂದಿಗೆ ದೂರದ ಪ್ರವಾಸಿ ತಾಣಗಳಿಗೆ ತೆರಳಿ ಮೋಜು, ಮಸ್ತಿಯಲ್ಲಿ ನಿರತರಾಗಿರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದೊಂದು ಮತಕ್ಕೂ ತನ್ನದೇ ಆದ ಮಹತ್ವವಿರುತ್ತದೆ. ಕೇವಲ ಒಂದು ಮತದಿಂದ ಸೋತವರಿದ್ದಾರೆ. ಸೋತ ಅಭ್ಯರ್ಥಿಯ ಕುಟುಂಬದವರೇ ಮತ ಚಲಾಯಿಸದೆ ಪ್ರವಾಸಕ್ಕೆ ತೆರಳಿದ ಘಟನೆ ನಡೆದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರ ಮತವು ಅತ್ಯಮೂಲ್ಯವಾಗಿರುತ್ತದೆ. ಆದ್ದರಿಂದ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿ ತಮ್ಮ ಕರ್ತವ್ಯವನ್ನು ಮೆರೆಯಿರಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

■ ಮೈತ್ರಿ ನಾಯಕರ ಹೇಳಿಕೆ ಹಾಸ್ಯಾಸ್ಪದ

ಮಾನ್ಯರೆ,

ಬಿಜೆಪಿ ಮತ್ತು ಜೆಡಿಎಸ್ ರಾಜ್ಯದಲ್ಲಿ ಮೈತ್ರಿ ಮಾಡಿಕೊಂಡಿದ್ದು, ಈ ಮೈತ್ರಿ ರಾಜ್ಯದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವಂತ ಹಿತಾಸಕ್ತಿಗಲ್ಲ ಎನ್ನುತ್ತಾರೆ ಮಾಜಿ ಸಿಎಂ ಕುಮಾರಸ್ವಾಮಿ. ಮತ್ತೊಂದೆಡೆ ಸಂಸದ ಪ್ರತಾಪ್ ಸಿಂಹ ಕಾವೇರಿಗಾಗಿ ಹೆಚ್.ಡಿ.ಕೆ ಎನ್ನುತ್ತಾರೆ. ಮೈತ್ರಿ ಮಾಡಿಕೊಂಡಿರುವುದೇ ಕೇವಲ ಮೂರು ಸೀಟು. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಇಪ್ಪತ್ತೈದು ಸೀಟು ಗೆದ್ದು ಸಂಸತ್ತಿಗೆ ಹೋದರೂ ಕಾವೇರಿಗಾಗಿ ಒಂದು ದಿನ ಹೋರಾಟ ಮಾಡಲಿಲ್ಲ. ಪ್ರಧಾನಿ ಮೋದಿಯವರ ಹತ್ತು ವರ್ಷಗಳ ಆಡಳಿತಾವಧಿಯಲ್ಲಿ ಕಾವೇರಿ ವಿಚಾರವಾಗಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಲಿಲ್ಲ. ಕುಮಾರಸ್ವಾಮಿ ಸಿಎಂ ಆಗಿಯೂ ಏನು ಮಾಡಲಿಲ್ಲ ಒಬ್ಬ ಸಾಮಾನ್ಯ ಸಂಸದನಾದರೆ ಕಾವೇರಿ ಸಮಸ್ಯೆ ಪರಿಹರಿಸಲು ಸಾಧ್ಯವೇ. ಇದನ್ನು ಜನತೆ ನಂಬಬೇಕೆ. ಕೋರ್ಟ್ ಆದೇಶದಂತೆ ತಮಿಳುನಾಡಿಗೆ ನೀರು ಬಿಟ್ಟ ಕಾಂಗ್ರೆಸ್ ವಿರುದ್ಧ ಪ್ರತಿಭಟಿಸಿದರೆ ವಿನಾ ಕೇಂದ್ರ ಸರ್ಕಾರವನ್ನು ಇವರು ಯಾರೂ ಒತ್ತಾಯಿಸಲಿಲ್ಲ. ಇಂದು ಬೆಂಗಳೂರು ಸೇರಿದಂತೆ ಕುಡಿಯುವ ನೀರಿಗೆ ಜನ ತತ್ತರಿಸುತ್ತಿದ್ದಾರೆ. ಇದಕ್ಕೆ ನಮ್ಮ ಸಂಸದರೆ ನೇರ ಕಾರಣ. ಮಂಡ್ಯದ ಜನ ಬುದ್ಧಿವಂತರಿದ್ದಾರೆ ಯಾಮಾರಿಸಲು ಸಾಧ್ಯವಿಲ್ಲ. ನಿಮಗೆ ನಿಜವಾದ ಕಾಳಜಿ ಇದ್ದರೆ ನಿಮ್ಮ ನಾಯಕರ ಕೈಯಲ್ಲಿ (ಮೋದಿ, ಅಮಿತ್ ಷಾ) ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ಶಾಶ್ವತ ಪರಿಹಾರ ಮಾಡುತ್ತೇವೆ ಎಂದು ರಾಜ್ಯದ ಜನತೆಗೆ ಮಾತು ನೀಡಲಿ. ಅದನ್ನು ಬಿಟ್ಟು ಚುನಾವಣಾ ಗಿಮಿಕ್‌ಗಾಗಿ ಮೈತ್ರಿ ರಾಜ್ಯದ ಜ್ವಲಂತ ಸಮಸ್ಯೆಗಾಗಿ, ಕುಮಾರಸ್ವಾಮಿ ಕಾವೇರಿಗಾಗಿ ಎಂದು ಹೇಳುವುದು ನಗೆಪಾಟಲು. ನಿಮ್ಮ ಹೇಳಿಕೆಗಳು ಜನ ಮೆಚ್ಚುವಂತ ಜವಾಬ್ದಾರಿಯುತ ಹೇಳಿಕೆಗಳಾಗಿರಲಿ.


–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

■ ರೈಲು ಗಾಡಿಗಳಲ್ಲಿ ಆಧುನಿಕ ಟಾಯ್ಲೆಟ್ ಅಳವಡಿಸಿ

ಮಾನ್ಯರೆ,

ಮೈಸೂರಿನಿಂದ ಬೆಂಗಳೂರಿಗೆ ಹೊರಡುವ ಬಹುತೇಕ ಎಲ್ಲಾ ರೈಲುಗಾಡಿಗಳಲ್ಲಿ ಹಳೆ ಓಬಿರಾಯನ ಕಾಲದ (ಬ್ರಿಟಿಷರ ಕಾಲದ) ಟಾಯ್ಲೆಟ್‌ಗಳ ವ್ಯವಸ್ಥೆಯೇ ಇದೆ. ರೈಲುಗಾಡಿಗಳಲ್ಲಿ ಹಿರಿಯ ನಾಗರಿಕರೇ ಹೆಚ್ಚಾಗಿ ಪ್ರಯಾಣ ಮಾಡುವುದರಿಂದ ಬಹುಪಾಲು ಜನರು ಮಂಡಿ ನೋವಿನಿಂದ ಬಳಲುತ್ತಿರುವುದರಿಂದ ಈ ಹಳೆ ಓಬಿರಾಯನ ಕಾಲದ ಟಾಯ್ಲೆಟ್‌ಗಳು ಇದ್ದು, ಇವನ್ನು ಬಳಸುವುದೇ ಒಂದು ರೀತಿಯಲ್ಲಿ ಮುಜುಗರ ಎನಿಸುತ್ತದೆ. ಇವು ಉಪಯೋಗಕ್ಕೆ ಬರುವುದಿಲ್ಲ. ಈ ಟಾಯ್ಲೆಟ್‌ಗಳನ್ನು ತೆಗೆದು, ಆಧುನಿಕ ಟಾಯ್ಲೆಟ್‌ಗಳನ್ನು (ವೆಸ್ಟರ್ನ್ ಟಾಯ್ಲೆಟ್)ಗಳನ್ನು ಅಳವಡಿಸಿ ರೈಲ್ವೇ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಿ. ಈ ಬಗ್ಗೆ ಎರಡು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಮೈಸೂರಿನಿಂದ ಹೊರಡುವ ಎರಡು, ಮೂರು ಹವಾ ನಿಯಂತ್ರಿತ ಟ್ರೈನ್‌ಗಳಿಗೆ ಮಾತ್ರ ಈ ವೆಸ್ಟರ್ನ್ ಟಾಯ್ಲೆಟ್‌ಗಳ ವ್ಯವಸ್ಥೆ ಇದೆ. ಇವೆಲ್ಲಾ ಶ್ರೀಮಂತ ವರ್ಗದವರು ಪ್ರಯಾಣಿಸುವ ಟ್ರೈನ್‌ಗಳು, ಟಾಯ್ಲೆಟ್ ವ್ಯವಸ್ಥೆಯಲ್ಲೂ ಶ್ರೀಮಂತ – ಬಡವ ಎಂಬ ವರ್ಗಭೇದ ಮಾಡಿರುವ ರೈಲ್ವೆ ಇಲಾಖೆಗೆ? ರೈಲ್ವೆ ಉನ್ನತ ಮಟ್ಟದ ಅಧಿಕಾರಿಗಳಿಗೆ ಸ್ವಲ್ಪವಾದರೂ ತಿಳುವಳಿಕೆ ಬೇಡವೇ?

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಡಾ.ಹೆಚ್.ವಿ.ನಾಗರಾಜರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಶತಮಾನದ ನವೋತ್ಸಾಹದಲ್ಲಿ ಅಭಿನವ ಶಂಕರಾಲಯ

ಭಾರತ ದೇಶದ ದಾರ್ಶನಿಕ ಕ್ಷೇತ್ರದಲ್ಲಿ ನೂತನ ದೃಷ್ಟಿಕೋನವನ್ನು ತಂದು ವೇದಾಂತ ದರ್ಶನಕ್ಕೆ ಪ್ರಾಮುಖ್ಯವನ್ನೂ, ಪ್ರಾಬಲ್ಯವನ್ನೂ ತಂದುಕೊಟ್ಟವರು ಶ್ರೀ ಆದಿಶಂಕರಾಚಾರ್ಯರು. ವೇದಾಂತ ದರ್ಶನ ಎಂದರೆ ಔಪನಿಷದ ದರ್ಶನ. ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ ವೇದಾಂತದ ದರ್ಶನದ ಆಧಾರಸ್ತಂಭಗಳು. ನಾಸ್ತಿಕಮತಗಳ ಮತ್ತು ಕೆಲವೆಡೆಗಳಲ್ಲಿ ಕರ್ಮಕಾಂಡ ಪ್ರಾಬಲ್ಯವಾದಿಗಳ ಸೊಲ್ಲನ್ನು ಅಡಗಿಸಿ ಜ್ಞಾನಕಾಂಡದ ಪ್ರಾಶಸ್ತ್ಯವನ್ನು ಪ್ರತಿಪಾದಿಸಿ ಸನಾತನ ಧರ್ಮ ಪುನರುಜ್ಜೀವಿತವಾಗುವಂತೆ ಮಾಡಿದ ಮಹಾನುಭಾವರು ಆದಿಶಂಕರಾಚಾರ್ಯರು. ಅವರು ಅತ್ಯಂತ ಪ್ರತಿಭಾಶಾಲಿಗಳಾಗಿದ್ದರು.

ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್॥

ಎಂಟು ವರ್ಷವಾಗುವಷ್ಟರಲ್ಲಿ ನಾಲ್ಕು ವೇದಗಳನ್ನು ಕಲಿತಿದ್ದವರು, ಹನ್ನೆರಡು ವರ್ಷವಾಗಿದ್ದಾಗಲೇ ಎಲ್ಲಾ ಶಾಸ್ತ್ರಗಳನ್ನು ಅರಿತಿದ್ದವರು, ಹದಿನಾರನೆಯ ವಯಸ್ಸಾಗುವ ವೇಳೆಗೆ ಭಾಷ್ಯಗಳನ್ನು ರಚಿಸಿದ್ದವರು ಎಂದರೆ ಅವರ ಪ್ರತಿಭೆಗೆ ಎಣೆ ಇದೆಯೇ? ಅವರು ಈ ಲೋಕದಲ್ಲಿದ್ದುದು ಮೂವತ್ತೆರಡು ವರ್ಷ ಮಾತ್ರ. ಸಾಮಾನ್ಯರು ಮುನ್ನೂರಿಪ್ಪತ್ತು ವರ್ಷ ಬದುಕಿದ್ದರೂ ಸಾಧಿಸಲಾಗದಷ್ಟು ಕಾರ್ಯಗಳನ್ನು ಸಾಧಿಸಿ ಅವರು ಸೃಷ್ಟಿಸಿದ ಸಂಸ್ಕೃತ ಸಾಹಿತ್ಯ ಸರಸ್ವತಿಯ ರತ್ನ ಕಿರೀಟದಂತೆ ಬೆಳಗುತ್ತಿದೆ. ಸನಾತನ ಧರ್ಮದ ಸಂರಕ್ಷಣೆಗಾಗಿ ಮತ್ತು ದೇಶದ ಸಾಂಸ್ಕೃತಿಕ ಐಕ್ಯವನ್ನು ಬಿಂಬಿಸಲು ನಾಲ್ಕು ಮಠಗಳನ್ನು ಸ್ಥಾಪಿಸಿದುದು ಆದಿಶಂಕರಾಚಾರ್ಯರ ಅದ್ಭುತ ಸಿದ್ಧಿ.


ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ

ಅವರು ದಕ್ಷಿಣ ದಿಕ್ಕಿನಲ್ಲಿ ಕರ್ನಾಟಕದ ಮಲೆನಾಡಿನ ಮಡಿಲಿನಲ್ಲಿರುವ ಪವಿತ್ರ ಶೃಂಗೇರಿಯಲ್ಲಿ ಶ್ರೀ ಚಕ್ರವನ್ನೂ ಶಾರದಾಂಬೆಯನ್ನೂ ಪ್ರತಿಷ್ಠಾಪಿಸಿ ವೇದ ವಿದ್ಯಾಕೇಂದ್ರವನ್ನು ಮಠದ ರೂಪದಲ್ಲಿ ಆರಂಭಿಸಿದರು. ತಮ್ಮ ನಾಲ್ವರು ಶಿಷ್ಯರಲ್ಲಿ ಒಬ್ಬರಾಗಿದ್ದ ಸುರೇಶ್ವರರನ್ನು ಇಲ್ಲಿ ನೆಲೆ ನಿಲ್ಲಿಸಿದರು. ಆದಿಶಂಕರಾಚಾರ್ಯರಿಂದ ನಿರೂಪಿತವಾದ ಅದ್ವೈತ ಸಿದ್ಧಾಂತವನ್ನು ತಮ್ಮ ಗ್ರಂಥಗಳಿಂದ ಸುಸ್ಥಿರವಾಗಿ ಮಾಡಿದವರು ಸುರೇಶ್ವರರು. ಸುರೇಶ್ವರರು ಆದಿಶಂಕರಾಚಾರ್ಯರ ಸಾಕ್ಷಾತ್ ಶಿಷ್ಯರೆಂಬುದಕ್ಕೆ ಅವರಿಂದ ರಚಿತವಾದ ನೈಷ್ಕರ್ಮ್ಯಸಿದ್ಧಿ ಎಂಬ ಗ್ರಂಥದಲ್ಲಿರುವ ಪದ್ಯ ಸ್ಪಷ್ಟ ಪ್ರಮಾಣವಾಗಿದೆ.

ಶ್ರೀ ಮಚ್ಛಂಕರಪಾದಪದ್ಮಯುಗಲಂ ಸಂಸೇವ್ಯ ಲಬ್ಧೋಚಿವಾನ್
ಜ್ಞಾನಂ ಪಾರಮಹಂಸ್ಯಮೇತದಮಲಂ
ಸ್ವಾಂತಾಂಧಕಾರಾಪನುತ್ ।
ಮಾ ಭೂದತ್ರ ವಿರೋಧಿನೀ ಮತಿರತಃ ಸದ್ಭಿಃ ಪರೀಕ್ಷ್ಯಂ ಬುಧೈಃ
ಸರ್ವತ್ರೈವ ವಿಶುದ್ಧಯೇ ಮತಮಿದಂ ಸಂತಃ ಪರಂ ಕಾರಣಮ್॥

ಶ್ರೀ ಶಂಕರಾಚಾರ್ಯರ ಪಾದಪದ್ಮಗಳ ಸೇವೆಯನ್ನು ಮಾಡಿ ಇಲ್ಲಿ ಪರಮಹಂಸ ಸಮ್ಮತವಾದ ಜ್ಞಾನವನ್ನು ಹೇಳಿದ್ದೇನೆ ಎಂದು ಹೇಳಿರುವುದನ್ನು ಗಮನಿಸಬೇಕು.

ಶೃಂಗೇರಿ ಪೀಠದ ಪ್ರಥಮ ಗುರುಗಳಾಗಿದ್ದ ಸುರೇಶ್ವರರು ನೈಷ್ಕರ್ಮ್ಯಸಿದ್ಧಿ, ಬೃಹದಾರಣ್ಯಕೋಪನಿಷದ್ ಭಾಷ್ಯವಾರ್ತಿಕ, ತೈತ್ತಿರೀಯೋಪನಿಷದ್ ಭಾಷ್ಯ ವಾರ್ತಿಕ, ಪಂಚೀಕರಣ ವಾರ್ತಿಕ, ದಕ್ಷಿಣಾಮೂರ್ತಿ ಸ್ತೋತ್ರದ ಮಾನಸೋಲ್ಲಾಸ ಎಂಬ ವ್ಯಾಖ್ಯಾನ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಈ ಎಲ್ಲಾ ಗ್ರಂಥಗಳೂ ಆದಿಶಂಕರಾಚಾರ್ಯಕೃತ ಗ್ರಂಥಗಳ ವ್ಯಾಖ್ಯಾನ ಅಥವಾ ವಿವರಣೆಯ ರೂಪದಲ್ಲಿವೆ. ಈ ಪರಂಪರೆಯನ್ನು ಅನುಸರಿಸಿ ಮುಂದಿನ ಗುರುಗಳೂ ಗ್ರಂಥ ರಚನೆಯಿಂದ



ಶೃಂಗೇರಿ ಪೀಠದ ಗರಿಮೆಯನ್ನು ಎತ್ತಿ ಹಿಡಿದಿದ್ದಾರೆ.

ಈ ಪರಂಪರೆಯಲ್ಲಿ ಮುಖ್ಯವಾಗಿ ಉಲ್ಲೇಖನೀಯವಾದದ್ದು ಶ್ರೀ ವಿದ್ಯಾರಣ್ಯರ ಹೆಸರು. ವಿಜಯನಗರ ಸಾಮ್ರಾಜ್ಯದ ಉನ್ನತಿಯ ಕಾಲದಲ್ಲಿ, ಕ್ರಿ.ಶ. ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಬುಕ್ಕರಾಯನು ರಾಜ್ಯವನ್ನು ಆಳುತ್ತಿದ್ದಾಗ ಅವನ ಮಂತ್ರಿಗಳಾಗಿದ್ದ ಮಾಧವಾಚಾರ್ಯರೇ ಸಂನ್ಯಾಸವನ್ನು ಸ್ವೀಕರಿಸಿದ ಮೇಲೆ ವಿದ್ಯಾರಣ್ಯ ಎಂಬ ಹೆಸರನ್ನು ಪಡೆದು ಶೃಂಗೇರಿ ಪೀಠವನ್ನು ಅಲಂಕರಿಸಿದ್ದರು. ಇವರೂ ಇವರ ಪೂರ್ವಾಶ್ರಮದ ಅನುಜರಾಗಿದ್ದ ಸಾಯಣಾಚಾರ್ಯರೂ ರಚಿಸಿದ ಗ್ರಂಥಗಳು ಅನೇಕ ವಿದ್ಯಾರಣ್ಯ ವಿರಚಿತವೆಂದು ಪ್ರಸಿದ್ಧವಾಗಿರುವ ಗ್ರಂಥಗಳಲ್ಲಿ **ಜೀವನ್ಮುಕ್ತಿ ವಿವೇಕ ಮತ್ತು ವೇದಾಂತ ಪಂಚದಶೀ** ಎಂಬ ಗ್ರಂಥಗಳು ಪ್ರಮುಖವಾಗಿವೆ.

ಶೃಂಗೇರೀ ಗುರು ಪರಂಪರೆಯಲ್ಲಿ ಮೂವತ್ತೆರಡನೆಯವರಾಗಿದ್ದ ಪೂಜ್ಯ ಶ್ರೀ ನೃಸಿಂಹ ಭಾರತೀ ಮಹಾಸ್ವಾಮಿಗಳ ಕರಕಮಲಸಂಜಾತರಾಗಿ ಮೂವತ್ತ ಮೂರನೆಯ ಜಗದ್ಗುರುಗಳಾಗಿದ್ದವರು. **ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳು**. 1858ರಲ್ಲಿ ಇವರು ಮೈಸೂರಿನಲ್ಲಿ ಜನಿಸಿದರು. ಮಗುವಿಗೆ ಶಿವಸ್ವಾಮಿ ಎಂಬ ಹೆಸರನ್ನಿಟ್ಟಿದ್ದರು. ಆಗ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದವರು ಮುಮ್ಮಡಿ ಕೃಷ್ಣರಾಜ ಒಡೆಯರ್. ಶೃಂಗೇರಿಯ ಜಗದ್ಗುರುಗಳಲ್ಲಿ ಮಹಾರಾಜರಿಗೆ ಅತಿಶಯ ಭಕ್ತಿಯಿತ್ತು. 1868ರಲ್ಲಿ, ಎಂದರೆ ತಮ್ಮ ಶಿಷ್ಯನ ಎಂಟನೆಯ ವಯಸ್ಸಿನಲ್ಲಿ ಸಂನ್ಯಾಸ ದೀಕ್ಷೆಯನ್ನು ಕೊಟ್ಟು ಶಿಷ್ಯ ಸ್ವೀಕಾರವನ್ನು ಮಾಡಲು ಶ್ರೀ ನೃಸಿಂಹಭಾರತೀ ಸ್ವಾಮಿಗಳು ನಿರ್ಧರಿಸಿದಾಗ ಮಹಾರಾಜರು ಸಂತೋಷಪಟ್ಟು ಅರಮನೆಯ ಕೋಟೆಯ ಒಳಗೇ ಇರುವ ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನದಲ್ಲಿ ಶಿಷ್ಯ ಸ್ವೀಕಾರ ಸಮಾರಂಭವು ನೆರವೇರಲೆಂದು ಸೂಚಿಸಿದರು. ಸಂನ್ಯಾಸವನ್ನು ಆಗ ಸ್ವೀಕರಿಸಲಿದ್ದ ವಟುವಿನ ತಂದೆ ಸುಪ್ರಸಿದ್ಧ ವಿದ್ವಾಂಸರಾಗಿದ್ದ, ಮಹಾರಾಜರಿಗೆ ಆಪ್ತ ಮಾರ್ಗದರ್ಶಕರಾಗಿದ್ದ ಶ್ರೀ ಕುಣಿಗಲ್ ರಾಮಶಾಸ್ತ್ರಿಗಳು ಮತ್ತು ಅವರ ಧರ್ಮಪತ್ನಿ, ವಟುವಿನ ತಾಯಿ ಶ್ರೀಮತಿ ಲಕ್ಷ್ಮಮ್ಮನವರು. ಶಾಸ್ತ್ರೋಕ್ತವಾಗಿ ಸಂನ್ಯಾಸಾಶ್ರಮ ಸ್ವೀಕಾರವು ಜರುಗಿತು. ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳು ಶೃಂಗೇರೀ ಗುರುಪರಂಪರೆಯ ಮೂವತ್ತ ಮೂರನೆಯ ಜಗದ್ಗುರುಗಳಾದರು. ಇವರ ಕಾಲದಲ್ಲೇ ವೈಶಾಖ ಶುದ್ಧ ಪಂಚಮಿಯಂದು ಶಂಕರ ಜಯಂತಿಯನ್ನು ವೈಭವದಿಂದ ಆಚರಿಸುವ ಸಂಪ್ರದಾಯವು ರೂಢಿಗೆ ಬಂದಿತು.

ಆದಿಶಂಕರಾಚಾರ್ಯರ ಸಮಸ್ತ ಕೃತಿಗಳೂ ಒಟ್ಟಿಗೆ ದೇವನಾಗರೀ ಲಿಪಿಯಲ್ಲಿ ಮುದ್ರಿತವಾಗಿ ಇಪ್ಪತ್ತು ಸಂಪುಟಗಳಲ್ಲಿ ಜಿಜ್ಞಾಸು ಭಕ್ತರಿಗೆಲ್ಲಾ ದೊರಕುವಂತೆ ಮಾಡಿದುದು ಪರಮಪೂಜ್ಯ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳೇ, ಅವರೇ ಕಾಲಡಿಯೆಂಬ ದಿವ್ಯ ಕ್ಷೇತ್ರದಲ್ಲಿ ಆದಿಶಂಕರಾಚಾರ್ಯರ ಜನ್ಮ ಸ್ಥಳವನ್ನು ಹುಡುಕಿ ಸಮಸ್ತ ಭಕ್ತ ಗಣಗಳಿಗೆ ಅನುಗ್ರಹಿಸಿದವರು. ದೇವಭಾಷೆ ಸಂಸ್ಕೃತದಲ್ಲಿ ಅಪ್ರತಿಮ ವಿದ್ವಾಂಸರಾಗಿದ್ದ ಅವರು ಅನೇಕ ಸ್ತೋತ್ರ ಗ್ರಂಥಗಳನ್ನು ರಚಿಸಿದ್ದಾರೆ. ಅವು ಭಕ್ತಿ ಸುಧಾತರಂಗಿಣೀ ಎಂಬ ಸಂಪುಟದಲ್ಲಿ ಪ್ರಕಾಶಿತವಾಗಿವೆ.

1912ರಲ್ಲಿ ವಿದೇಹಮುಕ್ತಿಯನ್ನು ಪಡೆದು ಅವರು ಪರಬ್ರಹ್ಮದಲ್ಲಿ ಲೀನರಾದರು. ಇಂದಿಗೆ ನೂರು ವರ್ಷಗಳ ಹಿಂದೆ, ಎಂದರೆ 31.3.1924 ರಂದು ಮೈಸೂರಿನಲ್ಲಿ ಅಭಿನವ ಶಂಕರಾಲಯವನ್ನು ನಿರ್ಮಿಸಿ ಶೃಂಗೇರಿ ಪರಂಪರೆಯ ಮೂವತ್ತ ನಾಲ್ಕನೆಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು ಅಭಿನವ ಶಂಕರರೆಂದೇ ಪ್ರಖ್ಯಾತರಾಗಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಅಭಿನವ ಶಂಕರಾಲಯದ ನಿರ್ಮಾಣಕ್ಕೆ ಸಂಪೂರ್ಣ ಸಹಾಯಹಸ್ತವನ್ನು ನೀಡಿದ್ದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಎಂಬುದನ್ನು ಇಲ್ಲಿ ಸ್ಮರಿಸಬೇಕು.

ಅಭಿನವ ಶಂಕರಾಲಯವು ಜ್ಞಾನನಿಲಯವಾಗಿ, ಭಕ್ತಿಕೇಂದ್ರವಾಗಿ, ಶ್ರದ್ಧೆಯ ಮನೆಯಾಗಿ, ಸನಾತನ ಧರ್ಮದ ಆಲಯವಾಗಿ ನೂರು ವರ್ಷಗಳನ್ನು ಕಳೆದು ನವೋತ್ಸಾಹದಿಂದ ಬೆಳೆಯುತ್ತಿದೆ. ಇದಕ್ಕೆ ಕಾರಣ ಶೃಂಗೇರಿ ಗುರು ಪರಂಪರೆಯ ಅನುಗ್ರಹ ಮತ್ತು ಧರ್ಮಾಧಿಕಾರಿಗಳ ಅವಿರತವಾದ ದುಡಿಮೆ. ಅಭಿನವ ಶಂಕರಾಲಯದ ಶತಮಾನೋತ್ಸವದ ಸಂಭ್ರಮಾಚರಣೆಯ ಶುಭತಮ ಸಂದರ್ಭದಲ್ಲಿ ಮೈಸೂರಿನ ಜನತೆಯನ್ನು ಅನುಗ್ರಹಿಸಲು ಮಹಾಸನ್ನಿಧಾನ ಜಗದ್ಗುರು ಶ್ರೀ ಭಾರತೀತೀರ್ಥರ ಆಶೀರ್ವಾದ ಪೂರ್ವಕವಾಗಿ ಸನ್ನಿದಾನ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಮೈಸೂರಿಗೆ ದಯಮಾಡಿಸಿದ್ದಾರೆ. ಇದು ಎಲ್ಲಾ ಆಸ್ತಿಕ ಜನರ, ಶ್ರದ್ಧಾಳುಗಳ ಸೌಭಾಗ್ಯ. 30.3.2024 ರಂದು ಆಗಮಿಸಿದ ಪರಮಪೂಜ್ಯ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ನೂತನವಾಗಿ ನಿರ್ಮಿತವಾಗಿರುವ ಗುರುಭವನ 'ಸಚ್ಚಿದಾನಂದ ವಿಲಾಸ' ವನ್ನೂ, ಸಭಾಂಗಣವನ್ನೂ ಉದ್ಘಾಟಿಸಿದರು. ಅನಂತರ ಪ್ರತಿದಿನವೂ ಪೂಜಾದಿ ಧಾರ್ಮಿಕ ಕಾರ್ಯಕ್ರಮಗಳೂ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರುಗುತ್ತಿವೆ. 5.4.2024 ರಂದು **ಗುರುವಂದನಾ** ಕಾರ್ಯಕ್ರಮವಿದೆ. 6.5.2024 ರಂದು ಜಗದ್ಗುರುಗಳು ಕೃಷ್ಣರಾಜನಗರಕ್ಕೆ ಭಕ್ತಾನುಗ್ರಹಕ್ಕಾಗಿ ದಯಮಾಡಿಸುವರು. ಮೈಸೂರು ಶಂಕರ ಮಠದ ಧರ್ಮಾಧಿಕಾರಿ ಶ್ರೀ ಹೆಚ್. ರಾಮಚಂದ್ರ ಅವರು ಸಮಸ್ತ ಕಾರ್ಯಗಳ ಸೂತ್ರಧಾರರಾಗಿದ್ದಾರೆ.

ಶ್ರುತಿ ಸ್ಮೃತಿಪುರಾಣಾನಾಮ್ ಆಲಯಂ ಕರುಣಾಲಯಮ್।
ನಮಾಮಿ ಭಗವತ್ಪಾದಶಂಕರಂ ಲೋಕ ಶಂಕರಮ್ ॥
ನಿಗಮಾಗಮ ಶಾಸ್ತ್ರಾಣಾಂ ಸರ್ವೇಷಾಂ ಪಾರದೃಶ್ವನ್ಃ।
ನಮಾಮಿ ಭಾರತೀತೀರ್ಥಾನ್ ಗುರುವರ್ಯಾನ್ ಸದಾ ಮುದಾ॥
ನಮಸ್ಯಾಮಿ ಸದಾ ಭಕ್ತ್ಯಾ ವಿಧುಶೇಖರ ಸದ್ಗುರೂನ್ ।
ಜ್ಞಾನವೈರಾಗ್ಯ ಸಂಪನ್ನಾನ್ ಯೋಗ ವಿಜ್ಞಾನ ಶೇವಧೀನ್॥

ದೇವರು ಆಶೀರ್ವಾದ ಮಾಡುವುದೇ 'ಹಸ್ತ'ದಿಂದ: ಕಾಂಗ್ರೆಸ್ ಪವಿತ್ರ ದೇವಸ್ಥಾನ

ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೋಧನೆ



ಬೆಂಗಳೂರು, ಏ.2(ಕೆಎಂಶಿ)–'ಹಸ್ತ' ಎನ್ನುವುದು ಕೇವಲ ಗುರುತಲ್ಲ, ರೈತರ ನೇಗಿಲು ಹಿಡಿಯುವ ಹಸ್ತ, ಕಾರ್ಮಿಕರ ಶ್ರಮದ ಹಸ್ತ, ಮಹಿಳೆಯರ ಶಕ್ತಿಯ ಹಸ್ತ, ಯುವಕರ ಭವಿಷ್ಯದ ಹಸ್ತ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಜೆಡಿಎಸ್ ಪಕ್ಷದ ಮುಖಂಡರುಗಳನ್ನು ಕಾಂಗ್ರೆಸ್‌ಗೆ ಸೇರ್ಪಡೆ ಮಾಡಿಕೊಂಡು ಮಾತನಾಡಿದ ಅವರು, ಹಸ್ತ ಈ ದೇಶ ಮತ್ತು ಜನರ ಶಕ್ತಿ, ಕಾಂಗ್ರೆಸ್ ಎಂದರೆ ಹಲವು ನದಿಗಳ ಸಂಗಮ, ಕಾಂಗ್ರೆಸ್ ಪಕ್ಷ ಪವಿತ್ರವಾದ ದೇವಸ್ಥಾನ. ನಾವೆಲ್ಲಾ ಈ ದೇಶವನ್ನು ಕಾಪಾಡಲು ಈ ದೇವಸ್ಥಾನದಲ್ಲಿ ಸೇರಿದ್ದೇವೆ ಎಂದರು.

ನೀವು ಈಶ್ವರ, ವೆಂಕಟೇಶ್ವರ ಹೀಗೆ ಯಾವುದೇ ದೇವಸ್ಥಾನಕ್ಕೆ ಹೋದರೂ ದೇವರು ಆಶೀರ್ವಾದ ಮಾಡುವುದು ಈ ಹಸ್ತದಿಂದ, ಕಾಂಗ್ರೆಸ್ ಪಕ್ಷ ಸೇರಿದ ನಂತರ ಹಳಬರು, ಹೊಸಬರು ಎನ್ನುವ ತಾರತಮ್ಯ ನಮ್ಮಲ್ಲಿ ಇಲ್ಲ. 50 ವರ್ಷ ಪಕ್ಷ ಕಟ್ಟಿರುವವರು ಮತ್ತು ಹೊಸಬರನ್ನು ಒಟ್ಟಿಗೆ ಕೆಡುಕೊಂಡು ಹೋಗುವ ಕೆಲಸವನ್ನು ನಾವು, ನೀವು ಎಲ್ಲರೂ ಸೇರಿ ಮಾಡಬೇಕು. ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಒಟ್ಟಾಗಿ ಹೋಗಬೇಕು. ಇಡೀ ದೇಶದಲ್ಲೇ ಬದಲಾವಣೆಯ ಗಾಳಿ ಬೀಸುತ್ತಿದೆ. ಬಿಜೆಪಿಯವರಿಗೆ ತಾವು ಗೆಲ್ಲುವುದಿಲ್ಲ ಎನ್ನುವುದು ಅರ್ಥವಾಗಿದೆ. ಇದಕ್ಕಾಗಿ 12 ಅಭ್ಯರ್ಥಿಗಳನ್ನು ಬದಲಾಯಿಸಿದ್ದಾರೆ, ಆಪರೇಷನ್ ಕಮಲ ಮಾಡಿ ಕುಮಾರಸ್ವಾಮಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಿದವರ ಜತೆಗೆ ಈಗ ನೆಂಟಸ್ತನ ಮಾಡಿಕೊಂಡಿದ್ದಾರೆ.

ಕುಮಾರಸ್ವಾಮಿ ಸರಿ ಇಲ್ಲ ಎಂದವರೇ ಅವರ ಬೆಂಬಲ ಬೇಕು ಎಂದು ಹೊರಟಿದ್ದಾರೆ. ಅವರ ನೀತಿ, ಸಿದ್ಧಾಂತದ ಬಗ್ಗೆ ಚರ್ಚೆ ಮಾಡುವುದು ಬೇಡ. ಎಂತಹ ನೀಚ ರಾಜಕಾರಣ ಮಾಡುತ್ತಿದ್ದಾರೆ ಎಂದು ಜನ ಅವರನ್ನು ನೋಡಿ ನಗುತ್ತಿದ್ದಾರೆ.


ಚಿಕ್ಕಬಳ್ಳಾಪುರದಲ್ಲಿ ಜಾತಿ, ನೀತಿಯ ಮಾತುಗಳು ಕೇಳಿಬರುತ್ತಿದೆ. ಕುಮಾರಸ್ವಾಮಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸುವಾಗ ಎಲ್ಲಿ ಹೋಗಿತ್ತು ಈ ಜಾತಿ, ನೀತಿ. ಕಾಂಗ್ರೆಸ್ ಪಕ್ಷ ಎಂಟು ಮಂದಿ ಒಕ್ಕಲಿಗರಿಗೆ ಟಿಕೆಟ್ ನೀಡಿದೆ, ಒಕ್ಕಲಿಗರಿಗೆ ಬಿಜೆಪಿ, ಜೆಡಿಎಸ್ ಎಷ್ಟು ಮಾನ್ಯತೆ ನೀಡಿಲ್ಲ ಒಂದೇ ಕುಟುಂಬದ ಮೂರು ಮಂದಿ ದಳ ಮತ್ತು ಬಿಜೆಪಿಯಿಂದ ಚುನಾವಣೆ ಎದುರಿಸುತ್ತಿದ್ದಾರೆ, ಭವಿಷ್ಯದಲ್ಲಿ ದಳ ಎಲ್ಲಿರುತ್ತದೆ ಗೊತ್ತಿಲ್ಲ. ದೇವೇಗೌಡರು ತಮ್ಮ ಅಳಿಯನನ್ನೇ ಬಿಜೆಪಿಯಿಂದ ನಿಲ್ಲಿಸಿದ ಮೇಲೆ ದಳದ ಚಿಹ್ನೆ ಮತ್ತು ಆ ಪಕ್ಷಕ್ಕೆ ಬೆಲೆಯೇ ಇಲ್ಲದಂತಾಗಿದೆ ಎಂದು ಟೀಕಿಸಿದರು.

ಒಗ್ಗಟ್ಟಿನಿಂದ ಎಲ್ಲರೂ ಹೊಸ ಮುಖಗಳ ಗೆಲುವಿಗೆ ಶ್ರಮಿಸಬೇಕು, ಎಂ.ಎಸ್. ರಾಮಯ್ಯ ಅವರ ಕುಟುಂಬ ಶಿಕ್ಷಣ, ಆರೋಗ್ಯ, ಧರ್ಮ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದೆ. ಈ ಕುಟುಂಬವನ್ನು ಜಾತಿ ಮೇಲೆ ತೀರ್ಮಾನಿಸಬಾರದು. ಪಕ್ಷ ಮತ್ತು ಸಿದ್ಧಾಂತದ ಆಧಾರದ ಮೇಲೆ ತೀರ್ಮಾನ ಮಾಡಬೇಕು. ಸಿ.ಎಂ.ಇಬ್ರಾಹಿಂ ಅವರ ಮಗ ಕೂಡ ಪಕ್ಷ ಸೇರಲು ಮುಂದೆ ಬಂದಿದ್ದಾರೆ. ಸಾಕಷ್ಟು ಅಲ್ಪಸಂಖ್ಯಾತರು, ಒಕ್ಕಲಿಗ ನಾಯಕರು ಸೇರಿದಂತೆ ಎಲ್ಲಾ ವರ್ಗಗಳ ಜನರು ಪಕ್ಷ ಸೇರಲು ಮುಂದೆ ಬರುತ್ತಿದ್ದಾರೆ.

ಬಿಜೆಪಿ–ಜೆಡಿಎಸ್ ಮೇಲೆ ಜನರಿಗೆ ಬೇಸರ ಉಂಟಾಗಿದೆ, ಕಾಂಗ್ರೆಸ್ ಪಕ್ಷವೇ ಈ ದೇಶದ ಸಮಸ್ಯೆಗಳಿಗೆ ಪರಿಹಾರ ಎಂದು ನಂಬಿ ಪಕ್ಷಕ್ಕೆ ಸೇರ್ಪಡೆ ಆಗಿರುವ ಮಾಜಿ ಶಾಸಕರಾದ ಕೆ.ಪಿ.ಬಚ್ಚೇಗೌಡರು ಮತ್ತು ಶಿಡ್ಲಘಟ್ಟದ ಪುಟ್ಟ ಆಂಜನಪ್ಪ ಅವರನ್ನು ಪಕ್ಷಕ್ಕೆ ಸ್ವಾಗತಿಸುತ್ತೇನೆ. 60 ಸಾವಿರ ಮತಗಳ ಲೀಡ್ ಕೊಟ್ಟರೆ ನನ್ನನ್ನು ಟಚ್ ಮಾಡುವವರಿಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಅವರು ನಮ್ಮ ಮಹಾನ್ ಬಳಿ ಶಕ್ತಿ ನೀಡುವವರ ಎಂದಿದ್ದಾರೆ, ಇದು ಅವರ ರಾಜಕೀಯ ತಂತ್ರಗಾರಿಕೆ, ಇದು ಸಹಜ, ನಾನು ನಮ್ಮ ಕ್ಷೇತ್ರಕ್ಕೆ ಹೋದಾಗ ನಾವೂ ನಮ್ಮ ಮತದಾರರ ಬಳಿ ಕೇಳುತ್ತೇವೆ ಎಂದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ನಿಲ್ಲಿಸಲು ರಾಷ್ಟ್ರಪತಿಗಳ ಮಧ್ಯ ಪ್ರವೇಶಕ್ಕೆ ಮನವಿ

ಕಾವೇರಿ ಕ್ರಿಯಾ ಸಮಿತಿಯಿಂದ ರಾಷ್ಟ್ರಪತಿಗೆ ಪತ್ರ ರವಾನೆ



ಮೈಸೂರು, ಏ. 2– ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೈಸೂರಿನ ಅಶೋಕ ರಸ್ತೆಯಲ್ಲಿರುವ, ಕೇಂದ್ರ ಅಂಚೆ ಕಚೇರಿ ಮುಂಭಾಗ ರಾಷ್ಟ್ರಪತಿಗಳಿಗೆ ಅಂಚೆ ಮೂಲಕ ಕಾವೇರಿ ನೀರಿನ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಮನವಿ ಮಾಡಲಾಗಿದೆ. ಹಾಗೂ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿ, ಅಂಚೆ ಚಳುವಳಿ ನಡೆಸಲಾಯಿತು.

ಕಾವೇರಿ ಕ್ರಿಯಾ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರು ಕಾವೇರಿ ನೀರಿನ ಸಮಸ್ಯೆ ಸಂಬಂಧ ರಾಷ್ಟ್ರಪತಿಗಳಿಗೆ ಅಂಚೆ ಪತ್ರವನ್ನು ಪೋಸ್ಟ್ ಮಾಡಲಾಯಿತು.

ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ ಈ ವೇಳೆ ಮಾತನಾಡಿ, ಈ ಬಾರಿ ಹಿಂದೆಂದೂ ಕಂಡರಿಯದಂತಹ ಭೀಕರ ಬರ ರಾಜ್ಯದಲ್ಲಿ ಉದ್ಭವಿಸಿದೆ. ನಮಗೆ ಇಲ್ಲಿ ಕುಡಿಯಲೇ ನೀರಿಲ್ಲ. ಇಂತಹ ಸಮಯದಲ್ಲಿ ಕಾವೇರಿ ನ್ಯಾಯ ಮಂಡಳಿ, ತಮಿಳುನಾಡಿನ ಅಣೆಕಟ್ಟೆಗಳಲ್ಲಿ ನೀರಿದ್ದರೂ ನೀರು ಹರಿಸಲು ಆದೇಶಿಸುತ್ತಿರುವುದು ಅತ್ಯಂತ ಖಂಡನೀಯ ಎಂದರು. ಈಗಾಗಲೇ ನಮ್ಮ ಕಾವೇರಿ ಕೊಳ್ಳಗಳಲ್ಲಿ ನೀರು ಬರಿದಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರಪತಿಗಳು ಮಧ್ಯಸ್ಥಿಕೆ ವಹಿಸಿ, ಅಲ್ಪಸ್ವಲ್ಪ ಉಳಿದಿರುವ ನೀರನ್ನು ನಮಗೆ ಕುಡಿಯಲು ಅನುವು ಮಾಡಿಕೊಡಬೇಕು. ಶಾಶ್ವತವಾದ ಪರಿಹಾರವನ್ನು ರಾಷ್ಟ್ರಪತಿಗಳು ಕಲ್ಪಿಸಬೇಕೆಂದು ಒತ್ತಾಯಿಸಿ ಅಂಚೆ ಪತ್ರ ಚಳುವಳಿ ನಡೆಸಿದರು. ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಬೋಗಾದಿ ಸಿದ್ದೇಗೌಡ, ಸಿಂಧುವಳ್ಳಿ ಶಿವಕುಮಾರ್, ಕೃಷ್ಣಪ್ಪ, ನೇಹಾ, ಮಹದೇವಸ್ವಾಮಿ, ಶಿವಲಿಂಗಯ್ಯ, ಪ್ರಭುಶಂಕರ್, ರವೀಶ್, ಬಾಲಕೃಷ್ಣ ಮಂಜುಳಾ, ಸೋಮೇಗೌಡ, ಅಶೋಕ್, ಹನುಮಂತಯ್ಯ, ಪ್ರಭಾಕರ, ಆಟೋ ಮಹಾದೇವ, ವಿಷ್ಣು, ರಮೇಶ್ ಈ ವೇಳೆ ಉಪಸ್ಥಿತರಿದ್ದರು.

ಏ.18ರಿಂದ ಈವಿವಿಯಿಂದ ಮಕ್ಕಳ ಬೇಸಿಗೆ ಶಿಬಿರ

ಮೈಸೂರು,ಏ.2–ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಏ.18ರಿಂದ 21ರವರೆಗೆ ಲಿಂಗದೇವರಕೊಪ್ಪಲಿನ 'ಜ್ಞಾನ ಸರೋವರ ರಿಟ್ರೀಟ್ ಸೆಂಟರ್'ನಲ್ಲಿ ಮಕ್ಕಳ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಆಟೋಟಗಳು, ಯೋಗ-ಧ್ಯಾನ, ಸ್ಪರ್ಧೆಗಳು, ನೀತಿ ಶಿಕ್ಷಣ ಹಾಗೂ ಗುಂಪು ಚರ್ಚೆಗಳ ಬಗ್ಗೆ ಹೇಳಿಕೊಡಲಾಗುವುದು. 12ರಿಂದ 17 ವರ್ಷ ವಯೋಮಾನದ ಮಕ್ಕಳು ಶಿಬಿರದಲ್ಲಿ ಭಾಗವಹಿಸಬಹುದು. ಏ.18ರಂದು ಸಂಜೆ ಆಗಮನ ಹಾಗೂ ಏ.21ರಂದು ಸಂಜೆ ನಿರ್ಗಮನ. ನೋಂದಣಿಗಾಗಿ ಮೊ. 9945861666 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮುಡಾ ಅಧ್ಯಕ್ಷ ಮರೀಗೌಡರ ಆರೋಗ್ಯ ಸುಧಾರಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಆಸ್ಪತ್ರೆಗೆ ಭೇಟಿ; ಆರೋಗ್ಯ ವಿಚಾರಣೆ



ಮೈಸೂರು, ಏ.2– ದಿಢೀರ್ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿರುವ ಮುಡಾ ಅಧ್ಯಕ್ಷ ಕೆ.ಮರೀಗೌಡರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಮುಖಂಡರು ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಸೋಮವಾರ ಬೆಳಗ್ಗೆ ಮೈಸೂರಿಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ್ದ ಕೆ.ಮರೀಗೌಡರಿಗೆ ಮಧ್ಯಾಹ್ನ ದಿಢೀರ್ ಅನಾರೋಗ್ಯ ಬಾಧಿಸಿತು. ಕೂಡಲೇ ಅವರು ನಗರದ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಗೆ ದಾಖಲಾದರು. ವಿಷಯ ತಿಳಿದ ಸಿಎಂ ಸಿದ್ದರಾಮಯ್ಯ, ನಿನ್ನೆ ಸಂಜೆಯೇ ಆಸ್ಪತ್ರೆಗೆ ತೆರಳಿ ಆರೋಗ್ಯ ವಿಚಾರಿಸಿದರು. ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಮತ್ತಿತರರು ಜೊತೆಗಿದ್ದರು. ಮಂಗಳವಾರ ಮೈಸೂರು–ಕೊಡಗು ಕ್ಷೇತ್ರದ ಅಭ್ಯರ್ಥಿ ಎಂ.ಲಕ್ಷ್ಮಣ ಅವರು ಮರೀಗೌಡರನ್ನು ಭೇಟಿಯಾಗಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು. ಈ ವೇಳೆ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ನರಸಿಂಹರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ಮಂಜು ಮತ್ತಿತರರಿದ್ದರು.

ಮರೀಗೌಡರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದು, ಬುಧವಾರ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ ಎಂದು ತಿಳಿದುಬಂದಿದೆ.

ಮೂರನೇ ಪುಟದಿಂದ

ಯಾರೂ ಗೆಲ್ಲುವುದಿಲ್ಲ

ಹೆಚ್.ಡಿ.ಕುಮಾರಸ್ವಾಮಿ ಸರ್ಕಾರ ತೆಗೆದವರು ಮಿಸ್ಟರ್ ಯಡಿಯೂರಪ್ಪ. ಆದರೆ ಈಗ ಅದೇ ಬಿಜೆಪಿ ಜೊತೆ ಭಾಯಿ ಭಾಯಿ ಅಂತಿದ್ದಾರೆ. ಇವರಿಗೆ ಸ್ವಲ್ಪವಾದರೂ ಆತ್ಮ ಗೌರವ ಇದೆಯೇ ಎಂದು ಪ್ರಶ್ನಿಸಿದರು. ಕಾಂಗ್ರೆಸ್‌ನಲ್ಲಿ 80 ಶಾಸಕರಿದ್ದರೂ 38 ಶಾಸಕರಿದ್ದ ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡಿದ್ದೆವು. ಬಿಜೆಪಿ ಜೊತೆ ಸೇರಬಾರದು ಎಂಬ ಒಂದೇ ಕಾರಣಕ್ಕೆ ಅಧಿಕಾರ ಕೊಟ್ಟೆವು. ಆದರೂ ಈಗ ಮತ್ತೆ ಬಿಜೆಪಿ ಜೊತೆ ಸೇರಿದ್ದಾರೆ. ತಮ್ಮ ಸರ್ಕಾರ ಬೀಳಿಸಿದ ಬಿಜೆಪಿ ವಿರುದ್ಧ ಟೀಕಿಸಿ ಓಡಾಡುತ್ತಿದ್ದವರು ಇಂದು ಮತ್ತೆ ಜೊತೆಯಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ನರೇಂದ್ರ ಮೋದಿ ನನ್ನ ತುಂಬಾ ಪ್ರೀತಿಸುತ್ತಾರೆ, ನನ್ನ ಕಂಡರೆ ಮೋದಿಗೆ ಬಹಳ ಅಭಿಮಾನ ಎಂದು ಈಗ ದೇವೇಗೌಡರು ಹೇಳುತ್ತಾರೆ. ಆದರೆ ಜನತಾದಳ ಇಬ್ಭಾಗ ಆದಾಗ ಬಿಜೆಪಿ ಜೊತೆ ಸೇರಬಾರದು ಎಂದು ಇದೇ ದೇವೇಗೌಡರು ತೀರ್ಮಾನ ಮಾಡಿದರು. ನಾನು, ಅವರು ಸೇರಿ ಜೆಡಿಎಸ್ ಪಕ್ಷ ಕಟ್ಟಿದ್ದೆವು ಎಂದು ಹಿಂದಿನ ರಾಜಕೀಯ ಬೆಳವಣಿಗೆಗಳನ್ನು ಸಿದ್ದರಾಮಯ್ಯ ಮೆಲುಕು ಹಾಕಿದರು.

ಜೆಡಿಎಸ್ ಕಟ್ಟಿದ ನನ್ನನ್ನೇ ಹೊರ ಹಾಕಿದರು: ಜಾತ್ಯಾತೀತ ಜನತಾ ದಳದ ಫೌಂಡರ್ ಪ್ರೆಸಿಡೆಂಟ್ ನಾನು. ಆರು ವರ್ಷಗಳ ಕಾಲ ಜೆಡಿಎಸ್ ಕಟ್ಟಿ ಬೆಳೆಸಿದೆ. ಆದರೆ ನನ್ನನ್ನೆ ಪಕ್ಷದಿಂದ ಹೊರ ಹಾಕಿದರು. ಜೆಡಿಎಸ್‌ನಿಂದ ಉಚ್ಚಾಟಿಸಿದರು. ಆದರೆ ನಾನೇ ಪಕ್ಷ ಬಿಟ್ಟು ಹೋದೆ ಎಂದು ಈಗ ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಸೇರಿದಂತೆ ಎಲ್ಲರನ್ನು ಹೆಚ್.ಡಿ. ದೇವೇಗೌಡರು ಉಪಯೋಗಿಸಿ ಬೀಸಾಡುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ ಎಂದು ಪ್ರಶ್ನಿಸಿದರು.

ನಮ್ಮ ಕಾಂಗ್ರೆಸ್ ಶಾಸಕ ಹರೀಶ್‌ಗೌಡ ಇದೇ ಜೆಡಿಎಸ್‌ನಲ್ಲಿದ್ದರು. ಆದರೆ ಹರೀಶ್‌ಗೌಡರಿಗೆ ಟಿಕೆಟ್ ನೀಡದೆ ಪ್ರೊ.ರಂಗಪ್ಪಗೆ ಟಿಕೆಟ್ ಕೊಟ್ಟರು. ತರುವಾಯ ಅವರನ್ನು ಕೈ ಬಿಟ್ಟರು. ಉಪಯೋಗಿಸಿ ಬೀಸಾಡುವುದಕ್ಕೆ ಇಂತಹ ಹಲವು ಉದಾಹರಣೆಗಳನ್ನು ಕೊಡಬಲ್ಲೆ ಎಂದು ಸಿದ್ದರಾಮಯ್ಯ ಹೇಳಿದರು. ಬಿಜೆಪಿ ಜೊತೆ ಅಪವಿತ್ರ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್‌ನವರಿಗೆ ಜಾತ್ಯಾತೀತ ಎಂಬ ಪದ ತೆಗೆಯುವಂತೆ ಸಲಹೆ ನೀಡಿದೆ. ಆದರೆ ಈ ಮಾತನ್ನೆ ನನ್ನದು ಗರ್ವ ಎಂದು ಭಾವಿಸಿ, ಗರ್ವ ಭಂಗ ಮಾಡುತ್ತೇನೆ ಎಂದು ದೇವೇಗೌಡರು ಶಪಥ ಮಾಡಿದ್ದಾರೆ ಎಂದರು.

ಮೋದಿ ರಾಜ್ಯಕ್ಕೆ ಏನೂ ಕೊಡುಗೆ ಕೊಟ್ಟಿಲ್ಲ: ಕೇಂದ್ರದ ನರೇಂದ್ರ ಮೋದಿ ಸರ್ಕಾರ ಕರ್ನಾಟಕಕ್ಕೆ ಯಾವ ಕೊಡುಗೆಯನ್ನು ನೀಡಿಲ್ಲ. ಅಂತಹವರ ಜೊತೆ ಹೋಗಿ ಜೆಡಿಎಸ್ ನವರು ಸೇರಿದ್ದಾರೆ. ನರೇಂದ್ರ ಮೋದಿ 2014ರಲ್ಲಿ ಹೇಳಿದ್ದೇನು, 2024 ರವರೆಗೆ ಕೊಟ್ಟಿದ್ದೇನು ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಹತ್ತು ವರ್ಷದ ಅವಧಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿಸಿದ್ದಾರೆ. ಇದು ಬಿಟ್ಟು ಬೇರೇನು ಕೊಟ್ಟಿಲ್ಲ ಎಂದು ಟೀಕಿಸಿದರು.

ಬರಗಾಲ ಬಂದಾಗ ಮೋದಿನೂ ಬರಲಿಲ್ಲ, ಅಮಿತ್ ಷಾನೂ ಬರಲಿಲ್ಲ. ಆದರೆ ಈಗ ಮತ ಕೇಳಲು ಬರುತ್ತಿದ್ದಾರೆ. ಕರ್ನಾಟಕದ 25 ಸಂಸದರೂ ಕರ್ನಾಟಕದ ಪರವಾಗಿ ತುಟಿ ಬಿಚ್ಚಲಿಲ್ಲ. ಮೋದಿ ಕಂಡರೆ ಇವರೆಲ್ಲಾ ಗಢ ಗಢ ಅಂತ ನಡುಗುತ್ತಾರೆ. ಇಂತಹವರನ್ನು ಲೋಕಸಭೆಗೆ ನಿಮ್ಮ ಪ್ರತಿನಿಧಿಯಾಗಿ ಕಳುಹಿಸಬೇಕೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಅಂದು ನನ್ನ ರಾಜಕೀಯ ಭವಿಷ್ಯವೇ ಹಾಳಾಗುತ್ತಿತ್ತು

ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ನಾನು ಗೆಲ್ಲದಿದ್ದರೆ ನನ್ನ ರಾಜಕೀಯ ಭವಿಷ್ಯವೇ ಹಾಳಾಗುತ್ತಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜೆಡಿಎಸ್‌ನಿಂದ ಹೊರ ಹಾಕಿದ ನಂತರ ನಾನು ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದೆ. ಅಂದು ನನ್ನ ಸೋಲಿಸಲು ದೇವೇಗೌಡರು, ಕುಮಾರಸ್ವಾಮಿ ಸೇರಿದಂತೆ ಎಲ್ಲರೂ ಮೈಸೂರಿನಲ್ಲೇ ಠಿಕಾಣಿ ಹೂಡಿದ್ದರು. ನಾನು ಸೋಲಲೇಬೇಕು ಎಂದು ಇನ್ನಿಲ್ಲದ ಪ್ರಯತ್ನ ಮಾಡಿದರು. ಅಂದು ನೀವೆಲ್ಲಾ ನನ್ನ ಕೈ ಹಿಡಿದ ಕಾರಣಕ್ಕೆ ನಾನು ಉಳಿದುಕೊಂಡೆ. ಇಲ್ಲದಿದ್ದರೆ ನನ್ನ ರಾಜಕೀಯ ಭವಿಷ್ಯವೇ ಹಾಳಾಗುತ್ತಿತ್ತು ಎಂದು ಸಿದ್ದರಾಮಯ್ಯ ತಾವು ರಾಜಕೀಯ ಮರು ಜನ್ಮ ಪಡೆದ ಇತಿಹಾಸವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಹೆಚ್.ಡಿ.ದೇವೇಗೌಡರ ಬಗ್ಗೆಯಾಗಲೀ, ಹೆಚ್.ಡಿ.ಕುಮಾರಸ್ವಾಮಿ ಬಗ್ಗೆಯಾಗಲೀ ನನಗೆ ವೈಯಕ್ತಿಕ ದ್ವೇಷವಿಲ್ಲ. ರಾಜಕೀಯವಾಗಿ ಅವರು ತೆಗೆದುಕೊಂಡ ನಿರ್ಣಯಗಳನ್ನು ನಾನು ವಿರೋಧ ಮಾಡುತ್ತೇನೆ ಅಷ್ಟೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲಿನಲ್ಲಿ ಅಂಬಾನಿ, ಅದಾನಿಗಳಿಲ್ಲ!

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಪಂಚ ಗ್ಯಾರಂಟಿ ಮೂಲಕ ಹಲವು ಸೌಲಭ್ಯ ನೀಡಿದೆ. ಕುಂಬಾರಕೊಪ್ಪಲು ಹಾಗೂ ಮಂಚೇಗೌಡನ ಕೊಪ್ಪಲಿನಲ್ಲಿ ಅಂಬಾನಿ, ಅದಾನಿಗಳಿಲ್ಲದ ಕಾರಣ ನಿಮಗೆಲ್ಲಾ ಗ್ಯಾರಂಟಿ ಯೋಜನೆ ಪ್ರಯೋಜನಕಾರಿಯಾಗಿದೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಾನು ಮುಖ್ಯಮಂತ್ರಿ ಆದ ಮೇಲೆ ಮೈಸೂರಿಗೆ 3,800 ಕೋಟಿ ರೂಪಾಯಿಗಳನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ನೀಡಿದ್ದೇನೆ. ಚಾಮರಾಜ ವಿಧಾನಸಭಾ ಕ್ಷೇತ್ರ ಒಂದಕ್ಕೆ 850 ಕೋಟಿ ನೀಡಿದ್ದೇನೆ ಎಂದರು. ಜಯದೇವ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಮಕ್ಕಳ ಆಸ್ಪತ್ರೆ ಸೇರಿದಂತೆ ಹಲವು ಕೊಡುಗೆಗಳನ್ನು ನೀಡಿದ್ದೇನೆ. ಇದನ್ನೆಲ್ಲಾ ಪರಿಗಣಿಸಿ ನಮ್ಮ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಎಂದು ಸಿದ್ದರಾಮಯ್ಯ ಮನವಿ ಮಾಡಿದರು.

ಕೊಡುವುದಕ್ಕೋ...! ಕಿತ್ತುಕೊಳ್ಳುವುದಕ್ಕೋ...!!

ಬಿಜೆಪಿ ಸರ್ಕಾರವಿದ್ದಾಗಲೂ ಅತಿವೃಷ್ಟಿಯಿಂದಾದ ಹಾನಿಗೆ ಪರಿಹಾರ ನೀಡಲಿಲ್ಲ. ಕನ್ನಡಿಗರು ನಿಮಗೆ ಏನು ಅನ್ಯಾಯ ಮಾಡಿದ್ದಾರೆ. ಬೇರ‍್ಯಾವ ಭಾಷೆಗೂ ವಿರೋಧ ಇಲ್ಲ, ಕನ್ನಡ ಭಾಷೆಗೆ ಮೊದಲ ಪೂಜೆ ಸಲ್ಲಬೇಕೆನ್ನುವುದು ಮಾತ್ರ ಕನ್ನಡಿಗರ ನಿಲುವು, ಕನ್ನಡ ಧ್ವಜ ರೂಪಿಸಿ ಅಂಗೀಕಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳಿಸಿ ಆರು ವರ್ಷಗಳಾಗುತ್ತಾ ಬಂದರೂ ಇದುವರೆಗೆ ಅನುಮೋದನೆ ನೀಡಿಲ್ಲ.

ರಾಷ್ಟ್ರೀಕೃತ ಬ್ಯಾಂಕ್, ರೈಲ್ವೆ ಇಲಾಖೆ ಸೇರಿದಂತೆ ಕೇಂದ್ರ ಸರ್ಕಾರಿ ಸ್ವಾಮ್ಯದ ಎಲ್ಲ ಸಂಸ್ಥೆಗಳ ನೇಮಕಾತಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನೂ ಮಾಧ್ಯಮವಾಗಿ ಬಳಸಲು ಅವಕಾಶ ಇರಬೇಕೆಂಬುದು ಕನ್ನಡಿಗರ ಬಹುವರ್ಷಗಳ ಬೇಡಿಕೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರದ ಸಾಧನೆಯ ಆಧಾರದಲ್ಲಿ ಮತ ಕೇಳುವ ವಿಶ್ವಾಸ ನಿಮಗೆ ಇಲ್ಲ, ಮಾಡಿರುವ ತಪ್ಪುಗಳನ್ನು ಒಪ್ಪಿಕೊಳ್ಳುವ ಸಹೃದಯತೆಯೂ ನಿಮಗೆ ಇಲ್ಲ.

ರಾಜಕೀಯ ಲಾಭಕ್ಕಾಗಿ ಸಮಾಜದ ಶಾಂತಿ–ಸೌಹಾರ್ದತೆ ಕೆಡಿಸಬಾರದೆಂಬ ಒಳ್ಳೆಯತನದ ವಿವೇಕವೂ ಇಲ್ಲ. ತಾವು ಗಲಭೆ ನಡೆಸುತ್ತಿರುವುದಾಗಿ ಮೈಸೂರಿನ ಮಾಜಿ ಸಂಸದರೊಬ್ಬರು ಬಹಿರಂಗ ಹೇಳಿಕೆ ನೀಡಿದ್ದಾರೆ. ರಾಜ್ಯದ ಶಾಂತಿ ಮತ್ತು ನೆಮ್ಮದಿಯನ್ನು ಕೆಡಿಸಬೇಡಿ, ನಿಮ್ಮ ಸರ್ಕಾರದ ಸಾಧನೆಯನ್ನು ಜನತೆಯ ಮುಂದಿಟ್ಟು ಮತಯಾಚನೆ ಮಾಡಿ. ಅಡ್ಡ ಮಾರ್ಗದ ಮೂಲಕ ಚುನಾವಣೆ ಎದುರಿಸಲು ಹೊರಟರೆ ಕಳೆದ ವಿಧಾನ ಸಭಾ ಚುನಾವಣೆಯ ಫಲಿತಾಂಶವೇ ಲೋಕಸಭಾ ಚುನಾವಣೆಯಲ್ಲಿ ಪುನರಾವರ್ತನೆಯಾಗುವುದು ಖಂಡಿತ ಎಂದಿದ್ದಾರೆ.

ನನಗೆ ಮರ್ಯಾದೆ ತರಬೇಕು ಎನ್ನುವುದಾದರೆ ಚಾಮುಂಡೇಶ್ವರಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಲೀಡ್ ಕೊಡಲೇಬೇಕು

ಕ್ಷೇತ್ರದಲ್ಲಿನ ಪಕ್ಷದ ಮುಖಂಡರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ



ಮೈಸೂರಿನ ನಜರ್‌ಬಾದಿನಲ್ಲಿರುವ ಫಾರ್ಚೂನ್ ಜೆಪಿ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಮೈಸೂರು,ಏ.2(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ದುರ್ಬಲ ಅಲ್ಲ. ನಾವು ಈ ಹಿಂದೆ ಆ ಕ್ಷೇತ್ರದಲ್ಲಿ ಸೋತಿದ್ದರೆ ಅದಕ್ಕೆ ನಮ್ಮ ತಪ್ಪುಗಳು ಕಾರಣವೇ ಹೊರತು ಅಲ್ಲಿನ ಜನ ನಮ್ಮನ್ನು ತಿರಸ್ಕಾರ ಮಾಡಿಲ್ಲ. ನನಗೆ ಮರ್ಯಾದೆ ತರಬೇಕು ಎನ್ನುವುದಾದರೆ ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಲೀಡ್ ಕೊಡಲೇಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಮುಂಡೇಶ್ವರಿ ಕ್ಷೇತ್ರದ ಪಕ್ಷದ ಮುಖಂಡರಲ್ಲಿ ಮನವಿ ಮಾಡಿದರು.

ಮೈಸೂರಿನ ನಜರ್‌ಬಾದಿನಲ್ಲಿರುವ ಫಾರ್ಚೂನ್ ಜೆಪಿ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆ ಬಗ್ಗೆ ಚರ್ಚೆ ಅಗತ್ಯವಿಲ್ಲ. ಬದಲಿಗೆ ಹಿಂದಿನ ತಪ್ಪು ಸರಿಪಡಿಸಿಕೊಳ್ಳುವುದು ಮುಖ್ಯ. ಮೈಸೂರು–ಕೊಡಗು ಕ್ಷೇತ್ರ ಸಂಬಂಧ 1977ರಲ್ಲಿ ದಾಸಪ್ಪ ಅವರ ಪುತ್ರ ತುಳಸಿದಾಸಪ್ಪ ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿತ್ತು. ಅದು ಬಿಟ್ಟರೆ ಈಗ ಒಕ್ಕಲಿಗ ಸಮುದಾಯದವರಿಗೆ ಕಾಂಗ್ರೆಸ್ ಟಿಕೆಟ್ ದೊರೆತಿದೆ ಎಂದರು.

ಒಕ್ಕಲಿಗ ಸಮುದಾಯದವರಿಗೆ ಟಿಕೆಟ್ ನೀಡಬೇಕೆಂದು ನಾನು ಎಲ್ಲರ ಅಭಿಪ್ರಾಯ ಕೇಳಿದಾಗ ಲಕ್ಷ್ಮಣ್ ಹಾಗೂ ಡಾ.ಬಿ.ಜೆ. ವಿಜಯ್‌ಕುಮಾರ್ ಹೆಸರುಗಳು ಕೇಳಿಬಂದವು. ಹೈಕಮಾಂಡ್ ಲಕ್ಷ್ಮಣ್ ಹೆಸರು ಅಂತಿಮಗೊಳಿಸಿತು. 10 ವರ್ಷಗಳಿಂದ ಪಕ್ಷದ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ವಿಜಯ್‌ಕುಮಾರ್ ಸಹ ಲೋಕಸಭೆಗೆ ಹೋಗುವಂತಹ ಎಲ್ಲಾ ಅರ್ಹತೆ ಹೊಂದಿದ್ದಾರೆ. ಚಾಮುಂಡೇಶ್ವರಿ ನನಗೆ ರಾಜಕೀಯ ಪುನರ್‌ಜನ್ಮ ಕೊಟ್ಟ ಕ್ಷೇತ್ರ. 1983ರಲ್ಲಿ ನಾನು ಪಕ್ಷೇತರರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ ಚುನಾವಣೆ ಖರ್ಚಿಗೆ ಹಣವನ್ನೂ ಕೊಟ್ಟು, ಕ್ಷೇತ್ರದ ಜನತೆ ಓಟನ್ನೂ ಕೊಟ್ಟಿದ್ದರು ಎಂದು ಸ್ಮರಿಸಿದರು.

ಈ ಬಾರಿ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ವಾತಾವರಣವಿದೆ. ಬಿಜೆಪಿಯವರು 3 ವರ್ಷ 10 ತಿಂಗಳು ಅಧಿಕಾರ ಮಾಡಿದರು. 1 ವರ್ಷ 2 ತಿಂಗಳು ಕುಮಾರಸ್ವಾಮಿ ಅಧಿಕಾರ ಮಾಡಿದರು. ಈ ಐದು ವರ್ಷಗಳಲ್ಲಿ ಏನೂ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಕುಮಾರಸ್ವಾಮಿಯಾಗಲಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಆಗಲಿ ಒಂದು ಕೆಲಸ ಮಾಡಿರುವುದನ್ನು ತೋರಿಸಿ ನೋಡೋಣ. ಮೈಸೂರು ನಗರಕ್ಕೆ ನನ್ನ ಅವಧಿಯಲ್ಲಿ 3,800 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡಿದ್ದು ಬಿಟ್ಟರೆ ಒಂದು ರೂಪಾಯಿ ಕೆಲಸ ಕೂಡ ಮಾಡಿಲ್ಲ. ಮತ್ತೆ ಯಾವ ಆಧಾರದ ಮೇಲೆ ಬಿಜೆಪಿಯವರು ಓಟು ಕೇಳುತ್ತಾರೆ. ಅವರ ಕೊಡುಗೆ ಏನು? ಅವರ ಕೊಡುಗೆ ಶೂನ್ಯ ಎಂದು ಕಿಡಿಕಾರಿದರು.

ಏನು ಕಡಿದು ಕಟ್ಟೆ ಹಾಕಿದ್ದಾನಪ್ಪ: ಚಾಮುಂಡೇಶ್ವರಿ ಕ್ಷೇತ್ರವನ್ನು ನಾನು ಬಿಟ್ಟ ಮೇಲೆ ಹೇಗಿತ್ತೋ ಹಾಗೆಯೇ ಇದೆ. ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡ ಮೂರು ಬಾರಿ ಎಂಎಲ್‌ಎ ಆಗಿದ್ದಾರೆ. ಏನು ಕಡಿದು ಕಟ್ಟೆ ಹಾಕಿದ್ದಾನಪ್ಪ ಹೇಳಿ ನೋಡೋಣ. ಕಳೆದ ಬಾರಿ ನಾವು ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದೆವು. ನಾನು ಅವರನ್ನೆಲ್ಲಾ ಕರೆದು ಕಾಂಗ್ರೆಸ್ ಅಭ್ಯರ್ಥಿ ವಿಜಯಶಂಕರ್‌ಗೆ ಓಟ್ ಹಾಕುವಂತೆ ಮಾತನಾಡಿದ್ದೆ. ಒಬ್ಬರೂ ಓಟು ಹಾಕಲಿಲ್ಲ. ಬದಲಿಗೆ ಬಿಜೆಪಿಗೆ ಹಾಕಿದರು. ಹೀಗಾಗಿ ಬಿಜೆಪಿ ಅಭ್ಯರ್ಥಿ ಗೆಲ್ಲುವಂತಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ತಾಲೂಕಲ್ಲಿ ಬಿಜೆಪಿ ಎಂದಾದರೂ ಪ್ರಬಲವಾಗಿತ್ತೇ? ಯಾವತ್ತೂ ಇಲ್ಲ. ಅನೇಕ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಠೇವಣಿ ಕಳೆದುಕೊಂಡಿದೆ. 2018ರಲ್ಲಿ ನನ್ನನ್ನು ಸೋಲಿಸಬೇಕು ಎನ್ನುವವರು ನಮ್ಮಲ್ಲೇ ಹೆಚ್ಚಾದರು. ನಮ್ಮವರೆ ಗಿರಾಕಿಗಳು. ಸೋಲಿಸಬೇಕೆಂದೇ ಸೋಲಿಸಿದರು ಎಂದು ಸಿದ್ದರಾಮಯ್ಯನವರು ಹೇಳಿದಾಗ, ಸಭಿಕರೊಬ್ಬರು ಅವರೆಲ್ಲಾ ಇಲ್ಲೇ ಬಂದವರೇ ಎಂದರು. ಮತ್ತೆ ಮಾತು ಮುಂದುವರೆಸಿದ ಸಿದ್ದರಾಮಯ್ಯ, ಇರಲಿ ಬಿಡಪ್ಪ, ಅವರಿಗೆಲ್ಲಾ ನಮಸ್ಕಾರ. ಕೆಲಸ ಮಾಡಿದ್ದರೂ ಯಾವುದೋ ಕಾರಣಕ್ಕೆ ಸೋಲಿಸಿದರು. ನಾನು ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ. ಆದರೆ ಒಂದು ನೋವು ಅಂದರೆ 2013–18ರವರೆಗೆ ಎಲ್ಲಾ ಕೆಲಸ ಮಾಡಿದರೂ ಓಟು ಕೊಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಾವಿನಹಳ್ಳಿ ಸಿದ್ದೇಗೌಡ ವಿರುದ್ಧ ಕಿಡಿ

ಮೈಸೂರು,ಏ.2(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಪರಾಜಿತಗೊಂಡ ಮಾವಿನಹಳ್ಳಿ ಸಿದ್ದೇಗೌಡ ಅವರನ್ನು ವೇದಿಕೆಯಲ್ಲಿ ಕೂರಿಸಿಕೊಳ್ಳಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಆಕ್ಷೇಪ ವ್ಯಕ್ತವಾಯಿತು.

ಮಾವಿನಹಳ್ಳಿ ಸಿದ್ದೇಗೌಡ ವೇದಿಕೆಯಲ್ಲಿ ಬಂದು ಕೂರುತ್ತಿದ್ದಂತೆ ಅವರನ್ನು ಕೆಳಗೆ ಇಳಿಸುವಂತೆ ಹಲವು ಮುಖಂಡರು ಒತ್ತಾಯಿಸಿದರು. ಪಕ್ಷಕ್ಕೆ ದ್ರೋಹ ಮಾಡಿದವರನ್ನು ವೇದಿಕೆಯಲ್ಲಿ ಕೂರಿಸಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಹುತೇಕರು ಒಮ್ಮೆಲೆ ಮಾವಿನಹಳ್ಳಿ ಸಿದ್ದೇಗೌಡ ವಿರುದ್ಧ ಆಕ್ರೋಶಗೊಂಡ ಕಾರಣ ಗಲಾಟೆ–ಗದ್ದಲ ಉಂಟಾಯಿತು. ಬಳಿಕ ವೇದಿಕೆಯಲ್ಲಿ ಎದ್ದು ನಿಂತ ಸಿದ್ದರಾಮಯ್ಯ ಎಲ್ಲರನ್ನು ಸಮಾಧಾನಪಡಿಸಿದರು.

ಯಾರೂ ಕೂಡ ಭಾಷಣದ ಮಧ್ಯೆ ಮಾತನಾಡಬಾರದು. ಮಧ್ಯೆ ಮಧ್ಯೆ ಮಾತನಾಡಬಾರದು. ಗಲಾಟೆ ಮಾಡಬೇಕು ಎಂದು ಬಂದಿದ್ದರೆ ಅದಕ್ಕೆ ಅವಕಾಶವಿಲ್ಲ. ಹೊರಗಡೆ ಹೋಗಬಹುದು ಎಂದು ಸಿದ್ದರಾಮಯ್ಯ ಎಚ್ಚರಿಕೆ ನೀಡಿದ ಬಳಿಕ ಎಲ್ಲರೂ ಸಮಾಧಾನಗೊಂಡರು.

ಈ ಬಾರಿ ಬಿಜೆಪಿ 200 ಸ್ಥಾನಗಳಿಗೆ ಸೀಮಿತ

ಬಿಜೆಪಿ ಆಂತರಿಕ ಸರ್ವೇಯಲ್ಲೇ ಈ ವರದಿಯಿದೆ ; ಸಿಎಂ ಸಿದ್ದರಾಮಯ್ಯ

ಮೈಸೂರು,ಏ.2(ಪಿಎಂ)– ಚನ್ನಪಟ್ಟಣಕ್ಕೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಅಲ್ಲಿ ಭಾಷಣ ಮಾಡುವಾಗ ಸುಳ್ಳು ಹೇಳಿದ್ದಾರೆ. ಸಿದ್ದರಾಮಯ್ಯನವರು ಬರಗಾಲ ಸಂಬಂಧ 3 ತಿಂಗಳು ತಡವಾಗಿ ಮನವಿ ಸಲ್ಲಿಸಿದರು ಎಂದಿದ್ದು, ಇದು ಎಂಥಾ ಸುಳ್ಳು ಎಂದು ಸಿಎಂ ಸಿದ್ದರಾಮಯ್ಯ ಕಿಡಿಕಾರಿದರು.

ಸೆ.23ರಂದು ಮೊದಲ ಮನವಿ ಕೊಟ್ಟಿದ್ದು, ಅಕ್ಟೋಬರ್ ತಿಂಗಳಲ್ಲಿ ಕೇಂದ್ರ ಸರ್ಕಾರದ ತಂಡ ಬಂದು ಪ್ರವಾಸ ಮಾಡಿ ಅಕ್ಟೋಬರ್ 20ರಂದು ವರದಿ ಮಾಡಿದ್ದಾರೆ. ಅಂದಿನಿಂದ ಈವರೆಗೆ ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ಬರಗಾಲ ಸಂಬಂಧ ಕರ್ನಾಟಕಕ್ಕೆ ಮೋದಿ, ಅಮಿತ್ ಷಾ ಬಂದಿದ್ದರೆ? 2019ರ ಸೆಪ್ಟೆಂಬರ್‌ನಲ್ಲಿ ದೊಡ್ಡ ಪ್ರವಾಹ ಉಂಟಾಯಿತು ಆಗ ಬಂದ್ರಾ? 240 ತಾಲೂಕುಗಳ ಪೈಕಿ 223 ತಾಲೂಕು ಬರಪೀಡಿತ ಎಂದು ಘೋಷಣೆ ಮಾಡಿದರೂ ಬರಲಿಲ್ಲ. ಅಮಿತ್ ಷಾ ಅವರನ್ನು ರಾಜ್ಯಕ್ಕೆ ಕರೆತರಲು ಬಿಜೆಪಿ–ಜೆಡಿಎಸ್‌ನವರಿಗೆ ನಾಚಿಕೆಯಾಗಬೇಕು. 18,971 ಕೋಟಿ ಪರಿಹಾರ ಕೇಳಿದ್ದರೂ ಕೊಟ್ಟಿಲ್ಲ. ಇವರು ಯಾವ ಮುಖದಲ್ಲಿ ಓಟು ಕೇಳುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ನಾವು ಬಿಜೆಪಿಯವರಂತೆ ಸುಳ್ಳು ಹೇಳುವುದಿಲ್ಲ. ನಾವು ಅಧಿಕಾರದಲ್ಲಿ ಇರುವವರೆಗೂ ಐದು ಗ್ಯಾರಂಟಿ ಜಾರಿಯಲ್ಲಿ ಇರುತ್ತವೆ. ಕೊಟ್ಟ ಮಾತಿಗೆ ಸಿದ್ದರಾಮಯ್ಯ ತಪ್ಪಲ್ಲ. ಈ ಬಾರಿ 200 ಸ್ಥಾನಗಳ ಒಳಗೆ ಮಾತ್ರ ಗೆಲ್ಲುತ್ತೇವೆ ಎಂದು ಅವರ ಸರ್ವೇಯಲ್ಲೇ ವರದಿ ಇದೆ. ಅದಕ್ಕಾಗಿ 400 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಅವರು 200 ಸ್ಥಾನಗಳ ಒಳಗಡೆಯೇ ಗೆಲ್ಲುವುದು. ನಮ್ಮ ಗ್ಯಾರಂಟಿ ಪದವನ್ನೇ ಕದ್ದಿದ್ದಾರೆ ಎಂದರು.

ಕಮಿಟಿ ಸದಸ್ಯರ ನೇಮಕಕ್ಕೆ ಪರ–ವಿರೋಧ ; ಗದ್ದಲ

ಮೈಸೂರು,ಏ.2(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಕೆಲಸ ಮಾಡಲು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ನೇತೃತ್ವ ವಹಿಸಿಕೊಳ್ಳಲು ಕ್ಷೇತ್ರದ ಪಕ್ಷದ ಮುಖಂಡರು ಒಕ್ಕೊರಲಿನಿಂದ ಸಮ್ಮತಿಸಿದರು. ಆದರೆ ಅವರೊಂದಿಗೆ ಹಲವರನ್ನು ಒಳಗೊಂಡ ಕಮಿಟಿ ರಚನೆಗೆ ಪರ–ವಿರೋಧ ವ್ಯಕ್ತವಾಗಿ ಗದ್ದಲ ಉಂಟಾಯಿತು.

ಸಚಿವ ಕೆ.ವೆಂಕಟೇಶ್ ಮಾತನಾಡಿ, ಯತೀಂದ್ರ ಅವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಚುನಾವಣೆ ಸಂಬಂಧ ಪಕ್ಷದ ಪರ ಕೆಲಸ ಮಾಡಲಿದ್ದಾರೆ. ಅವರು ತಮಗೆ ಯಾರ ಸಹಕಾರ ಬೇಕೆಂದು ನಿರ್ಧರಿಸಲಿದ್ದಾರೆ. ಅದಕ್ಕೆ ಎಲ್ಲರೂ ಸಹಕಾರ ನೀಡಿ ಎಂದಾಗ, ಯತೀಂದ್ರ ಸಿದ್ದರಾಮಯ್ಯ ಪರ ಜೈಕಾರದ ಘೋಷಣೆ ಕೇಳಿ ಬಂದಿತು.

ಬಳಿಕ ಸಿದ್ದರಾಮಯ್ಯ ಮಾತನಾಡಿ, ಯತೀಂದ್ರ ನೇತೃತ್ವ ವಹಿಸಿಕೊಳ್ಳಲಿ. ಆದರೆ ಕಮಿಟಿ ಮಾಡೋಣ. ಕಮಿಟಿ ನೇತೃತ್ವವನ್ನು ಯತೀಂದ್ರ ಅವರೇ ವಹಿಸುತ್ತಾರೆ. ನಾನು ವರುಣ ಕ್ಷೇತ್ರಕ್ಕೆ ಬರಲು ಸಾಧ್ಯವಿಲ್ಲ. ವರುಣ ಕ್ಷೇತ್ರದಲ್ಲಿ ಹೆಚ್ಚು ಲೀಡ್ ಕೊಡಬೇಕು. ಕನಿಷ್ಠ 50 ಸಾವಿರ ಮತಗಳ ಲೀಡ್ ಕೊಡಬೇಕು. ಅದಕ್ಕೆ ಅಲ್ಲಿ ಅವರು ಹೆಚ್ಚು ಕೆಲಸ ಮಾಡಬೇಕಿದೆ. ಚಾಮುಂಡೇಶ್ವರಿ ಕ್ಷೇತ್ರದ ಸಂಬಂಧ ನೇತೃತ್ವ ವಹಿಸಿಕೊಂಡು ಸಲಹೆ ನೀಡುತ್ತಾರೆ ಎಂದರು.

ಅರುಣ್ ಸತ್ಯಪ್ಪ, ರಾಕೇಶ್ ಪಾಪಣ್ಣ, ಬಸವಣ್ಣ ಗೋಪಾಲಪುರ, ಉದ್ಬೂರು ಕೃಷ್ಣ, ನಂಜಪ್ಪ ಕೆಸರೆ, ಮಾದೇಗೌಡ ಯರಗನಹಳ್ಳಿ, ನಾರಾಯಣ ಕಡಕೊಳ, ಕೂರ್ಗಳ್ಳಿ ಮಹದೇವ, ಮಾರ್ಬಳ್ಳಿ ಕುಮಾರ್, ಬೀರಿಹುಂಡಿ ಬಸವಣ್ಣ, ಕೆಂಪನಾಯಕ, ಸಿದ್ದರಾಮೇಗೌಡ, ಸುರೇಶ್ ಹಾರೋಹಳ್ಳಿ, ಹೊಸಹುಂಡಿ ರಘು, ನಾಗರಾಜ್, ಕೆ.ಮರೀಗೌಡ, ಮಾವಿನಹಳ್ಳಿ ಸಿದ್ದೇಗೌಡ ಕಮಿಟಿ ಸದಸ್ಯರಾಗಿರುತ್ತಾರೆ ಎಂದು ಸಿದ್ದರಾಮಯ್ಯ ಹೆಸರು ಪ್ರಕಟಿಸಿದರು. ಈ ನಡುವೆ ಪರ–ವಿರೋಧ ವ್ಯಕ್ತವಾಗಿ ಗದ್ದಲ ಉಂಟಾಯಿತು. ಯಾವುದನ್ನೂ ನಂತರ ನಿರ್ಧಾರ ಮಾಡೋಣ ಎಂದು ಸಿದ್ದರಾಮಯ್ಯ ಸಭೆಯಿಂದ ನಿರ್ಗಮಿಸಿದರು.

ಸಿದ್ದರಾಮಯ್ಯ ಸರ್ಕಾರದ ಗ್ಯಾರಂಟಿಗಳು ನೇರವಾಗಿ ಫಲಾನುಭವಿಗಳಿಗೆ ತಲುಪಿವೆ

ಮೈಸೂರು,ಏ.2(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಕಾರ್ಯಕ್ರಮಗಳು ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿರುವುದರಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಗಿದೆ ಎಂದು ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಶಕ್ತಿಯೋಜನೆ, ಗೃಹಲಕ್ಷ್ಮೀ, ಗೃಹಜ್ಯೋತಿ, ಯುವನಿಧಿ, ಅನ್ನಭಾಗ್ಯಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದ್ದು, ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿವೆ. ಅಲ್ಲದೆ, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಈ ಯೋಜನೆಗಳ ಸೌಲಭ್ಯ ಉಪಯೋಗವಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದಾದ್ಯಂತ ಪ್ರವಾಸ ಮಾಡಿ, ಗ್ಯಾರಂಟಿ ಯೋಜನೆಗಳು, ಇಂದಿರಾ ಕ್ಯಾಂಟೀನ್ ಸೇರಿದಂತೆ ಇನ್ನಿತರ ಬಹುನಿರೀಕ್ಷಿತ ಯೋಜನೆಗಳ ಬಗ್ಗೆ ಫಲಾನುಭವಿಗಳಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಕಾರ್ಯಕರ್ತರಿಗೆ ಗ್ಯಾರಂಟಿ ಕಾರ್ಯಕ್ರಮಗಳ ಮಹತ್ವ ತಿಳಿಸಿ, ಗ್ರಾಮೀಣ ಪ್ರದೇಶದಲ್ಲೂ ಜನರಿಗೆ ಗ್ಯಾರಂಟಿ ಕಾರ್ಯಕ್ರಮಗಳ ಬಗ್ಗೆ ತಿಳಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಪೂರಕವಾದ ವಾತಾವರಣ ನಿರ್ಮಾಣವಾಗಿದೆ ಎಂದು ಅಭಿಪ್ರಾಯಪಟ್ಟರು.

ಸರ್ವಾಧಿಕಾರಿ ಧೋರಣೆ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರಂಕುಶಪ್ರಭುತ್ವದ ಸ್ಥಾಪನೆ ಮಾಡಲು ಪ್ರಯತ್ನಿಸುತ್ತಿದೆ. ಈ ಅಪಾಯಕಾರಿ ಬೆಳವಣಿಗೆ ದೇಶದ ಜನರಿಗೆ ಮನವರಿಕೆಯಾಗುತ್ತಿದೆ. ಎಲ್ಲೆಡೆ ವಿರೋಧ ವ್ಯಕ್ತವಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಈ ಬಾರಿ ಬಿಜೆಪಿಯನ್ನು ಸ್ಪಷ್ಟವಾಗಿ ವಿರೋಧಿಸಬೇಕು. ಬಿಜೆಪಿ ಹಿಂದುತ್ವ ರಾಷ್ಟ್ರದ ಕಲ್ಪನೆಯನ್ನು ಮುಂದಿಟ್ಟುಕೊಂಡು ಸಂವಿಧಾನ ಬದಲಾಯಿಸುವ ಹುನ್ನಾರ ನಡೆಸುತ್ತಿದೆ. ಈ ಉದ್ದೇಶ ಸಾಧನೆಗಾಗಿ ದೇಶದ್ರೋಹಿ ಕಾಯ್ದೆ, ಸಿಬಿಐ ದುರ್ಬಳಕೆ ಹಾಗೂ ಇತ್ತೀಚೆಗೆ ಚುನಾವಣಾ ಬಾಂಡ್ ಮೂಲಕವೂ ಕಾರ್ಯಾಚರಣೆ ನಡೆಸುತ್ತಿದೆ. ಎಂಟು ವರ್ಷಗಳ ಹಿಂದೆಯೇ ಪ್ರಧಾನಿ ನರೇಂದ್ರ ಮೋದಿಯವರು ಕಾಂಗ್ರೆಸ್ ಮುಕ್ತ ಭಾರತ ಮಾಡುತ್ತೇನೆ ಎಂದು ವಿರೋಧ ಪಕ್ಷಗಳನ್ನು ಮುಗಿಸುವ ಕೆಲಸ ಆರಂಭಿಸಿದ್ದರು. ಇಂದು ಕಾಂಗ್ರೆಸ್ ಪಕ್ಷದ ಆದಾಯ ಮೂಲಗಳನ್ನು ನಾಶ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯಗಳಿಗೆ ಹಣಕಾಸು ಸಂದಿಗ್ಧತೆ ಉಂಟು ಮಾಡಿ ಸ್ವಾಯತ್ತತೆ ಹಾಳು ಮಾಡಲಾಗುತ್ತಿದೆ. ಆದರೆ ಈ ಕುರಿತು ಬಹಿರಂಗ ಚರ್ಚೆಗೆ ಆಹ್ವಾನಿಸಿದರೂ ಸ್ಪಂದಿಸುತ್ತಿಲ್ಲ. ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಚರ್ಚೆಗೆ ಬರಲು ಸಿದ್ಧವಿಲ್ಲ. ಈ ಎಲ್ಲಾ ಅಂಶಗಳನ್ನು ರಾಜ್ಯದ ಜನತೆ ಅರ್ಥ ಮಾಡಿಕೊಳ್ಳಬೇಕು. ಮೋದಿ ಅವರ ಎಲ್ಲ ಭರವಸೆಗಳು ವೈಫಲ್ಯಗಳಾಗಿ ಬದಲಾಗಿದ್ದು, ರೈತರ ಆದಾಯ ಸುಧಾರಣೆಯಾಗಿಲ್ಲ, ಜನರಿಗೆ ಆಶ್ರಯಕ್ಕೆ ಮನೆಯಾಗಲೀ, ಉತ್ತಮ ಕುಡಿಯುವ ನೀರಾಗಲೀ, ಯುವಕರಿಗೆ ಉದ್ಯೋಗವಾಗಲೀ ದೊರೆತಿಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನುಡಿದಂತೆ ನಡೆದಿದೆ. ದೇಶದ ಉಳಿವಿಗಾಗಿ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.

ರಂಗಾಯಣ ಚಿಣ್ಣರ ಮೇಳ ಹೌಸ್‌ಫುಲ್

• ಎಲ್ಲಾ 300 ಅರ್ಜಿ ವಿತರಣೆ • ಸರಿರಾತ್ರಿಯಿಂದ ಕಾದು ಅರ್ಜಿ ಪಡೆದ ಪೋಷಕರು



ರಂಗಾಯಣದಲ್ಲಿ ಚಿಣ್ಣರ ಮೇಳದ ಅರ್ಜಿ ಪಡೆಯಲು ಸಾಲುಗಟ್ಟಿ ನಿಂತಿರುವ ಪೋಷಕರು.

ಮೈಸೂರು,ಏ.2(ಎಂಟಿವೈ)– ಪ್ರತಿಷ್ಠಿತ ಮೈಸೂರು ರಂಗಾಯಣದಲ್ಲಿ ಏ.12ರಿಂದ ಆರಂಭವಾಗುವ 'ಚಿಣ್ಣರ ಮೇಳ'ಕ್ಕೆ ತಮ್ಮ ಮಕ್ಕಳನ್ನು ಸೇರಿಸಲು ಪೋಷಕರು ಕಳೆದ ಮಧ್ಯರಾತ್ರಿಯಿಂದಲೇ ರಂಗಾಯಣದ ಮುಂದೆ ಸಾಲುಗಟ್ಟಿ ನಿಂತು ಅರ್ಜಿ ಪಡೆದುಕೊಂಡರು.

ಪ್ರತಿವರ್ಷ ರಂಗಾಯಣ ನಡೆಸುವ ಬೇಸಿಗೆ ಮೇಳಕ್ಕೆ ಹೆಚ್ಚಿನ ಬೇಡಿಕೆ ವ್ಯಕ್ತವಾಗುತ್ತಿದ್ದು, ರಂಗಾಯಣದಲ್ಲಿ ನಡೆಯುವ ಬೇಸಿಗೆ ಶಿಬಿರ ಚಿಣ್ಣರ ಮೇಳದಲ್ಲಿ ತಮ್ಮ ಮಕ್ಕಳು ಪಾಲ್ಗೊಳ್ಳಲೆಂದು ಬಯಸುವವರ ಸಂಖ್ಯೆ ಹೆಚ್ಚಾಗಿದೆ. ಈ ವರ್ಷ ಏ.12ರಿಂದ ಮೇ 7 ಅಥವಾ 8ರವರೆಗೆ ಮೇಳ ನಡೆಯಲಿದ್ದು, ಈ ಬಾರಿ 300 ಮಕ್ಕಳು ಪಾಲ್ಗೊಳ್ಳುವ ಅವಕಾಶವಿದೆ. ಕಳೆದ ಮಧ್ಯರಾತ್ರಿಯಿಂದಲೇ ಪೋಷಕರು ಜಾಗರಣೆಯಂತೆ ರಂಗಾಯಣದ ಗೇಟ್ ಮುಂದೆ ಸರದಿ ಸಾಲಿನಲ್ಲಿ ನಿಲ್ಲುವ ಮೂಲಕ ಪ್ರಯಾಸಪಟ್ಟು ಅರ್ಜಿ ಪಡೆದರು.

ಪೋಷಕರೇ ಚೀಟಿ ಬರೆದರು: ಚಿಣ್ಣರ ಮೇಳಕ್ಕೆ ಮಕ್ಕಳನ್ನು ಸೇರಿಸಲು ಸರದಿ ಸಾಲಿನಲ್ಲಿ ನಿಂತಿದ್ದ ಪೋಷಕರು ಮೊದಲು ಬಂದವರ ಹೆಸರನ್ನು ತಾವೇ ಪಟ್ಟಿ ಮಾಡುವ ಮೂಲಕ ಗೋಲ್‌ಮಾಲ್ ತಡೆಗೆ ಸಹಕರಿಸಿದರು. 1ರಿಂದ 300ರವರೆಗೆ ಪೋಷಕರ ಹೆಸರು, ಮಕ್ಕಳ ಹೆಸರು, ಇನ್ನಿತರ ಮಾಹಿತಿಯುಳ್ಳ ಪಟ್ಟಿಯನ್ನು ಮಾಡಿ ಬೆಳಗ್ಗೆ ಬಂದ ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಅವರಿಗೆ ನೀಡಿದರು.

ಬೆಳಗ್ಗೆ 10 ಗಂಟೆಗೆ ಅರ್ಜಿ ವಿತರಣಾ ಕಾರ್ಯ ಆರಂಭಿಸಲಾಯಿತು. 11.45ರ ವೇಳೆಗೆ ಎಲ್ಲಾ 300 ಮಂದಿಗೂ 100 ರೂ. ಪಡೆದು ಅರ್ಜಿ ನೀಡಲಾಯಿತು. ಚಿಣ್ಣರ ಮೇಳಕ್ಕೆ 3000 ಸಾವಿರ ರೂ. ಶುಲ್ಕ ನಿಗದಿ ಮಾಡಲಾಗಿದೆ ಆದರೂ ರಂಗಾಯಣದ ಚಿಣ್ಣರ ಮೇಳದಲ್ಲಿ ಕಲಿಸುವ ಕಲೆಗಳ ಮಹತ್ವ ಅರಿತು ಚಿಣ್ಣರ ಮೇಳಕ್ಕೆ ತಮ್ಮ ಮಕ್ಕಳನ್ನು ಸೇರಿಸಲು ಪೋಷಕರು ಮುಗಿಬೀಳುತ್ತಾರೆ.

ನಿರಾಸೆ: ನಿಗಧಿತ ಸಂಖ್ಯೆ ಪೂರ್ಣಗೊಂಡರೂ ಇನ್ನಷ್ಟು ಅರ್ಜಿ ವಿತರಿಸಬಹುದೆಂಬ ನಿರೀಕ್ಷೆಯಿಂದ 50ಕ್ಕೂ ಹೆಚ್ಚು ಮಂದಿ ಕಾಯುತ್ತಾ ಕುಳಿತಿದ್ದರು. ಆದರೆ ಸಾಕಷ್ಟು ಮಂದಿ ಅರ್ಜಿ ಸಿಗದೆ ಇರುವುದನ್ನು ಖಚಿತಪಡಿಸಿಕೊಂಡು ವಾಪಸ್ಸಾದರು. ಆದರೂ, ಕೆಲವರು ಮಧ್ಯಾಹ್ನ 12.30ವರೆಗೂ ರಂಗಾಯಣದ ಆವರಣದಲ್ಲೇ ಕಾಯುತ್ತಿದ್ದರು.

> ಈ ವರ್ಷದ ಚಿಣ್ಣರ ಮೇಳವನ್ನು 'ಸಮರಸವೇ ಜೀವನ' ಆಶಯದಲ್ಲಿ ನಡೆಸಲಾಗುತ್ತಿದ್ದು ರಂಗಭೂಮಿ, ಸಾಂಸ್ಕೃತಿಕ ಕಲೆಗಳು, ಪರಿಸರ ಚಟುವಟಿಕೆ ಸೇರಿದಂತೆ ನಾನಾ ಕಲಿಕೆಯನ್ನು ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳಿಗೆ ಹೇಳಿಕೊಡಲಾಗುತ್ತದೆ. ಪ್ರತಿ ವರ್ಷದಂತೆ ಈ ಬಾರಿಯೂ ಮೇಳದಲ್ಲಿ 300 ಮಕ್ಕಳಿಗೆ ಅವಕಾಶ ನೀಡಲಾಗಿದೆ. ಅರ್ಜಿ ವಿತರಣೆಯಲ್ಲಿ ಯಾವುದೇ ಗೊಂದಲ ಉಂಟಾಗಲಿಲ್ಲ. ಮೊದಲು ಬಂದವರಿಗೆ ಆದ್ಯತೆ ನೀಡಲಾಗಿದೆ. ಮಕ್ಕಳ ವಯಸ್ಸಿಗೆ ಅನುಗುಣವಾಗಿ 9ರಿಂದ 10 ತಂಡಗಳನ್ನು ಮಾಡಲಾಗುತ್ತದೆ. ರಂಗಾಯಣ 40 ಮಂದಿ ಕಲಾವಿದರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳುವರು. ಚಟುವಟಿಕೆಗಳ ಸಹಾಯಕರಾಗಿ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳೂ ಕಾರ್ಯ ನಿರ್ವಹಿಸಲಿದ್ದಾರೆ ಎಂದರು.
>
> ಮೇಳದಲ್ಲಿ ಮಕ್ಕಳ ಪ್ರಸಾದನವನ್ನು ರಂಗಾಯಣದ ಕಲಾವಿದರಾದ ಶಶಿಕಲಾ, ಪರಿಕರಗಳನ್ನು ಕೆ.ಆರ್.ನಂದಿನಿ ನೋಡಿಕೊಳ್ಳಲಿದ್ದಾರೆ. ಗೀತಾ ಮೊಂಟಡ್ಕ ಮೇಳದ ಸಂಚಾಲಕರಾಗಿದ್ದಾರೆ. ನಿತಿನ್, ಕೃಷ್ಣ ನಾರ್ಣಕಜೆ, ಭಾಗ್ಯ, ರವಿ, ಸಚಿನ್, ರಮೇಶ್ ಇತರರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳಲಿದ್ದಾರೆ. ನಾಟಕೋತ್ಸವ ಸಂದರ್ಭದಲ್ಲಿ ಹೆಚ್ಚಿನ ಸಂಪನ್ಮೂಲ ವ್ಯಕ್ತಿಗಳ ಅಗತ್ಯವಿದ್ದರೆ ಸೇರಿಸಿಕೊಳ್ಳಲಾಗುವುದು.
>
> -ಶ್ರೀಮತಿ ನಿರ್ಮಲಾ ಮಠಪತಿ, ರಂಗಾಯಣ ಉಪನಿರ್ದೇಶಕಿ



ಮೈಸೂರು ಮಹಾನಗರ ಪಾಲಿಕೆ,
ಮೈಸೂರು
ನಂ. MYS-LBPAS-24035/23-24/BP
ದಿನಾಂಕ : 25/3/24

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ, ಎನ್.ಆರ್.ಮೊಹಲ್ಲಾ, ರಾಜೀವನಗರ, ದೇವನೂರು ಬಡಾವಣೆ, 1ನೇ ಹಂತ, 17ನೇ ಕ್ರಾಸ್, ಸ್ವತ್ತಿನ ಸಂಖ್ಯೆ : 907 ರಲ್ಲಿ ಧರ್ಮಶಾಲಾ ಕಟ್ಟಡ ನಿರ್ಮಿಸಲು ರಹದಾರಿ ಕೋರಿ ಜಮಯತ್ ಇ ಕುದಾದ್ ಟ್ರಸ್ಟ್ (ರಿ) ಮೈಸೂರು ಇವರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಾಗೆಯು ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಯಾಗಿರುವ ಮಹಾಯೋಜನೆ (ಪರಿಷ್ಕೃತ-II) 2031 ರನ್ವಯ ವಸತಿ ವಲಯಕ್ಕೆ ಕಾಯ್ದಿರಿಸಲ್ಪಟ್ಟಿರುತ್ತದೆ. ಪ್ರಸ್ತುತ ಈ ನಿವೇಶನದಲ್ಲಿ ಉದ್ದೇಶಿಸಲಾಗಿರುವ ಧರ್ಮಶಾಲಾ ಕಟ್ಟಡದ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು / ಸಲಹೆಗಳಿದ್ದಲ್ಲಿ ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿನದೊಳಗಾಗಿ ಲಿಖಿತ ರೂಪದಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಮೈಸೂರು ಮಹಾನಗರ ಪಾಲಿಕೆಗೆ ಸಲ್ಲಿಸಬಹುದಾಗಿದೆ.

ಸಹಿ/- ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು
ಹುಲ್ಲಹಳ್ಳಿ ರಸ್ತೆ ನಂಜನಗೂಡು-571301
ಇ-ಮೇಲ್:apmcnanjanagud@rediffmail.com,
ದೂರವಾಣಿ: 08221-226309

ಸಂ.ಕೃಉಮಾಸ(ನಂ)/01/2024-25 ದಿನಾಂಕ: 02.04.2024

ತಿದ್ದುಪಡಿ ಪ್ರಕಟಣೆ

ಸಮಿತಿಯ ಪ್ರಕಟಣೆ ಸಂಖ್ಯೆ;ಕೃಉಮಾಸ(ನಂ)/760/2023-24, ದಿನಾಂಕ: 15/03/2024 ರಲ್ಲಿ, ಕ್ರಮ ಸಂಖ್ಯೆ (01) ರಲ್ಲಿ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಎಡ ಮತ್ತು ಬಲ ಭಾಗದಲ್ಲಿನ 08 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳನ್ನು ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲು ಪ್ರಕಟಣೆ ಹೊರಡಿಸಲಾಗಿದ್ದು, ಕ್ರಮ ಸಂಖ್ಯೆ (01) ರಲ್ಲಿನ ಮಳಿಗೆ ಸಂಖ್ಯೆ 04 ನ್ನು ಮಳಿಗೆ ಸಂಖ್ಯೆ 03 ಎಂದು ತಿದ್ದುಪಡಿ ಮಾಡಲಾಗಿದೆ.

ಸಹಿ/- ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ನಂಜನಗೂಡು

ಸಹಿ/- ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ನಂಜನಗೂಡು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್. ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು — ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ, 9731469871
ಹುಣಸೂರು — ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು, 9448720626
ಮಂಡ್ಯ — ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ, 8762960325
ಶ್ರೀರಂಗಪಟ್ಟಣ — ವಿನಯ್ ಕಾರೇಕುರ, ಶ್ರೀರಂಗಪಟ್ಟಣ, 9686893234
ಯಳಂದೂರು — ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು, 9844349191
ಚಾಮರಾಜನಗರ — ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ, 9242265657
ಟಿ. ನರಸೀಪುರ — ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ — ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426
ಕೆ.ಆರ್. ನಗರ — ಕೆ.ಟಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ಬಿ.ಎಂ.ರಸ್ತೆ, ಕೆ.ಆರ್. ನಗರ. 9448021368
ಮಳವಳ್ಳಿ — ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್-571430, 9632407806
ಕೊಳ್ಳೇಗಾಲ — ರಾಜು, ಮೈಸೂರು ಮಿತ್ರ ರಿಪೋರ್ಟರ್, #101, ಹುರಳಕೇರಿ ಬೀದಿ, ಕೊಳ್ಳೇಗಾಲ, 9916621007
ಹಾಸನ — ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175
ಕುಶಾಲನಗರ — ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ, 9845698401
ಜಯಪುರ — ಬಿಳಿಗಿರಿ, ಜಯಪುರ, 9945479288
ಪಿರಿಯಾಪಟ್ಟಣ — ವೀರೇಶ್, ಪಿರಿಯಾಪಟ್ಟಣ, 8660057128
ವಿರಾಜಪೇಟೆ — ಮಂಜುನಾಥ, ವಿರಾಜಪೇಟೆ, 9900949353
ಕೆ.ಆರ್.ಪೇಟೆ — ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ, 9449326847, 7022767438
ಹೆಚ್.ಡಿ.ಕೋಟೆ — ಮಂಜುನಾಥ ವಿಸ್., ಹೆಚ್.ಡಿ.ಕೋಟೆ, 9483574452
ಕೆ.ಎಂ.ದೊಡ್ಡಿ — ಸತೀಶ್ ವಿ.ಎಲ್, ಕೆ.ಎಂ.ದೊಡ್ಡಿ, 9242120338
ನಂಜನಗೂಡು — ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್-571301, 9901602226
ಹುಣಸೂರು — ಹೆಚ್.ಆರ್. ಕೃಷ್ಣಕುಮಾರ್ (ಜಿನ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು, 9060406093
ಕೊಳ್ಳೇಗಾಲ — ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ, 9448576247, 7899849858

12ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,
ದುಃಖತಪ್ತರು: ಲಕ್ಷ್ಮೀ, ಕೃಷ್ಣ ಹಾಗೂ ಕುಟುಂಬವರ್ಗದವರು, ಕೆ.ಜಿ. ಕೊಪ್ಪಲ್, ಜಯನಗರ, ಮೈಸೂರು
ಶ್ರೀ ಸುರೇಶ್
ನಿಧನ: 3-4-2012

ಶುಭ ಸ್ವೀಕಾರ ಸಮಾರಂಭ



ನಮ್ಮ ಪ್ರೀತಿಯ ಶ್ರೀಮತಿ CVN ರಾಜಲಕ್ಷ್ಮಿ ರವರು ದಿ: 23-03-2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ದಿನಾಂಕ: 3ನೇ ಏಪ್ರಿಲ್ 2023 (ಗುರುವಾರ)
ಸಮಯ: ಮಧ್ಯಾಹ್ನ 1 ಘಂಟೆಗೆ
ವಿಳಾಸ: ಶ್ರೀ ರಮಣ ಜ್ಞಾನ ಕೇಂದ್ರ ಟ್ರಸ್ಟ್ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು
ಸಂಪರ್ಕ: 8050672656
ಆ ಪ್ರಯುಕ್ತ ತಾವೆಲ್ಲರೂ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಅಪೇಕ್ಷಿಸುತ್ತೇವೆ.
ಶ್ರೀಮತಿ ಶ್ರೀ ಸಿ.ವಿ.ಎನ್. ಉಷಾ ಲಕ್ಷ್ಮೀಪತಿ
ಅಣ್ಣತಮ್ಮಂದಿರು ಮತ್ತು ಮೊಮ್ಮಕ್ಕಳು



ಇಂದು ತಲಕಾವೇರಿಯಲ್ಲಿ ಮಳೆಗಾಗಿ ಪ್ರಾರ್ಥನೆ



ಮಡಿಕೇರಿ, ಏ.2– ಕೊಡಗು ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಭೀಕರ ಬರ ಪರಿಸ್ಥಿತಿ ತಲೆದೋರಿದ್ದು, ಈ ಹಿನ್ನೆಲೆಯಲ್ಲಿ ಮಳೆಗಾಗಿ ಪ್ರಾರ್ಥಿಸಿ ಏ.3 ರಂದು ಪುಣ್ಯ ಕ್ಷೇತ್ರಗಳಾದ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯ ಮತ್ತು ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಶ್ರೀ ಕಾವೇರಮ್ಮೆ ಕೊಡವ ಅಮ್ಮ ಕೊಡವ ಹಿತರಕ್ಷಣಾ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಎಂ.ಬಿ.ದೇವಯ್ಯ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬರ ಪರಿಸ್ಥಿತಿಯಿಂದ ಹೊರಬರಲು ಕಾವೇರಿ ಮಾತೆಯೇ ಕೃಪೆ ತೋರಬೇಕಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಆಗಮಿಸಿ ದೈವ ಭಕ್ತರು ಕಾವೇರಿ ಯಲ್ಲಿ ಪೂಜೆ ಸಲ್ಲಿಸಿದ್ದಾರೆ. ನಾಡಿನೆಲ್ಲೆಡೆ ಉತ್ತಮ ಮಳೆಯಾಗಿ ಜನ ಜೀವನ ಸುಗಮವಾಗಲಿ ಎಂದು ಭಾಗಮಂಡಲದ ಭಗಂಡೇಶ್ವರ ದೇವಾಲಯ ಮತ್ತು ತಲಕಾವೇರಿಯಲ್ಲಿ ಏ.3ರಂದು ಬೆಳಗ್ಗೆ 9.30 ಗಂಟೆಗೆ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದರು.

ಪೂಜಾ ಕಾರ್ಯದ ಮೂಲಕ ಮಳೆಗಾಗಿ ಪ್ರಾರ್ಥಿಸಲಾಗುವುದು. ತಂತ್ರಿಗಳ ಸಲಹೆಯಂತೆ ಪೂಜಾ ಕಾರ್ಯದಲ್ಲಿ ಎಳೆನೀರು ಅಭಿಷೇಕ ಮಾಡಲಾಗುವುದು. ಜಿಲ್ಲೆಯ ಎಲ್ಲಾ ಭಕ್ತರು ಎಳೆನೀರಿನೊಂದಿಗೆ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳಬೇಕು. ರಾಜ್ಯದೆಲ್ಲೆಡೆ ಬರಗಾಲವಿದ್ದು, ಜನ ಜಾನುವಾರುಗಳು, ಕಾಡುಪ್ರಾಣಿಗಳಿಗೂ ನೀರಿನ ಕೊರತೆ ಕಾಡುತ್ತಿದೆ. ಕೊಡಗು ಜಿಲ್ಲೆಯಲ್ಲಿ 1924ರಲ್ಲಿ ಇಂತಹ ಭೀಕರ ಬರ ಪರಿಸ್ಥಿತಿ ಬಂದಿತ್ತು. ಇನ್ನುಳಿದ ವರ್ಷಗಳಲ್ಲಿ ಉತ್ತಮ ಮಳೆ, ಬೆಳೆಯಾಗಿತ್ತು ಎಂದು ಹೇಳಿದರು.

ಬರಕ್ಕೆ ಸರ್ಕಾರಗಳೇ ಕಾರಣ: ಇದೀಗ ಭೀಕರ ಬರ ಬಂದಿದ್ದು, ನದಿಗಳು ಸೇರಿದಂತೆ ಜಲಮೂಲಗಳು ಬತ್ತುತ್ತಿವೆ. ಇಂತಹ ಬರ ಪರಿಸ್ಥಿಗೆ ಆಳುವ ಸರ್ಕಾರಗಳೇ ಕಾರಣ. ಸರ್ಕಾರಗಳು ಅಭಿವೃದ್ಧಿ ಹೆಸರಲ್ಲಿ ಬೇಕಾಬಿಟ್ಟಿ ಮರಗಳನ್ನು ಕಡಿರುವುದು ಬರಕ್ಕೆ ಮೂಲ ಕಾರಣವಾಗಿದೆ. ಅದರ ಪರಿಣಾಮವನ್ನು ಜನ ಮತ್ತು ಪ್ರಾಣಿ–ಪಕ್ಷಿ ಸಂಕುಲಗಳು ನೀರಿನ ಹಾಹಾಕಾರ ಅನುಭವಿಸುವಂತಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ಕಾವೇರಮ್ಮೆ ಕೊಡವ ಅಮ್ಮಕೊಡವ ಹಿತರಕ್ಷಣಾ ಚಾರಿಟಬಲ್‌ನ ಪ್ರಮುಖರಾದ ಮನು ಮುದ್ದಪ್ಪ, ಎಂ.ಕೆ.ಅಯ್ಯಣ್ಣ, ನಂದ ಕುಮಾರ್, ಸೋಮಯ್ಯ ಉಪಸ್ಥಿತರಿದ್ದರು.

ಮಳೆಗಾಗಿ ಜಲ ಮೂಲಗಳೇ ಆಕಾಶ ನೋಡುತ್ತಿವೆ

● ನೀರಿಲ್ಲದೇ ನದಿ ಒಡಲಿನಲ್ಲಿ ಬಂಡೆ, ಮರಳು ಗೋಚರ ● ಕೊಡಗಿನಲ್ಲೂ ಹೆಚ್ಚುತ್ತಿರುವ ತಾಪಮಾನ



ದುಬಾರೆಯ ಕಾವೇರಿ ನದಿಯಲ್ಲಿ ನೀರಿಲ್ಲದೆ ಬಂಡೆ ಮತ್ತು ಮರಳು ಗೋಚರವಾಗಿರುವುದು.

ಮಡಿಕೇರಿ, ಏ.2–ಕಾವೇರಿಯು ತವರು ಕೊಡಗು ಜಿಲ್ಲೆಯ ನದಿಗಳು ಮತ್ತು ಜಲ ಮೂಲಗಳೇ ಮಳೆಗಾಗಿ ಆಕಾಶ ನೋಡುವ ಪರಿಸ್ಥಿತಿ ಎದುರಾಗಿದೆ. ದಿನದಿಂದ ದಿನಕ್ಕೆ ತಾಪಮಾನ ಹೆಚ್ಚಾಗುತ್ತಿದ್ದು, ನದಿ ನೀರು ಬರಿದಾಗಿದೆ.

ಕಾವೇರಿ ನದಿ ನೀರು ಹರಿಯುವ ಪ್ರದೇಶವೆಲ್ಲವೂ ಬಯಲಿನಂತಾಗಿದ್ದು, ನದಿ ಒಡಲಿನಲ್ಲಿ ಕೇವಲ ಬಂಡೆ ಮತ್ತು ಮರಳು ಗೋಚರಿಸುತ್ತಿದೆ. ಕಾವೇರಿಯ ಉಗಮ ಸ್ಥಾನ ತಲಕಾವೇರಿಯಲ್ಲೂ ಬಿಸಿಲು ಮಿತಿ ಮೀರಿದೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನದಿ ನೀರು ಕ್ಷೀಣಿಸಿದ್ದು, ಭಕ್ತರ ಸ್ನಾನಕ್ಕೆ ಕಷ್ಟವಾಗಿದೆ. ನಾಪೋಕ್ಲು ಭಾಗದ ಒಂದೆರಡು ಕಡೆ ಹನಿ ಮಳೆ ಸುರಿದಿದೆಯೇ ಹೊರತು, ಈ ವೇಳೆಗೆ ಆಗಬೇಕಾದಷ್ಟು ಪ್ರಮಾಣದಲ್ಲಿ ಮಳೆ ಜಿಲ್ಲೆಯ ಯಾವುದೇ ಭಾಗದಲ್ಲಿ ಆಗಿಲ್ಲ.

ಮಳೆ ಸುರಿಯದ ಕಾರಣ ಮತ್ತು ಕಳೆದ ಮಳೆಗಾಲದಲ್ಲಿ ಸಾಕಷ್ಟು ಮಳೆ ಕೊರತೆಯಾಗಿರುವುದರಿಂದ ಮಾರ್ಚ್ ತಿಂಗಳ ಬಿಸಿಲಿಗೆ ನದಿಗಳು ಬರಡಾಗಿವೆ. ಸಿದ್ದಾಪುರದ ಗುಹ್ಯ–ಅಗಸ್ತ್ಯೇಶ್ವರ ದೇವಾಲಯ ವ್ಯಾಪ್ತಿಯ ನದಿ ಪ್ರದೇಶ ಮೈದಾನದಂತಾಗಿದೆ. ಸಾಕಷ್ಟು ನೀರು ಇರುತ್ತಿದ್ದ ದುಬಾರೆಯಲ್ಲಿ ನೀರೇ ಇಲ್ಲದೆ ಪ್ರವಾಸಿಗರು ಬರಿದಾದ ನದಿಯ ಬಂಡೆಗಳನ್ನು ನೋಡಿ ನಿರಾಶೆಯಿಂದ ಮರಳುತ್ತಿದ್ದಾರೆ. ಇಲ್ಲಿ ನಡೆಯುತ್ತಿದ್ದ ರ್‍ಯಾಫ್ಟಿಂಗ್ ಜಲ ಕ್ರೀಡೆಯನ್ನು ಸ್ಥಗಿತಗೊಳಿಸಲಾಗಿದೆ. ಮರಳಿನ ತಡೆಗೋಡೆ ನಿರ್ಮಿಸಿ ನೀರು ನಿಲ್ಲಿಸುವ ಪ್ರಯತ್ನ ಮಾಡಲಾಗಿತ್ತಾದರೂ, ಈಗ ನೀರೇ ಇಲ್ಲದ ಪರಿಸ್ಥಿತಿ ಉದ್ಭವಿಸಿದೆ.

ಜಿಲ್ಲೆಯ ನದಿ, ಜಲಮೂಲಗಳಂತೆ ಕೆರೆ, ಕೊಳವೆ ಬಾವಿಗಳು ಕೂಡ ಬತ್ತಿ ಹೋಗುತ್ತಿವೆ. ಅನೇಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನೀರು ತಲುಪಿಸುವ ಪರಿಕಲ್ಪನೆ ವಿಫಲವಾಗುತ್ತಿದೆ. ನೀರೇ ಇಲ್ಲದ ಮೇಲೆ ನೀರು ಸರಬರಾಜು ಮಾಡುವುದು ಹೇಗೆ? ಎನ್ನುವುದು ಗ್ರಾಪಂಗಳ ಅಸಹಾಯಕ ಪ್ರಶ್ನೆಯಾಗಿದೆ. ಒಂದೆರಡು ದಿನಗಳಲ್ಲಿ ಜಿಲ್ಲೆಗೆ ಉತ್ತಮ ಮಳೆಯಾಗದಿದ್ದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿ ಕುಡಿಯಲು ನೀರಿಲ್ಲದ ಪರಿಸ್ಥಿತಿ ಎದುರಾಗಬಹುದು. ಕಾವೇರಿ ನಾಡಿನಲ್ಲೇ ನೀರಿಗಾಗಿ ಹಾಹಾಕಾರ ಆರಂಭಗೊಂಡಿರುವುದರಿಂದ ಕಾವೇರಿ ನದಿ ನೀರನ್ನು ಅವಲಂಬಿಸಿರುವ ಅಕ್ಕಪಕ್ಕದ ಜಿಲ್ಲೆಗಳ ಜನ ಕುಡಿಯಲು ಕೂಡ ನೀರಿಲ್ಲದೆ ಪರದಾಡುತ್ತಿದ್ದಾರೆ.

ಕಾಫಿ ಫಸಲು ಕ್ಷೀಣಿಸುವ ಆತಂಕ

ಕಾಫಿ ತೋಟಗಳ ಕೆರೆಗಳು ಬತ್ತಿ ಹೋಗಿದ್ದು, ಬೆಳೆಗಾರರು ಗಿಡಗಳಿಗೆ ನೀರು ಹಾಯಿಸಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ನದಿಗಳಲ್ಲೂ ನೀರಿಲ್ಲದೆ ಇರುವುದರಿಂದ ಮತ್ತು ಮಳೆ ಬೀಳದ ಕಾರಣ ಗಿಡಗಳಿಗೆ ಹಾನಿಯಾಗಿ ಮುಂದಿನ ವರ್ಷ ಫಸಲು ಕ್ಷೀಣಿಸುವ ಆತಂಕ ಎದುರಾಗಿದೆ. ಕನಿಷ್ಠ 3–4 ದಿನ ಉತ್ತಮ ಮಳೆಯಾದರೆ ಒಳಿತು ಎಂದು ಬೆಳೆಗಾರರು ಆಕಾಶ ನೋಡುತ್ತಿದ್ದಾರೆ. ಈಗಾಗಲೇ ವಿವಿಧ ಸಂಘ–ಸಂಸ್ಥೆಗಳು, ಭಕ್ತರು, ರೈತರು, ರಾಜಕಾರಣಿಗಳು ಸೇರಿದಂತೆ ಅನೇಕರು ತಲಕಾವೇರಿ ಹಾಗೂ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಮಳೆಗಾಗಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಆದರೆ, ಮಳೆ ಬಾರದೆ ಜನ ಕಂಗಾಲಾಗಿದ್ದಾರೆ.

ಕೊಡಗಿನಲ್ಲಿ 33–35 ಸೆಲ್ಸಿಯಸ್ ಉಷ್ಣಾಂಶ

ಒಂದೆಡೆ ನದಿಗಳು ಬರಿದಾಗುತ್ತಿದ್ದರೆ, ಮತ್ತೊಂದೆಡೆ ಬಿಸಿಲಿನ ಬೇಗೆ ಜನರನ್ನು ಹೈರಾಣಾಗಿಸಿದೆ. ಸದಾ ಹವಾಗುಣದ ಸಮತೋಲ ಕಾಯ್ದುಕೊಂಡು ಬರುತ್ತಿದ್ದ ದಕ್ಷಿಣದ ಕಾಶ್ಮೀರ ಖ್ಯಾತಿಯ ಕೊಡಗಿನಲ್ಲಿ ಈ ವರ್ಷ ಮಾರ್ಚ್–ಏಪ್ರಿಲ್‌ನಲ್ಲಿ ಉಷ್ಣಾಂಶ 33 ರಿಂದ 35 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಳಿತವಾಗುತ್ತಿದೆ.

ಕೊಡಗು ಜಿಲ್ಲೆ ವಾತಾವರಣ ತಂಪಾಗಿರಬಹುದು ಎಂದು ಸಾವಿರಾರು ಪ್ರವಾಸಿಗರು ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಆದರೆ, ಇಲ್ಲಿನ ಉಷ್ಣಾಂಶ ಮತ್ತು ನೀರಿಲ್ಲದ ಪರಿಸ್ಥಿತಿಯನ್ನು ಕಂಡು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಏಪ್ರಿಲ್ ಅಂತ್ಯ ಮತ್ತು ಮೇ ತಿಂಗಳ ಪರಿಸ್ಥಿತಿ ಏನು ಎಂದು ನಿರಾಶೆಯಿಂದ ಮರಳುತ್ತಿದ್ದಾರೆ. ವನ್ಯಜೀವಿಗಳು ಕೂಡ ಮನುಷ್ಯರಂತೆ ನೀರಿನ ಕೊರತೆಯನ್ನು ಎದುರಿಸುತ್ತಿದ್ದು, ಕಾಡಿನಲ್ಲಿ ಕೆರೆಗಳು ಬತ್ತಿ ಹೋಗಿರುವುದರಿಂದ ತೋಟಗಳ ಕೆರೆಗಳನ್ನು ಹುಡುಕಿಕೊಂಡು ಕಾಡುಪ್ರಾಣಿಗಳು ಬರುತ್ತಿವೆ. ಆದರೆ, ಇಲ್ಲಿಯೂ ನದಿ, ಕೆರೆಗಳು ಬತ್ತಿ ಹೋಗಿವೆ. ಅಸಹಾಯಕ ಸ್ಥಿತಿ ಎದುರಾಗಿದೆ. ಅತಿಯಾದ ಬಿಸಿಲು ಮತ್ತು ಕಾಡ್ಗಿಚ್ಚಿನಿಂದ ಹಸಿರು ನಾಶವಾಗುತ್ತಿದ್ದು, ಕಾಡುಪ್ರಾಣಿಗಳಿಗೆ ಆಹಾರದ ಕೊರತೆಯೂ ಎದುರಾಗಿದೆ.

ಚರಂಡಿಗೆ ಉರುಳಿ ಬಿದ್ದ ವಾಹನ

ಮಡಿಕೇರಿ, ಏ.2–ಚಾಲಕನ ನಿಯಂತ್ರಣ ಕಳೆದುಕೊಂಡ ಪಿಕ್‌ಅಪ್ ವಾಹನವೊಂದು ರಸ್ತೆಬದಿಯ ಚರಂಡಿಗೆ ಉರುಳಿ ಬಿದ್ದ ಘಟನೆ ಅಮ್ಮತ್ತಿ ಒಂಟಿಯಂಗಡಿ ಸೇತುವೆ ಬಳಿ ಮಂಗಳವಾರ ನಡೆದಿದೆ. ಅದೃಷ್ಟವಶಾತ್ ವಾಹನದಲ್ಲಿದ್ದ ನಾಪೋಕ್ಲುವಿನ ಮಹಮ್ಮದ್ ಹಾಗೂ ಅವರ ಪುತ್ರ ಸಿದ್ದಿಕ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ನಾಪೋಕ್ಲುವಿನಿಂದ ಅಮ್ಮತ್ತಿಗೆ ಗೃಹೋಪಯೋಗಿ ಪೀಠೋಪಕರಣಗಳನ್ನು ಸಾಗಿಸುತ್ತಿದ್ದ ಪಿಕ್‌ಅಪ್ ವಾಹನ ಅಮ್ಮತ್ತಿ ಒಂಟಿಯಂಗಡಿಯ ಸೇತುವೆ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡಿದೆ. ಬಳಿಕ ರಸ್ತೆಬದಿಯ ದಿಬ್ಬ ಏರಿ ಚರಂಡಿಗೆ ಉರುಳಿ ಬಿದ್ದಿದೆ.

ಕೆ.ಆರ್.ಪೇಟೆಯಲ್ಲಿ ಸ್ಟಾರ್ ಚಂದ್ರು ಭರ್ಜರಿ ರೋಡ್ ಶೋ

ಜಿಲ್ಲೆಯ ಮಣ್ಣಿನ ಮಗನಾದ ನನ್ನ ಗೆಲ್ಲಿಸಿ; ಮನವಿ



ಕೆ.ಆರ್.ಪೇಟೆ ತಾಲೂಕಿನ ವಿವಿಧೆಡೆ ಸ್ಟಾರ್ ಚಂದ್ರು ರೋಡ್ ಶೋ ನಡೆಸಿ, ಮತಯಾಚಿಸಿದರು.

ಕೆ.ಆರ್.ಪೇಟೆ, ಏ.2– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ತಾಲೂಕಿನಾದ್ಯಂತ ರೋಡ್‌ಶೋ ನಡೆಸಿ ಮತಯಾಚಿಸಿದರು.

ವಿಠಲಾಪುರ, ಸೋಮನಹಳ್ಳಿ, ಆಲಂಬಾಡಿ ಕಾವಲು, ಅಕ್ಕಿಹೆಬ್ಬಾಳು, ಬೀರುವಳ್ಳಿ, ಮಂದಗೆರೆ, ದಬ್ಬೆಘಟ್ಟ, ಹಿರಿಕಳಲೆ, ಹೊಸಹೊಳಲು ಹಾಗೂ ಕೆ.ಆರ್.ಪೇಟೆ ಪಟ್ಟಣದಲ್ಲಿ ರೋಡ್ ಶೋ ನಡೆಸಿದರು. ಈ ವೇಳೆ ಶಾಲು ಹಾಕಿ ಪೇಟ ತೊಡಿಸಿ ವೆಂಕಟರಮಣೇಗೌಡ ಅವರನ್ನು ಸನ್ಮಾನಿಸಲಾಯಿತು.

ರೋಡ್ ಶೋ ಸಮಯದಲ್ಲಿ ಬಿರು ಬಿಸಲನ್ನು ಲೆಕ್ಕಿಸದ ಗ್ರಾಮಸ್ಥರು ರಸ್ತೆ ಮಧ್ಯದಲ್ಲೇ ಜಮಾಯಿಸಿದ್ದರು. ಅಭ್ಯರ್ಥಿ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಪಟಾಕಿ ಸಿಡಿಸಿ ಸ್ವಾಗತಿಸಿದರೆ ಮತ್ತೆ ಕೆಲವು ಕಡೆ ಡೋಲು ಬಡಿದು ಸ್ವಾಗತಿಸಿದರು.

ಜಿಲ್ಲೆಯ ಮಣ್ಣಿನ ಮಗ: ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಗ್ರಾಮಗಳಿಗೆ ತೆರಳಿದ ಸಂದರ್ಭದಲ್ಲಿ ಮಾತನಾಡಿ, ನಾನು ಈ ಜಿಲ್ಲೆಯ ಮಣ್ಣಿನ ಮಗ. ಕಾಂಗ್ರೆಸ್ ಪಕ್ಷದಿಂದ ಚುನಾವಣೆಗೆ ಇಳಿದಿದ್ದೇನೆ. ಜಿಲ್ಲೆಯ ರೈತನ ಮಗನನ್ನು ಬೆಂಬಲಿಸಿ ಆಶೀರ್ವದಿಸಬೇಕೆಂದು ಮತದಾರರಲ್ಲಿ ಮನವಿ ಮಾಡಿದರು.

ಜಿಲ್ಲೆಯ ಅಭಿವೃದ್ಧಿಯೇ ನನ್ನ ಗುರಿ. ಲೋಕಸಭೆಯಲ್ಲಿ ನಿಮ್ಮೆಲ್ಲರ ದನಿಯಾಗಿ, ಅನ್ನದಾತನ ಬೆನ್ನಿಗೆ ನಿಂತು ಕೆಲಸ ಮಾಡುತ್ತೇನೆ. ನನಗೊಂದು ಅವಕಾಶ ಕೊಟ್ಟು ಆಶೀರ್ವದಿಸಿ ಎಂದು ಮತಯಾಚಿಸಿದರು.

ಕಾಂಗ್ರೆಸ್ ಬಡವರ ಪರ. ದೀನ–ದಲಿತರ ಉದ್ಧಾರಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ ಅವರು ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ. ಅವರ ಕೈ ಬಲಪಡಿಸಲು, ಜಿಲ್ಲೆಯ ಅಭಿವೃದ್ಧಿಗಾಗಿ ನನ್ನನ್ನು ಬೆಂಬಲಿಸಿ ಎಂದರು.

ಅಭಿವೃದ್ಧಿ ಕಾಮಗಾರಿಗಳಿಗೆ ಶರವೇಗ: ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಮಾತನಾಡಿ, ನುಡಿದಂತೆ ನಡೆಯುವ ಪಕ್ಷ ಕಾಂಗ್ರೆಸ್. ದೇಶದ ಅಭಿವೃದ್ಧಿ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಕಳೆದ ಹತ್ತು ತಿಂಗಳಲ್ಲಿ ಜಿಲ್ಲೆಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇ ಇದಕ್ಕೆ ಸಾಕ್ಷಿ. ಐದು ವರ್ಷದಿಂದ ಕುಂಠಿತವಾಗಿದ್ದ ಅಭಿವೃದ್ಧಿ ಕಾಮಗಾರಿಗಳು ಈಗ ಶರವೇಗದಲ್ಲಿ ಸಾಗುತ್ತಿವೆ ಎಂದರು. ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಪಂಚ ಗ್ಯಾರಂಟಿ ಜಾರಿಯಿಂದ ಇಂದು ಪ್ರತಿ ಮನೆಗೆ 5 ಸಾವಿರ ಬರುತ್ತಿದೆ. ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ ನಡೆದಿದೆ. ಮೋದಿ ಸರ್ಕಾರ ಏನು ಮಾಡಿದೆ? ರಾಜ್ಯದಲ್ಲಿ ಜೆಡಿಎಸ್ ಎಲ್ಲಿದೆ? ಈ ಚುನಾವಣೆಯಲ್ಲಿ ಜಿಲ್ಲೆಯವರೇ ಆದ ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸಬೇಕು ಎಂದರು. ಮಂಡ್ಯ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಬಿ.ಎಲ್.ದೇವರಾಜ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್ ಸೇರಿದಂತೆ ತಾಲೂಕಿನ ಹಲವು ಕಾಂಗ್ರೆಸ್ ಮುಖಂಡರು ಪ್ರಚಾರ ನಡೆಸಿದರು.

ಇಂದು ಸುಮಲತಾ ನಿರ್ಧಾರ ಘೋಷಣೆ

ಮಂಡ್ಯ, ಏ.2– ಬಿಜೆಪಿಯಿಂದ ಟಿಕೆಟ್ ಕೈ ತಪ್ಪಿರುವುದರಿಂದ ಲೋಕಸಭಾ ಚುನಾವಣೆಯಲ್ಲಿ ತಮ್ಮ ನಿರ್ಧಾರ ಘೋಷಿಸುವ ಸಲುವಾಗಿ ಸಂಸದೆ ಸುಮಲತಾ ಅಂಬರೀಶ್ ಅವರು ಹಿತೈಷಿಗಳು, ಮಾರ್ಗದರ್ಶಕರು, ಕಾರ್ಯಕರ್ತರು ಹಾಗೂ ಬೆಂಬಲಿಗರ ಬೃಹತ್ ಬಹಿರಂಗ ಸಭೆಯನ್ನು ನಗರದ ಕಾಳಿಕಾಂಭ ಸಮುದಾಯ ಭವನದಲ್ಲಿ ಏ.3ರಂದು ಬೆಳಗ್ಗೆ 10.30ಕ್ಕೆ ಕರೆದಿದ್ದಾರೆ.



ಸಮಾವೇಶಕ್ಕೂ ಮುನ್ನ ನಗರದ ಶಕ್ತಿ ದೇವತೆ ಕಾಳಿಕಾಂಭ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಬಳಿಕ ಸುಮಲತಾ ಅಂಬರೀಷ್ ಅವರು ಬಹಿರಂಗ ಸಭೆಗೆ ಆಗಮಿಸಲಿದ್ದು, ಅವರೊಂದಿಗೆ ನಟ ದರ್ಶನ್ ಹಾಗೂ ಸುಮಲತಾ ಪುತ್ರ ಅಭಿಷೇಕ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಹೆಚ್.ಡಿ. ಕುಮಾರಸ್ವಾಮಿ ಗೆದ್ದರೆ ಕಾವೇರಿ, ಮೇಕೆದಾಟು ವಿವಾದಕ್ಕೆ ಶಾಶ್ವತ ಪರಿಹಾರ

ಬಿಜೆಪಿ–ಜೆಡಿಎಸ್ ಸಮನ್ವಯ ಸಭೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿಕೆ



ಜೆಡಿಎಸ್–ಬಿಜೆಪಿ ಜಂಟಿ ಸಮನ್ವಯ ಸಮಿತಿ ಕಾರ್ಯಕರ್ತರ ಸಭೆಯನ್ನು ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಕೆ.ಸಿ.ನಾರಾಯಣಗೌಡ ಉದ್ಘಾಟಿಸಿದರು.

> **"** ಬಿಜೆಪಿ ಮೈತ್ರಿಯಿಂದ ಶಕ್ತಿ ಬಂದಿದೆ. ಮುಂದಿನ ದಿನಗಳಲ್ಲಿ ನಾವೆಲ್ಲರು ಒಟ್ಟಾಗಿ ಕೆಲಸ ಮಾಡೋಣ, ಪಕ್ಷ ಏನೇ ತೀರ್ಮಾನ ತೆಗೆದುಕೊಂಡರು ಅದರ ಅಣತಿಯಂತೆ ಕೆಲಸ ಮಾಡೋಣ, ಕಷ್ಟದ ರೊಟ್ಟಿಯಾದರು ಸರಿಯೇ, ತುಪ್ಪದ ರೊಟ್ಟಿಯಾದರು ಸರಿಯೇ ಹಂಚಿಕೊಂಡು ತಿನ್ನೋಣ.
> – ಸಿ.ಎಸ್. ಪುಟ್ಟರಾಜು.

ಪಾಂಡವಪುರ, ಏ.2– ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಗೆದ್ದರೆ ಕಾವೇರಿ ನದಿ ನೀರು ಹಾಗೂ ಮೇಕೆದಾಟು ವಿವಾದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದ್ದಾರೆ.

ಮಂಗಳವಾರ ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ನಡೆದ ಜೆಡಿಎಸ್–ಬಿಜೆಪಿ ಸಮನ್ವಯ ಸಮಿತಿ ಜಂಟಿ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಂಡ್ಯ ಲೋಕಸಭಾ ಚುನಾವಣೆ ಕಾಂಗ್ರೆಸ್‌ನ ಹಣವಂತ ಹಾಗೂ ಜೆಡಿಎಸ್‌ನ ಹೃದಯವಂತರ ನಡುವೆ ನಡೆಯುತ್ತಿರುವ ಚುನಾವಣೆಯಾಗಿದೆ. ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರು ಗೆದ್ದು ಕೇಂದ್ರ ಸಚಿವರಾಗುವುದು ಖಚಿತ ಎಂದರು.

ನಾನು ಸೇರಿದಂತೆ ಬೇರೆ ಯಾರು ಅಭ್ಯರ್ಥಿಗಳಾಗಿ ಗೆದ್ದು ಸಂಸದರಾಗಿದ್ದರೆ ಸಂಸದರಾಗಿ ಮಾತ್ರ ಕೆಲಸ ಮಾಡಬೇಕಾಗುತ್ತಿತ್ತು. ಆದರೆ, ಹೆಚ್.ಡಿ.ಕುಮಾರಸ್ವಾಮಿ ಅವರು ಗೆದ್ದರೆ ಕೇಂದ್ರದಲ್ಲಿ ಸಚಿವರಾಗಿ ಕಾವೇರಿ ನೀರಿನ ಸಮಸ್ಯೆ, ಮೇಕದಾಟು ಯೋಜನೆಗಳ ಪರಿಹಾರಕ್ಕೆ ಪೂರಕವಾಗಿ ಕೆಲಸ ಮಾಡಲಿದ್ದಾರೆ. ಜತೆಗೆ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆಯಲಿವೆ. ಹಾಗಾಗಿ ಜಿಲ್ಲೆಯ ಜನತೆ ಕುಮಾರಸ್ವಾಮಿ ಅವರಿಗೆ ಹೆಚ್ಚಿನ ಬಹುಮತ ನೀಡಿ ಗೆಲ್ಲಿಸಿ ಕಳುಹಿಸಬೇಕು ಎಂದು ಮನವಿ ಮಾಡಿದರು.

2018ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಮೈತ್ರಿ ಅಭ್ಯರ್ಥಿಯಾಗಿದ್ದ ನಿಖಿಲ್ ಕುಮಾರಸ್ವಾಮಿ ಅವರನ್ನು ಯುದ್ಧಕ್ಕೆ ನಿಲ್ಲಿಸಿ ಹಿಂದೆ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದರು. ಆ ಚುನಾವಣೆಯಲ್ಲಿ ಬಿಜೆಪಿಯವರು ಸ್ವತಂತ್ರ ಅಭ್ಯರ್ಥಿಯಾಗಿದ್ದ ಸುಮಲತಾ ಅಂಬರೀಶ್ ಅವರಿಗೆ ಬೆಂಬಲ ಕೊಟ್ಟು ತಾಕತ್ ತೋರಿಸಿ ಸುಮಲತಾ ಅಂಬರೀಶ್ ಅವರನ್ನು ಗೆಲ್ಲಿಸಿಕೊಂಡು ಬಂದರು. ಕಾಂಗ್ರೆಸ್‌ನವರು ಚುನಾವಣೆಯಲ್ಲಿ ನಮ್ಮನ್ನು ಬೆಂಬಲಿಸುವಂತೆ ಸಂಸದೆ ಸುಮಲತಾ ಅಂಬರೀಶ್ ಅವರಿಗೆ ಧಮಕಿ ಹಾಕುತ್ತಿದ್ದಾರೆ. ಆದರೆ, ನಿಮ್ಮ ಧಮಕಿಗೆ ನಮ್ಮ ಅಂಬರೀಶ್ ಅವರ ಪತ್ನಿ, ಸಂಸದೆ ಸುಮಲತಾ ಅಂಬರೀಶ್ ಅವರು ಬಗ್ಗೋದಿಲ್ಲ ಎನ್ನುವುದು ನಿಮ್ಮ ಗಮನದಲ್ಲಿರಲಿ ಎಂದು ಎಚ್ಚರಿಕೆ ನೀಡಿದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ರಾಜ್ಯ ಮತ್ತು ರಾಷ್ಟ್ರದಲ್ಲಿ ಬಿಜೆಪಿ–ಜೆಡಿಎಸ್ ಪಕ್ಷಗಳು ಒಗ್ಗಟ್ಟಾಗಿ ಕೆಲಸ ಮಾಡಿ ಕಾಂಗ್ರೆಸ್ ಪಕ್ಷವನ್ನು ನಿರ್ನಾಮ ಮಾಡಬೇಕು. ನಾರಾಯಣಗೌಡ ಅವರು ಕಾಂಗ್ರೆಸ್ ಪಕ್ಷ ಸೇರುತ್ತಾರೆ ಎನ್ನುವ ವದಂತಿಯನ್ನು ಹಬ್ಬಿಸಿ ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಯಾವುದೇ ಕಾರಣಕ್ಕೂ ಬಿಜೆಪಿ ಪಕ್ಷವನ್ನು ಬಿಡೋದಿಲ್ಲ. ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರ ಪರವಾಗಿ ಕೆಲಸ ಮಾಡಿ ಅಧಿಕ ಬಹುಮತದಿಂದ ಗೆಲ್ಲಿಸುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್, ಬಿಜೆಪಿ ಜಿಲ್ಲಾ ಚುನಾವಣಾ ಉಸ್ತುವಾರಿ ಸುನೀಲ್ ಸುಬ್ರಹ್ಮಣ್ಯ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪಿ.ಉಮೇಶ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ದಾಖಲೆ ಇಲ್ಲದ 1.59 ಲಕ್ಷ ರೂ. ವಶ

ಚಾಮರಾಜನಗರ, ಏ.2–ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಂತೇಮರಹಳ್ಳಿ ಹಾಗೂ ಗುಂಡ್ಲುಪೇಟೆ ಕ್ಷೇತ್ರ ವ್ಯಾಪ್ತಿಯ ಚೆಕ್ ಪೋಸ್ಟ್‌ನಲ್ಲಿ ಯಾವುದೇ ದಾಖಲೆಲ್ಲದೆ ಸಾಗಿಸುತ್ತಿದ್ದ 1,59,770 ರೂ.ಗಳನ್ನು ಎಸ್‌ಎಫ್‌ಟಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಸಂತೇಮರಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ಮೈಸೂರಿನಿಂದ ಬರುತ್ತಿದ್ದ ವಾಹನದಲ್ಲಿದ್ದ ದೋಲಾರಾಂ ಅವರಿಂದ ದಾಖಲೆ ಇಲ್ಲದ 56 ಸಾವಿರ ರೂ. ಅನ್ನು ಎಸ್‌ಎಫ್‌ಟಿ ಅಧಿಕಾರಿ ಮಂಜುನಾಥ್ ಜಪ್ತಿ ಮಾಡಿದರು. ಗುಂಡ್ಲುಪೇಟೆ ಐಬಿ ಸರ್ಕಲ್ ಬಳಿ ಚೆಕ್‌ಪೋಸ್ಟ್‌ನಲ್ಲಿ ಸೋಮವಾರ ರಾತ್ರಿ ವಾಹನದಲ್ಲಿ ಪ್ರಸಾದ್ ಕೇರಳದಿಂದ ಯಾವುದೇ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 1,03,770 ರೂ. ಅನ್ನು ಎಸ್‌ಎಫ್‌ಟಿ ಅಧಿಕಾರಿ ಎಂ.ಪ್ರಭುಸ್ವಾಮಿ ತಂಡ ವಶಪಡಿಸಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

19.28 ಲಕ್ಷ ರೂ. ಮೌಲ್ಯದ ಮದ್ಯ ವಶ

ಚಾಮರಾಜನಗರ, ಏ.2–ಲೋಕಸಭಾ ಸಾರ್ವತ್ರಿಕ ಚುನಾವಣೆ ನೀತಿ ಸಂಹಿತೆ ಜಾರಿಯಾದ ಮಾ.16ರಿಂದ ಏ.1ರ ವರೆಗೆ ಜಿಲ್ಲೆಯಲ್ಲಿ 19,28,149 ರೂ. ಮೌಲ್ಯ ಅಕ್ರಮ ಮದ್ಯ ವಶಪಡಿಸಿಕೊಳ್ಳಲಾಗಿದೆ.

ಅಬಕಾರಿ ಇಲಾಖೆ ವತಿಯಿಂದ ಅಕ್ರಮ ಮದ್ಯ ಚಟುವಟಿಕೆಗಳನ್ನು ಪತ್ತೆ ಹಚ್ಚಿ, ಒಟ್ಟು 144 ಪ್ರಕರಣಗಳನ್ನು ದಾಖಲಿಸಲಾಗಿದೆ. ವಿವಿಧ ಕಂಪನಿಯ 422.280 ಲೀಟರ್ ಮದ್ಯ, 6.850 ಲೀಟರ್ ಬಿಯರ್ ಹಾಗೂ 16 ವಾಹನಗಳನ್ನು ಜಪ್ತಿ ಮಾಡಿ, 118 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಚಾಮರಾಜನಗರ ಅಬಕಾರಿ ಇಲಾಖೆ ಉಪ ಆಯುಕ್ತರು ತಿಳಿಸಿದ್ದಾರೆ.

ಇಂದು ಸುನೀಲ್ ಬೋಸ್, ಬಾಲರಾಜ್ ನಾಮಪತ್ರ ಸಲ್ಲಿಕೆ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್, ವಿಜಯೇಂದ್ರ, ಕುಮಾರಸ್ವಾಮಿ ಭಾಗಿ



ಸುನಿಲ್ ಬೋಸ್



ಎಸ್.ಬಾಲರಾಜು

ಚಾಮರಾಜನಗರ, ಏ.2–ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹಾಗೂ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಏ.3ರಂದು ನಾಮಪತ್ರ ಸಲ್ಲಿಸಲಿದ್ದಾರೆ.

ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿ ಒಂದೇ ದಿನ ನಾಮಪತ್ರ ಸಲ್ಲಿಸುವುದರಿಂದ ನಗರದಲ್ಲಿ ಎರಡು ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದು, ಮುಂಜಾಗ್ರತೆಯಾಗಿ ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ಬಿಗಿ ಭದ್ರತೆಗೆ ಕ್ರಮ ಕೈಗೊಳ್ಳಲಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ತಿಳಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 11 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಬಳಿಕ ಭುವನೇಶ್ವರಿ ವೃತ್ತದಿಂದ ತೆರೆದ ವಾಹನದಲ್ಲಿ ಜಿಲ್ಲಾಡಳಿತ ಭವನಕ್ಕೆ ತೆರಳಿ ನಾಮಪತ್ರ ಸಲ್ಲಿಸಲಾಗುವುದು. ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. 10 ರಿಂದ 15 ಸಾವಿರ ಜನರು ಸೇರುವ ನಿರೀಕ್ಷೆ ಇದೆ ಎಂದರು.

ಕಾಂಗ್ರೆಸ್ ಸೇರ್ಪಡೆ: ಈಗಾಗಲೇ ಬಿಜೆಪಿಯ ಅನೇಕ ನಾಯಕರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ. ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರ ಸಹೋದರ ಎ.ಆರ್.ಬಾಲರಾಜ್ ಹಾಗೂ ಬಿಜೆಪಿ ಮುಖಂಡ ಅಯ್ಯನಪುರ ಶಿವಕುಮಾರ್ ಅವರು ಸಿದ್ದರಾಮಯ್ಯ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ, ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚಂದ್ರು, ಮಹ ಮ್ಮದ್ ಅಸ್ಗರ್, ಪತ್ರಿಕಾ ಕಾರ್ಯದರ್ಶಿ ಗೌಡಹಳ್ಳಿ ರಾಜೇಶ್ ಇದ್ದರು.

ಬಿಜೆಪಿ ಮೆರವಣಿಗೆ: ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಕ್ಷೇತ್ರದ ಚುನಾವಣಾ ಪ್ರಭಾರಿ ಎನ್.ವಿ.ಫಣೀಶ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಾಹ್ನ 12 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮೆರವಣಿಗೆಯಲ್ಲಿ ಜಿಲ್ಲಾಡಳಿತ ಭವನಕ್ಕೆ ತೆರಳಿ ನಾಮಪತ್ರ ಸಲ್ಲಿಸಲಾಗುವುದು. ಈ ವೇಳೆ ಸಂಸದ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ಎ.ನಾರಾಯಣಸ್ವಾಮಿ, ಅರವಿಂದ ಲಿಂಬಾವಳಿ, ಶಾಸಕರಾದ ಜಿ.ಟಿ.ದೇವೇಗೌಡ, ಎಂ.ಆರ್.ಮಂಜುನಾಥ್, ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಚಾಮರಾಜ ಒಡೆಯರ್ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ದಲಿತರು ಕಾಂಗ್ರೆಸ್ ತ್ಯಜಿಸಬೇಕು: ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಹುಸಂಖ್ಯಾತ ಮತದಾರರು ದಲಿತರಿದ್ದಾರೆ. 7 ಲಕ್ಷಕ್ಕೂ ಹೆಚ್ಚು ಎಸ್ಸಿ, ಎಸ್ಟಿ ಮತದಾರರಿದ್ದಾರೆ. ಕಾಂಗ್ರೆಸ್ ದಲಿತ ವಿರೋಧಿಯಾಗಿದ್ದು, ಕಾಂಗ್ರೆಸ್ ಕಳೆದ 70 ವರ್ಷಗಳಿಂದ ದಲಿತರಿಗೆ ಅನ್ಯಾಯ ಮಾಡಿಕೊಂಡು ಬರುತ್ತಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಮಾಡಿದ ಅಪಮಾನವನ್ನು ದಲಿತ ಸಮುದಾಯ ಇನ್ನು ಮರೆತಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣಾ ಸಂಚಾಲಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೃಷಬೇಂದ್ರಪ್ಪ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಸಹ ವಕ್ತಾರ ಎನ್.ಮಂಜುನಾಥ್, ಮಾಧ್ಯಮ ಪ್ರಮುಖ್ ವೀರೇಂದ್ರ ಇದ್ದರು.

ಮೂವರು ಪಕ್ಷೇತರರಿಂದ ಉಮೇದುವಾರಿಕೆ ಸಲ್ಲಿಕೆ

ಚಾಮರಾಜನಗರ, ಏ.2–ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಲ್ಕನೇ ದಿನವಾದ ಮಂಗಳವಾರ ಮೂವರು ಅಭ್ಯರ್ಥಿಗಳು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರು.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಗಳಾಗಿ ಬಿ.ಎಂ.ಮಹದೇವಸ್ವಾಮಿ, ಜಿ.ಡಿ.ರಾಜಗೋಪಾಲ ತಲಾ ಒಂದು ನಾಮಪತ್ರ ಹಾಗೂ ಸಿ.ಶಂಕರ ಮೂರು ನಾಮಪತ್ರ ಸಲ್ಲಿಸಿದರು.

ಒಟ್ಟಾರೆ ಇದುವರೆಗೆ ಹನ್ನೊಂದು ಅಭ್ಯರ್ಥಿಗಳಿಂದ 14 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ. ನಾಮಪತ್ರ ಸ್ವೀಕಾರ ವೇಳೆ ಜಿಲ್ಲಾ ಸಹಾಯಕ ಚುನಾವಣಾಧಿಕಾರಿ ಗೀತಾ ಹುಡೇದ ಉಪಸ್ಥಿತರಿದ್ದರು.



ಚಾಮರಾಜನಗರ ಜಿಲ್ಲಾಡಳಿತ ಭವನದ ಒಳಾವರಣದಲ್ಲಿ ಮಂಗಳವಾರ ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಶಾಯಿ ಹಾಕಿದ ಕೈ ಬೆರಳು ಹಾಗೂ ಸ್ವೀಪ್ ಅಕ್ಷರಗಳ ಚಿತ್ರವನ್ನು ಅಂಚೆ ಪತ್ರಗಳ ಮೂಲಕ ಚಿತ್ರಿಸಿ 'ಅಂಚೆ ಪತ್ರ ಅಭಿಯಾನ' ಚಳವಳಿ ಮಾದರಿಯಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು. ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್, ಸ್ವೀಪ್ ಸಮಿತಿ ಜಿಲ್ಲಾಧ್ಯಕ್ಷರ ಆನಂದ್ ಪ್ರಕಾಶ್ ಮೀನಾ, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ ಇದ್ದರು.

ತಂದೆಯ ಸಾವಿನ ದುಃಖದಲ್ಲೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ ಮಗಳು

ಯಳಂದೂರು, ಏ.2–ತಂದೆಯ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳದೆ ದುಃಖದಲ್ಲೇ ಮಗಳು ಮಂಗಳವಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಳು.




ಮಂಜುನಾಥ

ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಗ್ರಾಮ ಪಂಚಾಯಿತಿ ನಿವೃತ್ತ ಕಾರ್ಯದರ್ಶಿ ಆರ್.ನಂಜುಂಡಸ್ವಾಮಿ ಪುತ್ರ ವೈ.ಎನ್.ಮಂಜುನಾಥ್ (43) ಹೃದಯಾಘಾತದಿಂದ ಸೋಮವಾರ ನಿಧನರಾಗಿದ್ದಾರೆ. ಆದರೆ, ಇವರ ಎರಡನೇ ಪುತ್ರಿ ಸಂಜನಾ ತಂದೆಯ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳದೆ ದುಃಖದಲ್ಲೇ ಮಂಗಳವಾರ ಗಣಿತ ವಿಷಯ ಪರೀಕ್ಷೆ ಬರೆದಿದ್ದಾಳೆ. ಮೃತ ಮಂಜುನಾಥ್ ಪತ್ನಿ, ಮೂರು ಪುತ್ರಿಯರು ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 12 ಗಂಟೆಯಲ್ಲಿ ಸ್ವಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿತು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನಸಂಖ್ಯೆ ಆಧರಿಸಿ ಅನುದಾನ ಮೀಸಲು ಕಾನೂನು ಜಾರಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ● ಮೊದಲ ಬಾರಿ ಮುಖ್ಯಮಂತ್ರಿಯಾಗಿ ರಾಜ್ಯದಲ್ಲಿ ಈ ಕಾನೂನು ಜಾರಿ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಕಾಂಗ್ರೆಸ್ ಸೇರಿದ ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಸಹೋದರ ವಿ.ರಾಮಸ್ವಾಮಿ ಮತ್ತಿತರರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಪಕ್ಷದ ಧ್ವಜ ನೀಡಿ, ಸ್ವಾಗತಿಸಿದರು.

ಮೈಸೂರು, ಏ.2(ಎಸ್‌ಬಿಡಿ)– ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಂದರೆ ಅಭಿವೃದ್ಧಿಗೆ ವೆಚ್ಚ ಮಾಡುವ ಅನುದಾನದಲ್ಲಿ ಜನಸಂಖ್ಯೆ ಆಧಾರದಲ್ಲಿ ಮೀಸಲಿಡುವ ಎಸ್‌ಸಿಪಿ, ಟಿಎಸ್‌ಪಿ ಕಾನೂನನ್ನು ದೇಶಾದ್ಯಂತ ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿ, ನಾನು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಖರ್ಚಾಗಬೇಕು ಎಂದು ಶೇ.24.1 ರಷ್ಟು ಪರಿಶಿಷ್ಟ ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಹಾಗೂ ಬುಡಕಟ್ಟು ಉಪ ಯೋಜನೆ(ಟಿಎಸ್‌ಪಿ) ಜಾರಿ ಮಾಡಲಾಯಿತು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದರೆ ಈ ಕಾನೂನನ್ನು ದೇಶಾದ್ಯಂತ ವಿಸ್ತರಿಸಲಾಗುವುದು. ಈ ಬಗ್ಗೆ ರಾಹುಲ್ ಗಾಂಧಿ ಅವರೊಂದಿಗೆ ಮಾತನಾಡಿದ್ದು, ಇದನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರ್ಪಡೆ ಮಾಡುವಂತೆ ಸೂಚಿಸಿದ್ದಾರೆ ಎಂದರು.

> ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ವಿ.ರಾಮಸ್ವಾಮಿ ಅಭಿಮಾನಿಗಳು ಸೇರಿ ಹಲವರು ಮರಳಿ ಕಾಂಗ್ರೆಸ್ ಸೇರಿದ್ದಾರೆ. ಕೋಪಿಸಿಕೊಂಡು ಹೊರ ಹೋಗಿದ್ದ ನಮ್ಮ ಮನೆಯವರು ವಾಪಸ್ ಬಂದಿರುವುದು ಪಕ್ಷದ ಶಕ್ತಿ ಹೆಚ್ಚಿಸಿದೆ. ಸಂವಿಧಾನ ರಕ್ಷಣೆಗೆ ನಾವೆಲ್ಲಾ ಒಂದಾಗಬೇಕು. ಮುಖ್ಯಮಂತ್ರಿಗಳ ಸೂಚನೆಯಂತೆ ನನ್ನ ಬೂತ್‌ನಲ್ಲಿ ನಾನೇ ಅಭ್ಯರ್ಥಿ ಎಂದುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು.
>
> - ತನ್ವೀರ್ ಸೇಠ್
> ಕೆಪಿಸಿಸಿ ಕಾರ್ಯಾಧ್ಯಕ್ಷ

ಸಂವಿಧಾನ ಇದ್ದರಷ್ಟೇ ಎಲ್ಲಾ: ಕೇಂದ್ರದಲ್ಲಿ ಹತ್ತು ವರ್ಷಗಳಿಂದ ಬಿಜೆಪಿ ಸರ್ಕಾರವಿದ್ದು, ಮೋದಿ ಅವರು ಪ್ರಧಾನಿಯಾಗಿ ಆಡಳಿತ ನಡೆಸಿದ್ದಾರೆ. ಆದರೆ ಅವರು ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ಗೌರವ ಕೊಟ್ಟು ಕೆಲಸ ಮಾಡಿಲ್ಲ. ತಮ್ಮ ಸಚಿವ ಸಂಪುಟದಲ್ಲಿ ಮಂತ್ರಿಯಾಗಿದ್ದ ಅನಂತಕುಮಾರ್ ಹೆಗಡೆ ಸಂವಿಧಾನ ಬದಲಿಸುವುದಾಗಿ ಹೇಳಿದರೂ ಅವರ ವಿರುದ್ಧ ಶಿಸ್ತು ಕ್ರಮ ವಹಿಸಲಿಲ್ಲ. ಅಂದರೆ ಆ ಹೇಳಿಕೆಯನ್ನು ಮೋದಿ ಹಾಗೂ ಅಮಿತ್ ಶಾ ಅವರೇ ಹೇಳಿಸಿದ್ದು. ಸಾವರ್ಕರ್ ಹಾಗೂ ಗೋಲ್ವಾಲ್ಕರ್ ಅವರೂ ಸಂವಿಧಾನ ನಮ್ಮ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಹೇಳಿದ್ದರು. ಪ್ರತಿ ವ್ಯಕ್ತಿಗೆ ಮೂಲಭೂತ ಹಕ್ಕು ನೀಡಿರುವುದು ಭಾರತದ ಸಂವಿಧಾನದಲ್ಲಿ ಮಾತ್ರ. ಸಮಾನ ಅವಕಾಶ, ಸಮಾನತೆ ಸಮಾಜ ನಿರ್ಮಾಣಕ್ಕೆ ಸಂವಿಧಾನ ಇರಲೇಬೇಕು. ಹಿಂದುಳಿದ ವರ್ಗದ ನಾನು ಮುಖ್ಯಮಂತ್ರಿಯಾಗಿರುವುದು ಹಾಗೂ ಮೋದಿ ಪ್ರಧಾನಮಂತ್ರಿಯಾಗಿರುವುದು ಇದೇ ಸಂವಿಧಾನದಿಂದ. ಸಂವಿಧಾನ ಬದಲಾದರೆ ಅಥವಾ ಅದರ ಸ್ವರೂಪ ಬದಲಾದರೆ ದೇಶದಲ್ಲಿ ರಕ್ತಪಾತವಾಗುತ್ತದೆ. ಸಂವಿಧಾನ ಮುಟ್ಟಿದರೆ ನೀವೇ ನಾಶವಾಗುತ್ತೀರಿ ಎಂದು ಎಚ್ಚರಿಸಿದರು.

ವೈಚಾರಿಕ ಶಿಕ್ಷಣ ಬೇಕು: ಸ್ವಾತಂತ್ರ್ಯ ಬಂದು 75 ವರ್ಷವಾದರೂ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಸಿಕ್ಕಿಲ್ಲ. ಗುಲಾಮಗಿರಿ ಮನಃಸ್ಥಿತಿ ಇನ್ನೂ ಅಳಿದಿಲ್ಲ. ಸ್ವಾಭಿಮಾನ ಬೆಳೆಸಿಕೊಂಡರೆ ಗುಲಾಮಗಿರಿ ನಿರ್ನಾಮವಾಗುತ್ತದೆ ಇದಕ್ಕಾಗಿ ವೈಚಾರಿಕ ಶಿಕ್ಷಣ ಬೇಕೇ ಬೇಕು. ವ್ಯಕ್ತಿಪೂಜೆ ಮಾಡಿದರೆ ಸರ್ವಾಧಿಕಾರ ಬೆಳೆಯುತ್ತದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದರು. ಸಮಾಜ ಸುಧಾರಣೆಯ ಪ್ರಯತ್ನ ಫಲಿಸದಿದ್ದಾಗ ಅವರು 'ನಾನು ಹಿಂದುವಾಗಿ ಹುಟ್ಟಿದ್ದೀನಿ. ಆದರೆ ಹಿಂದೂವಾಗಿ ಸಾಯಲು ಬಯಸುವುದಿಲ್ಲ' ಎಂದು ಬೌದ್ಧ ಧರ್ಮ ಸೇರಿದರು. ಸಂವಿಧಾನವನ್ನು ಎಲ್ಲರೂ ಅರ್ಥೈಸಿಕೊಳ್ಳಬೇಕು. ಈ ಉದ್ದೇಶದಿಂದಲೇ ಎಲ್ಲಾ ಶಾಲೆಗಳಲ್ಲಿ ಸಂವಿಧಾನ ಪೀಠಿಕೆ ಓದುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ಬಿಜೆಪಿ ಸೋಲಿಸಬೇಕು: ಕೆಟ್ಟವರ ಕೈಯ್ಯಲ್ಲಿ ಸಿಲುಕಿರುವ ಸಂವಿಧಾನವನ್ನು ರಕ್ಷಿಸಬೇಕಾದರೆ ಬಿಜೆಪಿಯನ್ನು ಸೋಲಿಸಬೇಕು. ತಿಳಿದೋ ತಿಳಿಯದೆಯೋ ಹಿಂದುಳಿದವರು ಬಿಜೆಪಿಗೆ ಹೋಗಿದ್ದಾರೆ. ಆದರೆ ಶೂದ್ರರಿಗೆ ಗರ್ಭಗುಡಿಗೆ ಬಿಡುವುದಿಲ್ಲ. ಕಾರಣಾಂತರಗಳಿಂದ ಬೇರೆ ಪಕ್ಷಕ್ಕೆ ಹೋಗಿದ್ದವರು ಇಂದು ಕಾಂಗ್ರೆಸ್ ಸಿದ್ಧಾಂತ ಹಾಗೂ ನಾಯಕತ್ವ ಮೆಚ್ಚಿ ಮರು ಸೇರ್ಪಡೆಯಾಗಿದ್ದೀರಿ. ಯಾವುದೇ ಸ್ವಾರ್ಥ, ಅಧಿಕಾರಕ್ಕಾಗಿ ಅಲ್ಲದೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲ್ಲಿಸಲು ಬಂದಿದ್ದೀರಿ. ಇದರಿಂದ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಕ್ತಿ ಹೆಚ್ಚಿದೆ. ಇನ್ನೊಮ್ಮೆ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವ ಬಿಜೆಪಿ ಮುಖ ನೋಡಬೇಡಿ. ಎಲ್ಲರೂ ಒಟ್ಟಾಗಿ ಬಿಜೆಪಿ ಸೋಲಿಸೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಶಾಸಕ ಕೆಹರೀಶ್ ಗೌಡ, ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ ಎಂ.ಪ್ರದೀಪ್ ಕುಮಾರ್, ಸಿದ್ದರಾಜು ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ವಿ.ರಾಮಸ್ವಾಮಿ ನೇತೃತ್ವದಲ್ಲಿ 'ಕೈ' ಹಿಡಿದ ಮುಖಂಡರು

ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಸೋದರ ವಿ.ರಾಮಸ್ವಾಮಿ, ಇವರ ಪುತ್ರ ಬಿಜೆಪಿ ಮುಖಂಡ ಭರತ್ ರಾಮಸ್ವಾಮಿ ಸೇರಿದಂತೆ 40ಕ್ಕೂ ಹೆಚ್ಚು ಮಂದಿ ಅಧಿಕೃತವಾಗಿ ಕಾಂಗ್ರೆಸ್ ಸೇರಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಹಾಗೂ ಸಚಿವ ಕೆವೆಂಕಟೇಶ್, ಎಲ್ಲರಿಗೂ ಪಕ್ಷದ ಧ್ವಜ ನೀಡಿ, ಪಕ್ಷಕ್ಕೆ ಸ್ವಾಗತಿಸಿದರು.

ಗೆದ್ದರೆ ಸಾರ್ಥಕ: ಪಕ್ಷ ಸೇರಿದವರ ಪರವಾಗಿ ವಿ.ರಾಮಸ್ವಾಮಿ ಮಾತನಾಡಿ, ಮೈಸೂರು–ಕೊಡಗು ಮತ್ತು ಚಾಮರಾಜನಗರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯನವರ ಕೈ ಬಲಪಡಿಸಿದಾಗ ಮಾತ್ರ, ಇಂದಿನ ಕಾರ್ಯಕ್ರಮ ಸಾರ್ಥಕವಾಗುತ್ತದೆ. ಒಪ್ಪಿಗೆ ನೀಡಿದರೆ ಎರಡೂ ಜಿಲ್ಲೆಗಳ ಹಿಂದುಳಿದ ವರ್ಗದವರನ್ನು ಸೇರಿಸಿ ಬೃಹತ್ ಸಮಾವೇಶ ನಡೆಸಬಹುದು. ನಾವೆಲ್ಲಾ ಪ್ರಾಮಾಣಿಕವಾಗಿ ದಲಿತರನ್ನು ಒಗ್ಗೂಡಿಸಿ, ನಿಮ್ಮ ಜೊತೆ ಸೇರಿ ದುಡಿಯುತ್ತೇವೆ ಎಂದು ಭರವಸೆ ನೀಡಿದರು.

ಮೊದಲನೇ ಪುಟದಿಂದ

ಸಿಎಂ ಕುರ್ಚಿಗಾಗಿ ಹೋರಾಟ

ಸಂಸದರ ಮನೆಯಲ್ಲಿ ಮೂರೂವರೆ ಕೋಟಿ ರೂ. ಸಿಕ್ಕರೆ, ಇನ್ನೊಬ್ಬರ ಮನೆಯಲ್ಲಿ 51 ಕೋಟಿ ರೂ. ಸಿಕ್ಕಿದೆ. ಇಷ್ಟಾದರೂ ಶಿವಕುಮಾರ್ ಅವರಿಗೆ ಏನೂ ಅನ್ನಿಸುವುದೇ ಇಲ್ಲ. ಭ್ರಷ್ಟರನ್ನು ಜೈಲಿಗೆ ಕಳುಹಿಸದೆ ಮನೆಯಲ್ಲಿ ಇಟ್ಟುಕೊಳ್ಳಬೇಕೇ ಎಂದರು. ಅರಮನೆ ಆವರಣದಲ್ಲಿ ಇಂದು ಲೋಕಸಭಾ ಕ್ಷೇತ್ರಗಳ ಕಾರ್ಯಕರ್ತರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ಭಾಷಣದ ಉದ್ದಕ್ಕೂ ಕಾಂಗ್ರೆಸ್ ಆಡಳಿತದಲ್ಲಿನ ಭ್ರಷ್ಟಾಚಾರ ಹಾಗೂ ಕುರ್ಚಿಗಾಗಿ ಕಚ್ಚಾಡುವುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಮನಮೋಹನ್ ಸಿಂಗ್ ನೇತೃತ್ವದ 10 ವರ್ಷಗಳ ಆಡಳಿತದಲ್ಲಿ ಕರ್ನಾಟಕಕ್ಕೆ 1.42 ಲಕ್ಷ ಕೋಟಿ ರೂ. ನೀಡಿದರೆ, ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ 4.91 ಲಕ್ಷ ಕೋಟಿ ರೂ. ನೀಡಿದೆ.

ನಾವು ಬೆಂಗಳೂರಿನ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದೇವೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮೆಟ್ರೊ ರೈಲು, ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ನಮ್ಮ ಸರ್ಕಾರ ಮಾಡಿದೆ ಎಂದರು.

ಕರ್ನಾಟಕದಲ್ಲಿ 3.5 ಕೋಟಿ ಜನ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿದ್ದಾರೆ. ಈ ಅಂಕಿ-ಅಂಶಗಳನ್ನು ಮುಚ್ಚಿಟ್ಟು ಸಿದ್ದರಾಮಯ್ಯ ಕೇಂದ್ರದ ಮೇಲೆ ಗೂಬೆ ಕೂರಿಸಿ, ತಮ್ಮ ಸರ್ಕಾರದ ಹುಳುಕುಗಳನ್ನು ಮುಚ್ಚಿಡುವ ಕೆಲಸ ಮಾಡುತ್ತಿದ್ದಾರೆ. ಇವರು ಅಧಿಕಾರಕ್ಕೆ ಬಂದ ನಂತರ ಹತ್ತು ಹಲವು ಸಮಸ್ಯೆಗಳನ್ನು ರಾಜ್ಯದ ಜನತೆ ಎದುರಿಸುತ್ತಿದ್ದಾರೆ, ಯಾವ ಸಮಸ್ಯೆಯನ್ನೂ ಪರಿಹರಿಸಿಲ್ಲ, ಕುರ್ಚಿ ಉಳಿವಿಗಾಗಿ ಹಗಲು-ರಾತ್ರಿ ಶ್ರಮಿಸುತ್ತಿದ್ದಾರೆ ಎಂದು ಅಮಿತ್ ಷಾ ಟೀಕಿಸಿದರು.

ಕೇಂದ್ರ ಸರ್ಕಾರ ದಲಿತರು, ಬಡವರು, ಆದಿವಾಸಿಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ, 2014ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಬಿಜೆಪಿಗೆ ಶೇಕಡ 43ರಷ್ಟು ಮತ ನೀಡಿದ್ದರೆ, 2019ರಲ್ಲಿ ಶೇಕಡ 51ರಷ್ಟು ಮತ ನೀಡಿದ್ದು, ಈ ಬಾರಿ ಶೇಕಡ 60 ರಷ್ಟು ಮತ ನೀಡುವ ಮೂಲಕ ಎಲ್ಲಾ 28 ಕ್ಷೇತ್ರಗಳಲ್ಲೂ ಎನ್‌ಡಿಎ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಿ ಮೋದಿ ಅವರ 'ಈ ಬಾರಿಯ 400 ಮೀರಿ' ಗುರಿ ಮುಟ್ಟಲು ಸಹಕರಿಸಿ ಎಂದು ಮನವಿ ಮಾಡಿದರು. ಕೇಂದ್ರದಲ್ಲಿ ಯುಪಿಎ ಸರ್ಕಾರದ 10 ವರ್ಷಗಳ ಅವಧಿಯಲ್ಲಿ 12 ಲಕ್ಷ ಕೋಟಿ ರೂ.ಗಳ ಭ್ರಷ್ಟಾಚಾರ ನಡೆದಿತ್ತು, ಗುಜರಾತ್‌ನ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿ ಅವರ 23 ವರ್ಷಗಳ ಆಡಳಿತ ಕಾಲದಲ್ಲಿ 25 ಪೈಸೆ ಭ್ರಷ್ಟಾಚಾರ ಆರೋಪವನ್ನು ಹೊರಿಸಲು ಸಾಧ್ಯವಾಗಲಿಲ್ಲ.

ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮತ್ತು ಐಎನ್‌ಡಿಐಎ ಇಂಡಿಯಾ ನಡುವೆ ಭ್ರಷ್ಟಾಚಾರ ವಿರೋಧಿಗಳು ಮತ್ತು ಭ್ರಷ್ಟಾಚಾರಿಗಳ ನಡುವೆ ಹೋರಾಟ ನಡೆದಿದೆ.

ಕೇಂದ್ರದ ಮೋದಿ ಸರ್ಕಾರ, 25 ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲೆತ್ತಿದೆ, 80 ಕೋಟಿ ಜನರಿಗೆ ಉಚಿತವಾಗಿ ಆಹಾರಧಾನ್ಯ ನೀಡುತ್ತಿದೆ, 12 ಕೋಟಿ ಶೌಚಾಲಯಗಳನ್ನು ನಿರ್ಮಿಸಿದೆ, ಬಡವರಿಗಾಗಿ 4 ಕೋಟಿ ಮನೆಗಳನ್ನು ನಿರ್ಮಾಣ ಮಾಡಿದೆ, 10 ಕೋಟಿ ಮಹಿಳೆಯರಿಗೆ ಉಚಿತ ಅಡುಗೆ ಅನಿಲ (ಎಲ್‌ಪಿಜಿ) ಸಂಪರ್ಕ ಒದಗಿಸಿದೆ, 14 ಕೋಟಿ ಮನೆಗಳಿಗೆ ಕೊಳಾಯಿ ನೀರು ತಲುಪಿಸಿದೆ, ದೇಶದ 60 ಕೋಟಿ ಜನರು ಆಯುಷ್ಮಾನ್ ಆರೋಗ್ಯ ವಿಮೆಯಡಿ ವರ್ಷಕ್ಕೆ ಐದು ಲಕ್ಷ ರೂ.ವರೆಗೆ ವೈದ್ಯಕೀಯ ಚಿಕಿತ್ಸೆ ಲಾಭ ಪಡೆಯುತ್ತಿದ್ದಾರೆ ಎಂದು ಸಮರ್ಥಿಸಿಕೊಂಡರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಕೇಂದ್ರದಲ್ಲಿನ ಮೋದಿ ಸರ್ಕಾರ ವಿಕಸಿತ ಭಾರತಕ್ಕಾಗಿ ಕಳೆದ 10 ವರ್ಷಗಳಿಂದ ಶ್ರಮಿಸುತ್ತಿದೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸರ್ಕಾರದ ಸೌಲಭ್ಯ ತಲುಪಿಸುವಲ್ಲಿ ಶ್ರಮ ವಹಿಸಿದೆ ಎಂದರು. ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ 10 ತಿಂಗಳಲ್ಲಿ ಯಾವುದೇ ಅಭಿವೃದ್ಧಿ ಮಾಡಿಲ್ಲ, ದಲಿತರು, ರೈತರು, ಬಡವರಿಗೆ ಅನ್ಯಾಯ ಮಾಡುತ್ತಿದೆ, ಮತದಾರರು ಶಾಪ ಹಾಕುತ್ತಿದ್ದಾರೆ, ಇದು ಅಭಿವೃದ್ಧಿ ಶೂನ್ಯ ಸರ್ಕಾರ ಎಂದು ಟೀಕಿಸಿದರು.

ಪ್ರಧಾನಿಯಾಗಲು ಒಗ್ಗಟ್ಟಿನಿಂದ ಕೆಲಸ ಮಾಡಿ

ಪಕ್ಷಗಳು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ನಮ್ಮ ಗುರಿ ತಲುಪುವುದು ಸುಲಭವಾಗುತ್ತದೆ ಎಂದಿದ್ದಾರೆ. ಕರ್ನಾಟಕದಲ್ಲಿ ಮೈತ್ರಿಕೂಟಕ್ಕೆ ಒಳ್ಳೆಯ ವಾತಾವರಣವಿದೆ, ನಮ್ಮ ಹೊಂದಾಣಿಕೆಯನ್ನು ಜನತೆ ಸ್ವಾಗತಿಸಿದ್ದಾರೆ. ನೀವು ಇದರ ಲಾಭ ಪಡೆದುಕೊಳ್ಳಿ ಎಂದು ಉಭಯ ಪಕ್ಷಗಳ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

ರಾಜ್ಯಮಟ್ಟದಲ್ಲಿ ಸಮನ್ವಯತೆ ಇರುವಂತೆಯೇ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಸಮನ್ವಯತೆ ಕಾಪಾಡಿಕೊಂಡು ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ನೀವು ರೂವಾರಿಯಾಗಿ. ನಿಮ್ಮ ಸ್ವಪ್ರತಿಷ್ಠೆಗಳು ಏನೇ ಇರಲಿ ಅವುಗಳನ್ನು ಬದಿಗಿರಿಸಿ, ಕೇಂದ್ರದಲ್ಲಿ ಮತ್ತೆ ಎನ್‌ಡಿಎ ಆಡಳಿತವನ್ನು ತರಲು ಶ್ರಮಿಸಿ, ನಿಮಗೆ ಒಳ್ಳೆಯ ಭವಿಷ್ಯವಿದೆ ಎಂದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಡೆದಿರುವ ವಿದ್ಯಮಾನಗಳ ಪೂರ್ಣ ಅರಿವಿದೆ. ಅದು ಲೋಕಸಭಾ ಚುನಾವಣೆಯಲ್ಲೂ ಮರುಕಳಿಸಬಾರದು. ನಾನು ಈ ಬಗ್ಗೆ ಹೆಚ್ಚಿನ ಚರ್ಚೆ ಬಯಸುವುದಿಲ್ಲ, ಮುಂದೆ ದೊಡ್ಡ ಸಮರ ಇದೆ, ಅದನ್ನು ಎದುರಿಸಲು ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ.

ಕೆಲವು ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ನಂತರ ಗೊಂದಲ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಕುಮಾರಸ್ವಾಮಿ ಅವರು ನಿಮ್ಮ ಮುಂದೆಯೇ ಎಲ್ಲವನ್ನೂ ಬಿಡಿಸಿಟ್ಟಿದ್ದಾರೆ. ಆ ಸಮಸ್ಯೆಗಳನ್ನು ನೀವುಗಳು ಬಗೆಹರಿಸಿಕೊಳ್ಳಿ, ನಾನೂ ಬಗೆಹರಿಸುತ್ತೇನೆ, ಯಾವುದನ್ನೂ ಎಳೆಯುವುದು ಬೇಡ.

ಗೆಲುವಿನ ಮಾನದಂಡ ಇಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ, ಇದನ್ನು ಎಲ್ಲರೂ ಗೌರವಿಸಬೇಕು. ಇದನ್ನೇ ಕಾರಣವಾಗಿಟ್ಟುಕೊಂಡು ಕಾಲೆಳೆಯುವುದು ಬೇಡ. ಒಂದು ವೇಳೆ ಇದನ್ನೇ ಮುಂದು ಮಾಡಿಕೊಂಡು ಹೋದರೆ ಕಠಿಣ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಕರ್ನಾಟಕದ ಮಟ್ಟಿಗೆ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡ ನಂತರ ಉಭಯ ಪಕ್ಷಗಳಿಗೂ ಲಾಭ ಬಂದಿದೆ. ಅದನ್ನು ಮತಗಳಾಗಿ ಪರಿವರ್ತಿಸುವ ಕಾರ್ಯ ನಿಮ್ಮ ಕೈಯ್ಯಲ್ಲಿದೆ ಎಂದಿದ್ದಾರೆ.

ರಾಜ್ಯದ ರಾಜಕೀಯ ಪರಿಸ್ಥಿತಿ ಮತ್ತು ಮೈತ್ರಿಯಲ್ಲಿನ ಸಮಸ್ಯೆಗಳ ಬಗ್ಗೆ ಕುಮಾರಸ್ವಾಮಿ ನಿರಂತರವಾಗಿ ನಮ್ಮ ಜೊತೆ ಸಂಪರ್ಕದಲ್ಲಿದ್ದಾರೆ, ಅವರು ಯಾವುದನ್ನೂ ಮುಚ್ಚಿಟ್ಟಿಲ್ಲ ಎಲ್ಲಾ ಮಾಹಿತಿ ನೀಡುತ್ತಿದ್ದು ಇದು ನಮಗೆ ಸಹಕಾರಿಯಾಗಿದೆ ಎಂದು ಷಾ ಸ್ಪಷ್ಟ ತಿಳಿಸಿದ್ದಾರೆ.

ಅಮಿತ್ ಷಾ ಮಾತನಾಡುವುದಕ್ಕೂ ಮುನ್ನ ಕುಮಾರಸ್ವಾಮಿ, ರಾಜ್ಯದ 28 ಕ್ಷೇತ್ರಗಳು ಅದರಲ್ಲೂ ಮೊದಲ ಹಂತದ ಚುನಾವಣೆ ಎದುರಿಸುತ್ತಿರುವ 14 ಕ್ಷೇತ್ರಗಳ ಚಿತ್ರಣವನ್ನು ಕೇಂದ್ರ ಸಚಿವರ ಮುಂದಿಟ್ಟರು. ನಾವು ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿದ ನಂತರ ರಾಜ್ಯ ಬಿಜೆಪಿ ನಾಯಕರು ನಮಗೆ ಸಂಪೂರ್ಣ ಸಹಕಾರ ನೀಡಿದ್ದಾರೆ, ಅದರಲ್ಲೂ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರು ನಮ್ಮೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಿದ್ದೇವೆ.

ಚಿಕ್ಕಬಳ್ಳಾಪುರ, ಹಾಸನ ಲೋಕಸಭಾ ಕ್ಷೇತ್ರದಲ್ಲಿ ಇನ್ನೂ ಸಮಸ್ಯೆ ಇದೆ. ರಾಜ್ಯ ನಾಯಕರು ಇದನ್ನು ಬಗೆಹರಿಸಲು ನಿರಂತರ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನೂ ಮೀರಿದ ವಿಷಯದಲ್ಲಿ ಮಧ್ಯೆ ಪ್ರವೇಶ ಮಾಡಿ ಬಗೆಹರಿಸಬೇಕೆಂದು ಷಾ ಅವರಲ್ಲಿ ಮನವಿ ಮಾಡಿದರು.

ಮೈಸೂರು, ಮಂಡ್ಯ ಹಾಗೂ ಬೆಂಗಳೂರಿನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ನಡೆಸಿದ ಸಮನ್ವಯ ಸಭೆಗಳು ಭಾರಿ ಯಶಸ್ವಿಯಾಗಿವೆ, ಮುಂದೆಯೂ ಪ್ರಯತ್ನಿಸುತ್ತೇವೆ ಎನ್ನುತ್ತಿದ್ದಂತೆ ಷಾ ಮಧ್ಯೆ ಪ್ರವೇಶಿಸಿ, ವಿಧಾನಸಭಾ ಮಟ್ಟದಲ್ಲೂ ಇಂತಹ ಸಭೆಗಳು ನಡೆಯಬೇಕು ಎಂದರು.

ಉಭಯ ಪಕ್ಷಗಳ ಕೋರ್ ಕಮಿಟಿ ಸಭೆ ನಂತರ ಅಮಿತ್ ಷಾ ಅವರು ಕುಮಾರಸ್ವಾಮಿ ಅವರನ್ನು ಹೋಟೆಲ್‌ನ ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿ, ಕಾಂಗ್ರೆಸ್ ಚುನಾವಣಾ ತಂತ್ರಗಾರಿಕೆ ಬಗ್ಗೆ ಮಾಹಿತಿ ಪಡೆದರು ಎನ್ನಲಾಗಿದೆ. ಗೆಲುವಿಗಾಗಿ ಕಾಂಗ್ರೆಸ್ ನಡೆಸುತ್ತಿರುವ ರಾಜಕೀಯ ತಂತ್ರಗಾರಿಕೆ, ಎಲ್ಲಿ ಆ ಪಕ್ಷ ಬಲಹೀನವಾಗಿದೆ ಎಲ್ಲಿ ನಾವು ಯಾವ ರೀತಿ ತಂತ್ರಗಾರಿಕೆ ಬಳಸಿ ಬಲಾಢ್ಯರಾಗಬೇಕು ಎಂಬ ಬಗ್ಗೆ ಚರ್ಚೆ ನಡೆದಿದೆ. ಕಾಂಗ್ರೆಸ್ ತಮ್ಮ ಅಭ್ಯರ್ಥಿಗಳ ಗೆಲುವಿಗಾಗಿ ಮತದಾರರನ್ನು ಹೇಗೆ ಓಲೈಸುತ್ತಿದೆ ಎಂಬುದನ್ನು ಕುಮಾರಸ್ವಾಮಿ ವಿವರಿಸಿದ್ದಾರೆ.

ಮೈಸೂರಲ್ಲಿ ಯದುವೀರ್ ಬಿರುಸಿನ ಪ್ರಚಾರ

ಮುಖಂಡರೊಂದಿಗೆ ನಾಮಪತ್ರ ಸಲ್ಲಿಸಲಿದ್ದು, ಆ ವೇಳೆ ಭಾಗವಹಿಸುವಂತೆಯೂ ಮನವಿ ಮಾಡಿದರು.

ಈ ಸಂದರ್ಭ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಕಾರ್ಪೊರೇಟರ್‌ಗಳಾದ ವೇದಾವತಿ, ಪ್ರಮೀಳಾ ಭರತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ನಂತರ ಅವರು ಬೆಳಗ್ಗೆ 11.45 ಗಂಟೆಗೆ ಹಿನಕಲ್ ಶ್ರೀ ಮಾರಮ್ಮ ದೇವಸ್ಥಾನಕ್ಕೆ ತೆರಳಿ ಮಾರಿ ಹಬ್ಬದಲ್ಲಿ ಪಾಲ್ಗೊಂಡು, ವಿಶೇಷ ಪೂಜೆ ನೆರವೇರಿಸಿದರು.

ಮಹಿಳೆಯರು ಪೂರ್ಣಕುಂಭದೊಂದಿಗೆ ಬರಮಾಡಿಕೊಂಡು ಆರತಿ ಬೆಳಗಿ ಶುಭ ಹಾರೈಸಿದರು. ಹಿಂದೆ ತಮ್ಮ ಪೂರ್ವಜರು ಗ್ರಾಮೀಣ ಪ್ರದೇಶದ ದೇವಸ್ಥಾನಗಳಿಗೆ ಭೇಟಿ ನೀಡಿ, ಅಲ್ಲಿನ ಪೂಜಾ ವಿಧಿ ವಿಧಾನಗಳನ್ನು ಭಕ್ತಿಯಿಂದ ನೆರವೇರಿಸುತ್ತಿದ್ದರು. ತಮಗೂ ದೇವರ ಮೇಲೆ ಅಪಾರ ಭಕ್ತಿ ಇರುವುದಾಗಿ ಯದುವೀರ್ ನುಡಿದರು. ಮಧ್ಯಾಹ್ನ ಶಾಸಕ ಟಿ.ಎಸ್.ಶ್ರೀವತ್ಸರೊಂದಿಗೆ ಮಹಾತ್ಮ ಗಾಂಧಿ ರಸ್ತೆಯ ಎಸ್.ರಂಗರಾವ್ ಅಂಡ್ ಸನ್ಸ್ ಕಚೇರಿಗೆ ಭೇಟಿ ನೀಡಿದ ಬಿಜೆಪಿ ಅಭ್ಯರ್ಥಿಯಾದ ವೀರ್ ಅವರು, ಖ್ಯಾತ ಕೈಗಾರಿಕೋದ್ಯಮಿ ಅರ್ಜುನ್ ರಂಗ ಅವರೊಂದಿಗೆ ಸಮಾಲೋಚನೆ ನಡೆಸಿ, ಅಲ್ಲಿರುವ ಸಿಬ್ಬಂದಿಯ ಬೆಂಬಲ ಕೋರಿದರು. [illegible] ದೇವರಾಜ ಮಾರುಕಟ್ಟೆಗೆ ತೆರಳಿ ಅಲ್ಲಿನ ವರ್ತಕರು, ಮಳಿಗೆದಾರರು, ಗ್ರಾಹಕರು ಹಾಗೂ ಸಾರ್ವಜನಿಕರೊಂದಿಗೆ ಸಾಮಾನ್ಯರಲ್ಲಿ ಸಾಮಾನ್ಯನಂತೆ ಸಮಾಲೋಚಿಸಿದರು. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ತಮಗೆ ಬೆಂಬಲ ನೀಡಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದೂ ಮನವಿ ಮಾಡಿದರು. ದೇವರಾಜ ಮಾರುಕಟ್ಟೆ ವರ್ತಕರು ಅವರನ್ನು ಅಭಿನಂದಿಸಿ, ಬೆಂಬಲಿಸುವ ಭರವಸೆ ನೀಡಿದರು. ಈ ಸಂದರ್ಭ ದೇವರಾಜ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಯದುವೀರ್, ಲಕ್ಷ್ಮಣ ಇಂದು ನಾಮಪತ್ರ ಸಲ್ಲಿಕೆ





ಮೈಸೂರು, ಏ.2– ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ. ಬಿಜೆಪಿ ಅಭ್ಯರ್ಥಿ ಯದುವೀರ್ ಬೆಳಗ್ಗೆ 10.30ಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಮುಖಂಡರೊಂದಿಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಬೃಹತ್ ಮೆರವಣಿಗೆ ಮೂಲಕ ತೆರಳಿ, ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಇನ್ನಿತರ ಮುಖಂಡರೊಂದಿಗೆ ಮಧ್ಯಾಹ್ನ 1ಕ್ಕೆ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಆದರೆ ಮೆರವಣಿಗೆಯಲ್ಲಿ ತೆರಳುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಬಿಷಪ್ ಹೌಸ್ ಸ್ಪಷ್ಟನೆ

ಮೈಸೂರು, ಏ.2–ಏಪ್ರಿಲ್ 1ರ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬನ್ನಿಮಂಟಪದಲ್ಲಿನ ಬಿಷಪ್ ಹೌಸ್‌ಗೆ ಸೌಜನ್ಯ ಭೇಟಿ ನೀಡಿದ್ದರು. ಈ ವೇಳೆ ಅವರು ತಮ್ಮ ಪಕ್ಷಕ್ಕೆ ಬೆಂಬಲ ಕೋರಿದರು. ನಾವು ಮಾಡಿದಂತಹ ಮನವಿಗಳಿಗೆ ಅವರು ಕೇವಲ ಧನಾತ್ಮಕ ಭರವಸೆ ನೀಡಿದರು. ಅವರು ಈ ವಿಷಯದಲ್ಲಿ ಯಾವುದೇ ಷರತ್ತುಗಳನ್ನು ಹಾಕಲಿಲ್ಲ ಎಂದು ಬಿಷಪ್ ಹೌಸ್‌ನ ಛಾನ್ಸಲರ್ ರೆವರೆಂಡ್ ಫಾದರ್ ಜೋಸೆಫ್ ಪಾಕಿಯಾರಾಜ್ ಸ್ಪಷ್ಟಪಡಿಸಿದ್ದಾರೆ.

ಇಂದು ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಪದಾಧಿಕಾರಿಗಳ ಸಭೆ

ಮೈಸೂರು, ಏ.2(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಪದಾಧಿಕಾರಿಗಳ ಸಭೆಯನ್ನು ಏ.3ರಂದು ಮಧ್ಯಾಹ್ನ 3ಕ್ಕೆ ಮೈಸೂರು ನಗರದ ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.



ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿ ಎಸ್.ಎಂ.ಕೃಷ್ಣ ಅವರನ್ನು ಅವರ ಬೆಂಗಳೂರಿನ ಸದಾಶಿವ ನಗರದಲ್ಲಿರುವ ನಿವಾಸದಲ್ಲಿ ಭೇಟಿ ಮಾಡಿ, ಆಶೀರ್ವಾದ ಪಡೆದರಲ್ಲದೆ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ರವಿಕುಮಾರ್‌ಗೌಡ ಗಣಿಗ, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಮರಿತಿಬ್ಬೇಗೌಡ, ಬಿ.ರಾಮಕೃಷ್ಣ ಮಂಡ್ಯ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಚಿದಂಬರ್ ಉಪಸ್ಥಿತರಿದ್ದರು.

ತವರಿನಲ್ಲಿ ಮುಗ್ಗರಿಸಿದ ಆರ್‌ಸಿಬಿ: ಲಕ್ನೋಗೆ ಜಯ



ಬೆಂಗಳೂರು, ಏ.2– ಕಳಪೆ ಬೌಲಿಂಗ್ ಹಾಗೂ ಬ್ಯಾಟ್ಸ್‌ಮನ್‌ಗಳ ಬ್ಯಾಟಿಂಗ್ ವೈಫಲ್ಯಕ್ಕೆ ಬೆಲೆತೆತ್ತ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ತವರಿನಲ್ಲೇ ಹೀನಾಯ ಸೋಲು ಅನುಭವಿಸಿದೆ. ಬ್ಯಾಟಿಂಗ್, ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ನೀಡಿದ ಲಕ್ನೋ 28 ರನ್‌ಗಳ ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ 4ನೇ ಸ್ಥಾನಕ್ಕೇರಿದೆ.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಕೆ.ಎಲ್.ರಾಹುಲ್ ಹಾಗೂ ಕ್ವಿಂಟಾನ್ ಡಿಕಾಕ್ ಮೊದಲ ವಿಕೆಟ್‌ಗೆ 53 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ರಾಹುಲ್ 20 ರನ್ ಸಿಡಿಸಿ ಔಟಾದರು. ಇವರ ಬೆನ್ನಲ್ಲೇ ದೇವದತ್ತ ಪಡಿಕ್ಕಲ್ 6 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಒಂದಾದ ಮಾರ್ಕಸ್ ಸ್ಟೊಯಿನಿಸ್ ಹಾಗೂ ಡಿಕಾಕ್ 56 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಡಿಕಾಕ್ ಅರ್ಧಶತಕ ಸಿಡಿಸಿದರೇ, ಮತ್ತೊಂದೆಡೆ ಸ್ಟೊಯಿನಿಸ್ 24 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಡಿಕಾಕ್ 56 ಎಸೆತಗಳಲ್ಲಿ 8 ಬೌಂಡರಿ, 5 ಸಿಕ್ಸರ್ ಒಳಗೊಂಡ 81 ರನ್ ಪೇರಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ನಿಕೋಲಸ್ ಪೂರನ್ 5 ಸಿಕ್ಸರ್, 1 ಬೌಂಡರಿ ಒಳಗೊಂಡ ಮಿಂಚಿನ 40 ರನ್ ಗಳಿಸಿದರು. ಬೆಂಗಳೂರು ಪರ ಗ್ಲೆನ್ ಮ್ಯಾಕ್ಸ್‌ವೆಲ್ 2, ಮೊಹಮ್ಮದ್ ಸಿರಾಜ್, ಯಶ್ ದಯಾಳ್ ಹಾಗೂ ರೀಸ್ ಟಾಪ್ಲಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.

182 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 19.4 ಓವರ್‌ಗಳಲ್ಲಿ 153 ರನ್‌ಗಳಿಗೆ ಆಲೌಟಾಯಿತು. ಬೃಹತ್ ಗುರಿ ಬೆನ್ನತ್ತಿದ ಆರ್‌ಸಿಬಿ ಆರಂಭದಲ್ಲಿ ಸ್ಫೋಟಕ ಪ್ರದರ್ಶನ ನೀಡಿದರೂ, ಬ್ಯಾಕ್ ಟು ಬ್ಯಾಕ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು. 4.2 ಓವರ್‌ಗಳಲ್ಲಿ 40 ರನ್ ಗಳಿಸಿ ಒಂದು ವಿಕೆಟ್ ಕಳೆದುಕೊಂಡಿದ್ದ ಆರ್‌ಸಿಬಿ ಮುಂದಿನ 18 ರನ್ ಗಳಿಸುಷ್ಟರಲ್ಲಿ ಅಗ್ರ ಕ್ರಮಾಂಕದ 3 ವಿಕೆಟ್‌ಗಳನ್ನು ಕಳೆದುಕೊಂಡಿತು.

ಮಧ್ಯಮ ಕ್ರಮಾಂಕದಲ್ಲಿ ಮಹಿಪಾಲ್ ಲೋಮ್ರೋರ್ ಹಾಗೂ ರಜತ್ ಪಾಟೀದಾರ್ ಅವರ ಆಟವು ಗೆಲುವಿನ ಭರವಸೆ ಹೆಚ್ಚಿಸಿತ್ತು. ಇವರಿಬ್ಬರ ವಿಕೆಟ್ ಕಳೆದುಕೊಳ್ಳುತ್ತಿದ್ದಂತೆ ಆರ್‌ಸಿಬಿ ಗೆಲುವಿನ ಕನಸು ಕಮರಿತು. ಆರ್‌ಸಿಬಿ ಪರ ಮಹಿಪಾಲ್ ಲೋಮ್ರೋರ್ 13 ಎಸೆತಗಳಲ್ಲಿ ತಲಾ 3 ಸಿಕ್ಸ್, ಬೌಂಡರಿ ಒಳಗೊಂಡ ಸ್ಫೋಟಕ 33 ರನ್ ಚಚ್ಚಿದರೆ, ವಿರಾಟ್ ಕೊಹ್ಲಿ 22, ಫಾಫ್ ಡು ಪ್ಲೆಸಿಸ್ 19, ರಜತ್ ಪಾಟಿದಾರ್ 29, ಕ್ಯಾಮರೂನ್ ಗ್ರೀನ್ 9, ಅನೂಜ್ ರಾವತ್ 11, ಸಿರಾಜ್ 12, ಟಾಪ್ಲಿ 3 ರನ್ ಗಳಿಸಿದರು. ಭರವಸೆ ಆಟಗಾರ ಗ್ಲೆನ್ ಮ್ಯಾಕ್ಸ್‌ವೆಲ್ ಶೂನ್ಯ ಸುತ್ತಿದರು.

ಲಕ್ನೋ ಪರ ಮಯಾಂಕ್ ಯಾದವ್ 3, ನವೀನ್ ಉಲ್ ಹಕ್ 2 ಹಾಗೂ ಮಣಿಮಾರನ್ ಸಿದ್ಧಾರ್ಥ್, ಯಶ್ ಠಾಕೂರ್, ಮಾರ್ಕಸ್ ಸ್ಟೋಯ್ನಿಸ್ ತಲಾ ಒಂದೊಂದು ವಿಕೆಟ್ ಪಡೆದರು. ಮಯಾಂಕ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ
ಡೆಲ್ಲಿ V/S ಕೋಲ್ಕತ್ತಾ
ಸ್ಥಳ: ವಿಶಾಖಪಟ್ಟಣಂ, ವೈ.ಎಸ್.ರಾಜಶೇಖರರೆಡ್ಡಿ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

PUBLIC NOTICE

This is to inform the public in general that our client Mr. SHUEEB AHMED S/o Mr Ashfaq Ahmed, is purchasing the Schedule property from Mr. H. MURULI S/o MK Hayagreevin. If any person has any kind of Right, Title, interest, objection, claim or Enforceable charge over the schedule Property or to the proposed Sale by them they may lodge their claim/ objection with the undersigned within 7 days from the notification with supporting documents, Due failing which my client will take it for granted that there are no claims/charges/-objections whatsoever from whomsoever. Any claims/ objections received after stipulation period of 7 days will be dated have no claim and the same will be ignored.

SCHEDULE PROPERTY: The Property bearing No. 159, Situated in the layout called "Kaveri Nagar" According to Rammanahalli Town Panchayath office Property No. 4640670166, formed & developed by Sri. Jayachamarajendra Housing Co-Operative Society Ltd, at Hanchya Village, Kasaba Hobali, Mysore Taluk, Mysore and Measuring East to West 12.00 Meters and North to South 18.00 Meters of vacant site.

Sd/- Asadulla Khan,
BSc, LL.B, PGDM
ADVOCATE & NOTARY
Roshan Hussain, Saifuddin, Advocates, Shop No.13, Sadiq-ul-Ameen Masjid Complex, Mahadevapura Road, Udayagiri, MYSORE-10

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು


ಸಂಖ್ಯೆ: ಮೈನಪ್ರಾ/ ವಿತ-2 /ಪಿ.ಆರ್.413/2023-24, ದಿನಾಂಕ: 25.03.2024

ಪತ್ರಿಕಾ ಪ್ರಕಟಣೆ

ಶ್ರೀ ಮಹದೇವ ಬಿನ್ ಚಿಕ್ಕೆಗೌಡ, ನಂ. 3004, 5ನೇ ಮೇನ್ ರೋಡ್, 12ನೇ ಕ್ರಾಸ್, ವಿ.ವಿ.ಮೊಹಲ್ಲಾ ಮೈಸೂರು-570002 ಇವರಿಗೆ ಆಶಾಮಂದಿರ ಸಾಮೂಹಿಕ ವಸತಿ ಯೋಜನೆಯಡಿ ದಟ್ಟಗಳ್ಳಿ 'ಇ' & 'ಎಫ್' ಬ್ಲಾಕ್ ಬಡಾವಣೆ ಅಳತೆ 6.00 x 9.00 ಮೀಟರ್, ನಿ.ಸಂಖ್ಯೆ 83 ದಿನಾಂಕ-16-09-1987 ರಂದು ಮಂಜೂರಾಗಿದ್ದು, ಪಟ್ಟಾ ಪುಸ್ತಕ ಪಡೆದಿರುತ್ತಾರೆ. ಮೂಲ ಮಂಜೂರಾತಿದಾರರಾದ ಶ್ರೀ ಮಹದೇವರವರು ಶ್ರೀ. ಕೆ.ಪಿ.ಮಹದೇವಪ್ಪ ಬಿನ್ ಲೇಟ್ ಪುಟ್ಟಬಸಪ್ಪ ರವರಿಗೆ ಉಪ-ನೋಂದಣಾಧಿಕಾರಿಗಳು, ಮೈಸೂರು (ದಕ್ಷಿಣ), ಮೈಸೂರು ರವರ ಕಛೇರಿಯಲ್ಲಿ 1 ನೇ ಪುಸ್ತಕದ ಸಂಪುಟ ಸಂಖ್ಯೆ 4281, ಪುಟ ಸಂ.211-213 ದಸ್ತಾವೇಜು ಸಂಖ್ಯೆ 4656 ದಿನಾಂಕ:05-12-1992 ರಂದು ನೋಂದಾಯಿಸಿರುತ್ತಾರೆ. ಇವರು ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾತಾ ನೋಂದಾಯಿಸಿಕೊಂಡು ಇವರ ಮಗಳಾದ ಶ್ರೀಮತಿ ಎಂ. ಪ್ರೇಮ ರವರಿಗೆ ದಿನಾಂಕ:14-11-2005 ರಂದು ನೋಂದಾಯಿತವಲ್ಲದ ವಿಲ್ ಮಾಡಿರುತ್ತಾರೆ. ಶ್ರೀ. ಕೆ.ಪಿ.ಮಹದೇವಪ್ಪ ರವರು ದಿನಾಂಕ:09-12-2005 ರಂದು ಮರಣ ಹೊಂದಿರುತ್ತಾರೆ. ಇವರ ವಂಶವೃಕ್ಷದ ದಿನಾಂಕ:29-10-2020 ರ ದೃಢೀಕರಣ ಪತ್ರದ ಸಂಖ್ಯೆ. ಆರ್.ಡಿ. 5018882342730 ರಂತೆ ಶ್ರೀಮತಿ. ಪಾರ್ವತಮ್ಮ (ಪತ್ನಿ), ಶ್ರೀ. ಶಿವಪ್ರಕಾಶ್.ಎಂ. (ಮಗ ಪೌತಿ), ಶ್ರೀಮತಿ. ಹೇಮಾವತಿ (ಸೊಸೆ) ಕೋಂ ಲೇಟ್ ಶಿವಪ್ರಕಾಶ್.ಎಂ. ಶ್ರೀ. ಮಹದೇವಸ್ವಾಮಿ (ಮಗ ಪೌತಿ), ಶ್ರೀಮತಿ. ಪ್ರೇಮ.ಎಂ (ಮಗಳು), ಶ್ರೀಮತಿ. ಎಂ. ಭಾಗ್ಯ ಲಿಂಗರಾಜು(ಮಗಳು) ಎಂಬುವವರುಗಳಿರುತ್ತಾರೆ. ಶ್ರೀಮತಿ, ಪಾರ್ವತಮ್ಮ, ಶ್ರೀಮತಿ. ಹೇಮಾವತಿ, ಶ್ರೀಮತಿ. ಎಂ.ಭಾಗ್ಯ ಲಿಂಗರಾಜು ರವರುಗಳು ಶ್ರೀಮತಿ, ಪ್ರೇಮ.ಎಂ. ರವರಿಗೆ ಕ್ರಯಪತ್ರ ನೀಡುವ ಬಗ್ಗೆ ತಮ್ಮದೇನು ಅಭ್ಯಂತರವಿಲ್ಲವೆಂದು ದಿನಾಂಕ:07-02-2024 ರಂದು ಸಮ್ಮತಿ ಪತ್ರ ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಅದರಂತೆ ಶ್ರೀಮತಿ. ಪ್ರೇಮ.ಎಂ. ರವರು ಕ್ರಯಪತ್ರ ನೀಡುವಂತೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಶ್ರೀಮತಿ. ಪ್ರೇಮ,ಎಂ ಕೋಂ ಲೇಟ್ ಮಹದೇವಪ್ಪ.ಎಂ, ಮನೆ ನಂ. 83, 6ನೇ ಕ್ರಾಸ್ 'ಇ' & 'ಎಫ್' ಬ್ಲಾಕ್, ರಾಮಕೃಷ್ಣ ನಗರ, ಮೈಸೂರು ರವರು ದಟ್ಟಗಳ್ಳಿ 'ಇ' & 'ಎಫ್' ಬ್ಲಾಕ್ ಬಡಾವಣೆ, ಅಳತೆ 6.00 x 9.00 ಮೀಟರ್, ನಿ.ಸಂಖ್ಯೆ 83 ರ ಕ್ರಯಪತ್ರ ಕೋರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ನಿವೇಶನವನ್ನು ಕ್ರಯದಂತೆ ಮತ್ತು ಪೌತಿವರ್ಗಾವಣೆ ರೀತ್ಯಾ ವರ್ಗಾವಣೆ ಮಾಡಿ ಕ್ರಯಪತ್ರ ಕೋರಿರುವ ಬಗ್ಗೆ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು. ನಿಗಧಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ಸಹಿ/- ವಿಶೇಷ ತಹಸೀಲ್ದಾರ್ , ವಲಯ ಕಛೇರಿ-2, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು



ಮೈಸೂರಿನಲ್ಲಿ ಒಂದೆಡೆ ಬಿಸಿಲಿನ ಧಗೆ, ಮತ್ತೊಂದೆಡೆ ಚುನಾವಣಾ ಕಾವು

ಪ್ರತಿಷ್ಠೆಯ ಕಣದಲ್ಲಿ ಸಿದ್ದರಾಮಯ್ಯರಿಂದ ಟೆಂಪಲ್ ರನ್, ಸ್ವಾಮೀಜಿ ಭೇಟಿ

ಪ್ರಚಾರ ಸಭೆಯಲ್ಲಿ ವಿರೋಧಿಗಳಿಗೆ ಸಿದ್ದು ಗುದ್ದು



ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಮೈಸೂರಿನ ಶಂಕರ ಮಠದಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯ ವಿಧುಶೇಖರ ಭಾರತಿ ಸನ್ನಿಧಾನರ ಆಶೀರ್ವಾದ ಪಡೆದರು. ಸಚಿವ ವೆಂಕಟೇಶ್, ಶಾಸಕ ರವಿಶಂಕರ್, ಮಾಜಿ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಎಂ.ಕೆ.ಸೋಮಶೇಖರ್, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರು ಈ ವೇಳೆ ಶ್ರೀಗಳ ಆಶೀರ್ವಾದ ಪಡೆದರು.

ಮೈಸೂರು, ಏ.2(ಬಿಎಲ್‌ಯು)- ಮೈಸೂರಿನಲ್ಲಿ ಒಂದೆಡೆ ಬೇಸಿಗೆ ಬಿಸಿಲಿನ ಧಗೆ ಹೆಚ್ಚಾಗಿದ್ದರೆ, ಮತ್ತೊಂದು ಕಡೆ ಚುನಾವಣಾ ಕಾವು ರಂಗೇರಿದೆ. ತವರು ಕ್ಷೇತ್ರ ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಶತಾಯಗತಾಯ ಗೆಲುವು ಸಾಧಿಸಲು ಪಣ ತೊಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮಠಾಧೀಶರ ಭೇಟಿ, ಟೆಂಪಲ್ ರನ್ ನಡೆಸಿದರು. ಮಧ್ಯಾಹ್ನದ ಬಿಸಿಲಿನ ಝಳದಲ್ಲೇ ಪ್ರಚಾರ ಸಭೆಯಲ್ಲಿ ಸಿದ್ದರಾಮಯ್ಯ, ವಿರೋಧಿ ಪಾಳೆಯದ ವಿರುದ್ಧ ಅಬ್ಬರಿಸಿದರು.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಫಲಿತಾಂಶವನ್ನು ಸಿದ್ದರಾಮಯ್ಯ ಪ್ರತಿಷ್ಠೆಯಾಗಿ ಪರಿಗಣಿಸಿದ್ದಾರೆ. ಕಮಲದ ದಳಗಳನ್ನು ಉದುರಿಸಿ ಹಸ್ತವನ್ನು ಹಚ್ಚಾಗಿಸಲು 15 ದಿನದಲ್ಲಿ ಮೂರನೆ ಬಾರಿಗೆ ಮೈಸೂರಿಗೆ ಆಗಮಿಸಿದ್ದಾರೆ. ನಿನ್ನೆಯೇ ಮೈಸೂರಿಗೆ ಬಂದ ಸಿದ್ದರಾಮಯ್ಯ ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಇಂದು ಬೆಳಗ್ಗೆ ನಿಗದಿತ ಸಮಯಕ್ಕೆ ರಾಮಕೃಷ್ಣನಗರದ ತಮ್ಮ ಮನೆಯಿಂದ ಹೊರಟರು. ಈ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಸಿದ್ದರಾಮಯ್ಯ ಚುನಾವಣಾ ಫಲಿತಾಂಶದ ಬಗ್ಗೆ ನನಗೆ ಆತಂಕವಿಲ್ಲ. ಆದ ಕಾರಣ ಕೂಲ್ ಆಗಿದ್ದೇನೆ ಎಂದು ಅತೀವ ವಿಶ್ವಾಸ ವ್ಯಕ್ತಪಡಿಸಿದರು.

ಏಪ್ರಿಲ್ 12, 13 ಮತ್ತು 14 ರಂದು ಮೈಸೂರು-ಕೊಡಗು ಹಾಗೂ ಚಾಮರಾಜನಗರದಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇನೆ. ಎರಡೂ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಗೆಲುವು ಸಾಧಿಸುತ್ತಾರೆ ಎಂದು ಸಿದ್ದರಾಮಯ್ಯ ಹೇಳಿದರು.

ತರುವಾಯ ಮೈಸೂರಿನ ಕೆ.ಆರ್. ಮೊಹಲ್ಲಾದ ಗನ್ ಹೌಸ್ ಬಳಿಯ ಶಾರದಾಂಬೆ ದೇವಸ್ಥಾನಕ್ಕೆ ಸಿದ್ದರಾಮಯ್ಯ ಆಗಮಿಸಿದರು. ಈ ವೇಳೆ ಶೃಂಗೇರಿ ಶಾರದಾ ಪೀಠದ ವತಿಯಿಂದ ಸಿದ್ದರಾಮಯ್ಯರಿಗೆ ಪೂರ್ಣ ಕುಂಭ ಸ್ವಾಗತ ಕೋರಲಾಯಿತು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಶಾರದಾಂಬೆ ದರ್ಶನ ಪಡೆದರು. ನಂತರ ಅಲ್ಲೇ ವಾಸ್ತವ್ಯ ಹೂಡಿರುವ ಶೃಂಗೇರಿ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಸ್ವಾಮೀಜಿ ಭೇಟಿ ನಂತರ ನೇರವಾಗಿ ನಗರದ ಹೆಬ್ಬಾಳಿನ ಅಭಿಷೇಕ್ ಸರ್ಕಲ್ ಬಳಿ ಪ್ರಚಾರ ಸಭೆಯಲ್ಲಿ ಭಾಗಿಯಾಗಿದ್ದರು.

ಮೈಸೂರಿನಲ್ಲಿ ಇಂದು 35 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಮಧ್ಯಾಹ್ನದ ಬೇಸಿಗೆ ಬಿಸಿಲಿನ ತಾಪ ಬೆವರು ಹರಿಸುತ್ತಿತ್ತು. ಈ ಸಂದರ್ಭದಲ್ಲಿ ಜನರನ್ನು ಹಿಡಿದಿಟ್ಟು ಸಭೆ ಮಾಡುವುದು ಆಯೋಜಕರಿಗೆ ಸವಾಲಾಗಿತ್ತು. ಈ ವೇಳೆ ಯಾರೂ ಎದ್ದು ಹೊರ ನಡೆಯಬೇಡಿ ಎಂದು ಆಗಾಗ ಮನವಿ ಮಾಡುತ್ತಿದ್ದರು.

ಡಾ.ಮಂಜುನಾಥ್ ಪರ ಚನ್ನಪಟ್ಟಣದಲ್ಲಿ ಗೃಹ ಸಚಿವ ಅಮಿತ್ ಷಾ ಭರ್ಜರಿ ರೋಡ್ ಶೋ



ಚನ್ನಪಟ್ಟಣ, ಏ.2- ಬಿಜೆಪಿ ಚಾಣಕ್ಯ ಅಮಿತ್ ಷಾ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಚನ್ನಪಟ್ಟಣದಲ್ಲಿ ಮಂಗಳವಾರ ಭರ್ಜರಿ ರೋಡ್ ಶೋ ಮೂಲಕ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಪರ ಮತಬೇಟೆ ನಡೆಸಿದರು.

ಲೋಕಸಭಾ ಚುನಾವಣೆ ಅಖಾಡ ದಿನೇ ದಿನೆ ರಂಗೇರುತ್ತಿದ್ದು, ಅಮಿತ್ ಷಾ ರೋಡ್ ಶೋ ಬಿಜೆಪಿ ವಲಯದ ರಣೋತ್ಸಾಹ ಹೆಚ್ಚಿಸಿದೆ. ಡಿಕೆ ಸೋದರರ ಭದ್ರ ಕೋಟೆ ಎನ್ನಲಾಗುವ ಈ ಕ್ಷೇತ್ರವನ್ನು ಅಮಿತ್ ಷಾ ಪ್ರತಿಷ್ಠೆಯ ಕಣವಾಗಿ ಪರಿಗಣಿಸಿ, ಸ್ವತಃ ಅಖಾಡಕ್ಕಿಳಿದಿದ್ದಾರೆ. ಬೆಂಗಳೂರಿನಲ್ಲಿ ಸರಣಿ ಸಭೆ ನಡೆಸಿದ ಅಮಿತ್ ಷಾ, ಹೆಲಿಕಾಪ್ಟರ್ ಮೂಲಕ ಚನ್ನಪಟ್ಟಣಕ್ಕೆ ಆಗಮಿಸಿ, ಸುಮಾರು ಒಂದೂವರೆ ಕಿ.ಮೀ. ರೋಡ್ ಶೋನಲ್ಲಿ ಪಾಲ್ಗೊಂಡರು. ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದ ಅಮಿತ್ ಷಾಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವರಾದ ಸಿ.ಪಿ.ಯೋಗೇಶ್ವರ್, ಅಶ್ವಥ್ ನಾರಾಯಣ್, ಕ್ಷೇತ್ರದ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಸೇರಿದಂತೆ ಹಲವು ಮುಖಂಡರು ಸಾಥ್ ನೀಡಿದ್ದರು.

ಜೈ ಶ್ರೀರಾಮ್, ಮೋದಿ ಘೋಷಣೆ: ರೋಡ್ ಶೋ ವೇಳೆ ಬಿಜೆಪಿ ಕಾರ್ಯಕರ್ತರು ಸೇರಿದಂತೆ ನೆರೆದಿದ್ದ ಸಾವಿರಾರು ಮಂದಿ 'ಜೈ ಶ್ರೀರಾಮ್' ಘೋಷಣೆ ಮೊಳಗಿಸಿದರು. ಮೆರವಣಿಗೆ ಉದ್ದಕ್ಕೂ 'ಜೈ ಶ್ರೀರಾಮ್, ವಂದೇ ಮಾತರಂ, ಭಾರತ್ ಮಾತಾಕಿ ಜೈ, ಮೋದಿ ಮೋದಿ..' ಘೋಷಣೆ ಮುಗಿಲು ಮುಟ್ಟಿತ್ತು. ಬಿಜೆಪಿ ಕಾರ್ಯಕರ್ತರ ಉತ್ಸಾಹ ಇಮ್ಮಡಿಗೊಂಡಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಭಾರೀ ಸಂಖ್ಯೆಯಲ್ಲಿ ಜನರು ನಿಂತು ಅಮಿತ್ ಶಾಗೆ ಭರ್ಜರಿ ಸ್ವಾಗತ ನೀಡಿದರು. ಅಮಿತ್ ಷಾ ಜನರ ಮೇಲೆ ಹೂಮಳೆ ಗರೆದು ಸಂತಸ ವ್ಯಕ್ತಪಡಿಸಿದರು. ರಾಮನಗರ ಎಸ್ಪಿ ಕಾರ್ತಿಕ್ ರೆಡ್ಡಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಕಳೆದ 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರುವ ಏಕೈಕ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಪುನರಾಯ್ಕೆ ಬಯಸಿ ಈ ಬಾರಿಯೂ ಕಣಕ್ಕಿಳಿದಿದ್ದಾರೆ. ಅವರು ಮೊದಲ ದಿನವೇ ನಾಮಪತ್ರ ಸಲ್ಲಿಸಿ ಭರ್ಜರಿ ಪ್ರಚಾರದಲ್ಲಿ ನಿರತರಾಗಿದ್ದಾರೆ. ಡಿಕೆಶಿ ಮಾತ್ರವಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಡಿ.ಕೆ.ಸುರೇಶ್ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದರ ನಡುವೆ ಅಮಿತ್ ಷಾ, ಭರ್ಜರಿ ರೋಡ್ ಶೋ ನಡೆಸಿದ್ದು ಬಿಜೆಪಿ-ಜೆಡಿಎಸ್ ಮೈತ್ರಿಗೆ ಬೂಸ್ಟ್ ನೀಡಿದಂತಾಗಿದೆ.

ಇಂದು ಬೆಳಗ್ಗೆ ಬೆಂಗಳೂರಿಗೆ ಆಗಮಿಸಿದ ಅಮಿತ್ ಷಾ, ಬಿಜೆಪಿ ಹಾಗೂ ಮೈತ್ರಿ ಪಕ್ಷ ಜೆಡಿಎಸ್ ನಾಯಕರ ಜೊತೆ ಉಪಹಾರ ಸೇವಿಸಿದ ನಂತರ ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಬಳಿಕ ಈ ಎಲ್ಲಾ ಕ್ಷೇತ್ರಗಳ ಪ್ರಮುಖರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು.

ಡಾ.ಮಂಜುನಾಥ್ ಭಾರೀ ಅಂತರದಲ್ಲಿ ಗೆಲ್ಲುವರು; ಅಮಿತ್ ಷಾ

ಚನ್ನಪಟ್ಟಣ: ರೋಡ್ ಶೋ ವೇಳೆ ಅಮಿತ್ ಷಾ, ನಮ್ಮ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅವರು 5 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಜಯ ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಬಾರಿ ನರೇಂದ್ರ ಮೋದಿಯವರಿಗೆ ಹೆಚ್ಚು ಶಕ್ತಿ ನೀಡಬೇಕಾದರೆ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಿಗೆ ವೋಟ್ ನೀಡಬೇಕು. ಮೋದಿ ಅವರ ಆಶಯದಂತೆ ದೇಶದಲ್ಲಿ 400ಕ್ಕೂ ಹೆಚ್ಚು ಸ್ಥಾನ ಗೆಲ್ಲಿಸುವ ಮೂಲಕ ದೊಡ್ಡ ಶಕ್ತಿ ನೀಡಬೇಕು. ಮೋದಿ ಅವರ ಕಳೆದ 10 ವರ್ಷದ ಆಡಳಿತದಲ್ಲಿ ದೇಶದ ಆರ್ಥಿಕ ಶಕ್ತಿ ಎಷ್ಟು ಮುಂದುವರೆದಿದೆ ಎಂದು ಎಲ್ಲರ ಕಣ್ಮುಂದೆ ಇದೆ ಎಂದರು. ದೇಶವನ್ನು ಆರ್ಥಿಕವಾಗಿ ಪ್ರಪಂಚದಲ್ಲಿಯೇ 5ನೇ ದೊಡ್ಡ ಶಕ್ತಿಯನ್ನಾಗಿ ಮಾಡಿದ ಕೀರ್ತಿ ಮೋದಿಗೆ ಸಲ್ಲುತ್ತದೆ. ಮತ್ತೊಮ್ಮೆ ಶಕ್ತಿ ತುಂಬಿದರೆ ದೇಶ 3ನೇ ಸ್ಥಾನ ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಜೊತೆಗೆ ದೇಶದ ಸುರಕ್ಷತೆ ದೃಷ್ಟಿಯಿಂದ ಬಿಜೆಪಿಗೆ ಮತ ನೀಡಬೇಕು. ನಮಗೆ ಭ್ರಷ್ಟಾಚಾರ ಮುಕ್ತ ಆಡಳಿತ ಬೇಕು. ಮೋದಿ ವಿರುದ್ಧ ಒಂದೇ ಒಂದು ಭ್ರಷ್ಟಾಚಾರ ಪ್ರಕರಣ ಇಲ್ಲ. ಹಾಗೆಯೇ ಡಾ.ಮಂಜುನಾಥ್ ಅವರು ಪ್ರಾಮಾಣಿಕರಾಗಿದ್ದಾರೆ. ಅವರನ್ನು ಭಾರೀ ಅಂತರದಿಂದ ಗೆಲ್ಲಿಸಬೇಕು ಎಂದು ಹೃದಯ ಪೂರ್ವಕವಾಗಿ ಮನವಿ ಮಾಡಿದರು.

ಕರ್ನಾಟಕದಿಂದ ಹೆಚ್ಚಿನ ಅಭ್ಯರ್ಥಿಗಳನ್ನು ಗೆಲ್ಲಿಸಿ

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮದನ್ ಪಟೇಲ್ ಮನವಿ



ಮೈಸೂರು,ಏ.2-2024ರ 18ನೇ ಲೋಕಸಭಾ ಚುನಾವಣೆ ಭಾರತದ ಭವಿಷ್ಯ ಬದಲಾವಣೆ ಮಾಡುವ ಚುನಾವಣೆಯಾಗಿರುತ್ತದೆ. ಸಂವಿಧಾನದಲ್ಲಿರುವ ಜಾತ್ಯಾತೀತ, ಸಮಾಜವಾದ ಪದಗಳೇ ಬಿಜೆಪಿಗೆ ಆಗಿ ಬರುವುದಿಲ್ಲ. ಭಾರತೀಯ ಜನತಾ ಪಕ್ಷದ ಘೋಷಣೆಗಳಾದ ಭ್ರಷ್ಟಾಚಾರ ಮುಕ್ತ ಭಾರತ, ಅಚ್ಛೆ ದಿನ್, ವರ್ಷಕ್ಕೆರಡು ಕೋಟಿ ಉದ್ಯೋಗ, ಉಚಿತ ಗ್ಯಾಸ್, ರೈತರ ಬೆಳೆಗೆ ದ್ವಿಗುಣ ಬೆಲೆ ಇಂತಹ ಯಾವ ಘೋಷಣೆಗಳು ಈ ಬಾರಿ ಇಲ್ಲ. ಏಕೆಂದರೆ ಈ ಘೋಷಣೆಗಳು ಈಡೇರುವುದಿಲ್ಲ, ಇನ್ನು ಮುಂದೆಯೂ ಈಡೇರಿಸುವ ಉದ್ದೇಶವೂ ಇಲ್ಲ. ಮುಖ್ಯವಾಗಿ ಬಹುತ್ವ, ಜಾತ್ಯಾತೀತ, ವೈವಿಧ್ಯತೆ, ಸಮಾನತೆ, ಸಹಿಷ್ಣುತೆ ಇವೆಲ್ಲಾ ಬಿಜೆಪಿಯವರಿಗೆ ಅರಗಿಸಿಕೊಳ್ಳಲಾಗದ ಪದಗಳು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮದನ್ ಪಟೇಲ್ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 5 ಗ್ಯಾರಂಟಿಗಳನ್ನು ಘೋಷಿಸಿ ಯಶಸ್ವಿಯಾಗಿ ರಾಜ್ಯದ ಜನತೆಗೆ ತಲುಪಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿಯವರು ಸಹ ದೇಶದ ಜನತೆಗೆ 5 ಗ್ಯಾರಂಟಿಗಳನ್ನು ಘೋಷಿಸಿದ್ದಾರೆ. ಕರ್ನಾಟಕದಲ್ಲಿ ಯಶಸ್ವಿಯಾಗಿರುವಂತೆಯೇ ಕೇಂದ್ರದಲ್ಲಿಯೂ ಗ್ಯಾರಂಟಿ ಅನುಷ್ಠಾನಗೊಳ್ಳಲು ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸುವಂತೆ ಮದನ್ ಪಟೇಲ್ ಮನವಿ ಮಾಡಿದ್ದಾರೆ.

ಮಂಗಳವಾರ 5 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ



ಎಂ.ರಾಮಮೂರ್ತಿ



ಎಂ.ಶ್ರೀನಿವಾಸ್



ಶಿವನಂಜಯ್ಯ



ಎಂ.ರಂಗಸ್ವಾಮಿ



ಜಿ.ಎಸ್.ಲೀಲಾವತಿ

ಮೈಸೂರು, ಏ.2(ಆರ್‌ಕೆ)-ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಬಯಸಿ ಇಂದು (ಏ.2) ಐವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಪಕ್ಷೇತರ ಅಭ್ಯರ್ಥಿಗಳಾಗಿ ಶಿವನಂಜಯ್ಯ, ಎಂ.ರಂಗಸ್ವಾಮಿ, ಎಂ.ಶ್ರೀನಿವಾಸ್, ಎಂ. ರಾಮಮೂರ್ತಿ ಹಾಗೂ ಉತ್ತಮ ಪ್ರಜಾಕೀಯ ಪಕ್ಷದಿಂದ ಜೆ.ಎಸ್.ಲೀಲಾವತಿ ಅವರು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಈವರೆಗೆ ಬಿಜೆಪಿಯ ಯದುವೀರ್ ಸೇರಿದಂತೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಬಯಸಿ ಒಟ್ಟು 12 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಏ.4 ನಾಮಪತ್ರ ಸಲ್ಲಿಸಲು ಕಡೇ ದಿನವಾಗಿದ್ದು, ನಾಳೆ(ಏ.3) ಬಿಜೆಪಿ ಅಭ್ಯರ್ಥಿ ಯದುವೀರ್ ಅವರು ಅಪಾರ ಸಂಖ್ಯೆಯ ಬೆಂಬಲಿಗರೊಂದಿಗೆ ಮತ್ತೊಂದು ಸೆಟ್ ಉಮೇದುವಾರಿಕೆ ಸಲ್ಲಿಸುವರು. ಹಾಗೆಯೇ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸಹ ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಇಂದು ಮಲೈಮಹದೇಶ್ವರ ರಸ್ತೆಯಲ್ಲಿ ವಾಹನಗಳಿಗೆ ಬದಲಿ ಸಂಚಾರ ಮಾರ್ಗ

ಮೈಸೂರು,ಏ.2(ಆರ್‌ಕೆ)-ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಬಂದು ಡಿಸಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸುವುದರಿಂದ ಜನದಟ್ಟಣೆ ಹಿನ್ನೆಲೆಯಲ್ಲಿ ನಾಳೆ (ಏ.3) ಮಲೈ ಮಹದೇಶ್ವರ ರಸ್ತೆಯ ಮಾರ್ಗದ ವಾಹನ ಸಂಚಾರವನ್ನು ಬದಲಿಸಲಾಗಿದೆ. ನಜರ್‌ಬಾದ್ ಸರ್ಕಲ್‌ನಿಂದ ಸಿದ್ಧಾರ್ಥ ಬಡಾವಣೆ ಕಡೆಗೆ ಬರುವ ವಾಹನಗಳು ವಸಂತ ಮಹಲ್, ಟ್ಯಾಂಕ್ ಬಂಡ್ ರೋಡ್, ಬುಲೆವಾರ್ಡ್ ಜಂಕ್ಷನ್, ಸಂಗೊಳ್ಳಿ ರಾಯಣ್ಣ ಸರ್ಕಲ್ ಮೂಲಕ ತಿ.ನರಸೀ ಪುರ ರಸ್ತೆ ಟಿ-ಜಂಕ್ಷನ್ ಮೂಲಕ ಮುಂದೆ ಸಾಗುವುದು. ಆರ್.ಮಹದೇವಪ್ಪ ಸರ್ಕಲ್ ನಿಂದ ನಜರ್‌ಬಾದ್ ಕಡೆಗೆ ಬರುವ ವಾಹನ ಗಳು ಟಿ.ಎನ್.ಪುರ ಟಿ-ಜಂಕ್ಷನ್, ಸಂಗೊಳ್ಳಿ ರಾಯಣ್ಣ ವೃತ್ತ ಬುಲೇವಾರ್ಡ್ ರಸ್ತೆ ಟ್ಯಾಂಕ್ ಬಂಡ್ ರಸ್ತೆ ವಸಂತ ಮಹಲ್ ಜಂಕ್ಷನ್ ಮೂಲಕ ಮುಂದೆ ಸಾಗಬೇಕೆಂದು ಪೊಲೀಸ್ ಆಯುಕ್ತರ ಪ್ರಕಟಣೆ ತಿಳಿಸಿದೆ.

ನಾಮಪತ್ರ ಸಲ್ಲಿಕೆ ಹಿನ್ನೆಲೆ

ಅಂಬಾರಿ ಬಸ್ ಏರಿ ಪಾಲಿಕೆ ಆಯುಕ್ತರಿಂದ ಮತದಾನ ಜಾಗೃತಿ

ಮೈಸೂರು, ಏ.2(ಆರ್‌ಕೆ)-ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಡಾ. ಎನ್.ಎನ್.ಮಧು ಅವರು ಮೈಸೂರಲ್ಲಿ ಅಂಬಾರಿ ಡಬಲ್ ಡೆಕರ್ ಬಸ್‌ನಲ್ಲಿ ಸಾರ್ವಜನಿಕರಿಗೆ ಮತದಾನದ ಅರಿವು ಮೂಡಿಸಿದರು.



ಅರಮನೆ ದಕ್ಷಿಣ ದ್ವಾರ'ದಿಂದ' ಕೆಎಸ್‌ಟಿಡಿಸಿ ಬಸ್‌ನಲ್ಲಿ ಸಿಸ್ಟಮ್ಯಾಟಿಕ್ ವೋಟರ್ಸ್ ಎಜುಕೇಷನ್ ಅಂಡ್ ಎಲೆಕ್ಟೋರಲ್ ಪಾರ್ಟಿಸಿಪೇಷನ್ (SVEEP) ಯೋಜನೆಯಡಿ ಘೋಷಣಾ ಫಲಕಗಳನ್ನು ಹಿಡಿದು ಪಾಲಿಕೆ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಸಂಚರಿಸಿ ಮತದಾರರಿಗೆ ಆಯುಕ್ತರು ಜಾಗೃತಿ ಮೂಡಿಸಿದರು.

ಹಾರ್ಡಿಂಜ್ ಸರ್ಕಲ್, ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆ, ಹೈವೇ ಸರ್ಕಲ್, ಎಲ್‌ಐಸಿ ಸರ್ಕಲ್, ಬಿ.ಎನ್.ರಸ್ತೆ, ನಜರ್‌ಬಾದ್ ಮೂಲಕ ಹಾರ್ಡಿಂಜ್ ಸರ್ಕಲ್‌ಗೆ ಮರಳಿ ನಂತರ ಅರಮನೆ ಉತ್ತರ ದ್ವಾರದ ಬಳಿ ಜಾಗೃತಿ ಕಾರ್ಯಕ್ರಮವನ್ನು ಅಂತ್ಯಗೊಳಿಸಿದರು. ಅದೇ ರೀತಿ ಜಿಲ್ಲಾ ನ್ಯಾಯಾಲಯದ ಸಮೀಪವಿರುವ ಕಾಫಿ ಜಾಯಿಂಟ್ ಶಾಪ್‌ನಲ್ಲೂ ಪಾಲಿಕೆಯಿಂದ ಮತದಾನ ಮಾಡುವುದಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ಜನರಿಗೆ ಜಾಗೃತಿ ಮೂಡಿಸಲಾಯಿತು.

ಚುನಾವಣಾ ಕರ್ತವ್ಯಲೋಪ ಸಹಾಯಕ ಅಭಿಯಂತರ ಅಮಾನತು

ಮೈಸೂರು, ಏ.2(ಎಸ್‌ಪಿಎನ್)- ಬೋಗಾದಿ ಚೆಕ್‌ಪೋಸ್ಟ್‌ನಲ್ಲಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಯೋರ್ವರನ್ನು ಚುನಾವಣಾ ಕರ್ತವ್ಯಲೋಪದ ಮೇಲೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಅಮಾನತುಗೊಳಿಸಿ, ಆದೇಶಿಸಿದ್ದಾರೆ.

ಮೈಸೂರು ವಿಸಿಸಿ ಉಪವಿಭಾಗದ ಸಹಾಯಕ ಅಭಿಯಂತರ ಹೆಚ್.ಹೆಚ್. ಹಾಲಪ್ಪ ಚುನಾವಣಾ ಕರ್ತವ್ಯ ಲೋಪದ ಮೇಲೆ ಅಮಾನತ್ತಾದವರು. ಇವರು, ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೋಗಾಧಿ ಚೆಕ್‌ಪೋಸ್ಟ್‌ನ ಎಸ್‌ಎಸ್ ತಂಡದಲ್ಲಿ ರಾತ್ರಿ 10ರಿಂದ ಬೆಳಗ್ಗೆ 6 ಗಂಟೆಯವರೆಗೆ ಚುನಾವಣಾ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾರಿಗೊಳಿಸುವ ಜವಾಬ್ದಾರಿ ನೀಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು, ಏ.1ರಂದು ರಾತ್ರಿ 10 ಗಂಟೆಗೆ ಚೆಕ್‌ಪೋಸ್ಟ್‌ಗೆ ತೆರಳಿ ಪರಿಶೀಲಿಸಿದ ಸಂದರ್ಭದಲ್ಲಿ ಸಹಾಯಕ ಅಭಿಯಂತರ ಹೆಚ್.ಹೆಚ್.ಹಾಲಪ್ಪ, ಬೋಗಾದಿ-ಮೈಸೂರು ಮಾರ್ಗವಾಗಿ ಸಾಗುತ್ತಿದ್ದ ವಾಹನಗಳನ್ನು ತಪಾಸಣೆ ಮಾಡದೆ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿ ಚುನಾವಣಾ ಕರ್ತವ್ಯಲೋಪ ವೆಸಗಿರುವುದು ಖಾತರಿಯಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾಳಿಗಳು 1957ರ ನಿಯಮ 10(1)ರ ಪ್ರಕಾರ, ಸಹಾಯಕ ಅಭಿಯಂತರ ಹೆಚ್.ಹೆಚ್.ಹಾಲಪ್ಪ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಟ್ಟು ಆದೇಶಿಸಲಾಗಿದೆ. ಸರ್ಕಾರಿ ಸೇವಾ ನಿಯಮಾವಳಿಗಳು 1957ರ ನಿಯಮ 98ರಡಿ ಜೀವಾನುಧಾರ ಭತ್ಯೆ ನಿಯಮ 104ರ ಷರತ್ತಿಗೆ ಒಳಪಟ್ಟು ವೇತನ ಪಾವತಿಸಲು ಉಲ್ಲೇಖಿಸಿ ಆದೇಶಿಸಿದ್ದಾರೆ.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರವಾಗಿ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ ಅಶೋಕಪುರಂ ಬಡಾವಣೆಯಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮತಯಾಚಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಎಚ್.ವಾಸು, ಭಾಸ್ಕರ್, ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ಶ್ರೀಧರ್, ಪೈಲ್ವಾನ್ ಕೃಷ್ಣ, ಬುದ್ಧ ಇದ್ದರು.

ಬಿಡಿಗಾಸು ಬರ ಪರಿಹಾರ ಕೊಡದವರಿಗೆ ಮತ ಕೇಳುವ ನೈತಿಕತೆ ಇದೆಯೇ?

ಕೇಂದ್ರ ಗೃಹ ಸಚಿವ ಅಮಿತ್ ಷಾಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಪ್ರಶ್ನೆ

- ಅವರೇನು ಭಿಕ್ಷೆ ಕೊಡುತ್ತಿದ್ದಾರೆಯೇ
- ತಮ್ಮ ಮನೆ ಹಣ ನೀಡುತ್ತಿದ್ದಾರೆಯೇ
- ಹೆಚ್.ಡಿ.ಕುಮಾರಸ್ವಾಮಿ ದೊಡ್ಡ ವಕ್ತಾರ
- ಈ ಬಾರಿ ಹಾಸನದಲ್ಲಿ ಪ್ರಜ್ವಲ್ ಸೋಲಿಸುತ್ತೇನೆ

ಮೈಸೂರು, ಏ2(ಬಿಎಲ್‌ಯು)- ಬರಗಾಲ ಬಂದಾಗ ಜನರ ಕಷ್ಟ ಕೇಳಲು ಬಾರದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಈಗ ಬಂದು ಯಾವ ನೈತಿಕತೆಯಿಂದ ಮತ ಕೇಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಾರವಾಗಿ ಪ್ರಶ್ನಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯದ ಜನರು ಬರದಿಂದ ತತ್ತರಿಸಿದ್ದು, ಪರಿಹಾರದ ಹಣ ನೀಡುವಂತೆ ಕಳೆದ ಐದು ತಿಂಗಳಿಂದ ಕೇಳುತ್ತಿದ್ದರೂ ಬಿಡಿಗಾಸು ನೀಡದೆ ಈಗ ಮತ ಕೇಳಲು ಕರ್ನಾಟಕಕ್ಕೆ ಬಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಮಿತ್ ಷಾ ತಮ್ಮ ಮನೆಯಿಂದ ತಂದು ಹಣ ಕೊಡುತ್ತಿದ್ದಾರೆಯೇ, ಅದೇನು ನಮಗೆ ಭಿಕ್ಷೆಯೇ ಎಂದು ಖಾರವಾಗಿ ಪ್ರಶ್ನಿಸಿದ ಸಿದ್ದರಾಮಯ್ಯ, ಲೋಕಸಭಾ ಚುನಾವಣೆಯಲ್ಲಿ ಕನ್ನಡಿಗರು ಇವರಿಗೆ ತಕ್ಕಪಾಠ ಕಲಿಸುತ್ತಾರೆ ಎಂದು ಸಿದ್ದರಾಮಯ್ಯ ಎಚ್ಚರಿಸಿದರು.

ಕರ್ನಾಟಕಕ್ಕೆ ಪರಿಹಾರದ ಹಣ ಕೊಡಿಸಿ ಆನಂತರ ಅಮಿತ್ ಷಾ ಅವರನ್ನು ಹೆಚ್.ಡಿ.ಕುಮಾರಸ್ವಾಮಿ ಕರೆ ತರಬೇಕಿತ್ತು. ಅದು ಬಿಟ್ಟು ಕೇಂದ್ರ ಸರ್ಕಾರದ ನಡೆಯನ್ನು ಸಮರ್ಥಿಸಿಕೊಳ್ಳುತ್ತಾ ಕುಮಾರಸ್ವಾಮಿ ದೊಡ್ಡ ವಕ್ತಾರರಂತೆ ಮಾತನಾಡುತ್ತಾರೆ ಎಂದು ಕಿಡಿಕಾರಿದರು.



ಮಂಡ್ಯದಲ್ಲಿನ ತಮ್ಮ ಸ್ಪರ್ಧೆ ದೇವರ ಇಚ್ಛೆ ಎಂಬ ಕುಮಾರಸ್ವಾಮಿ ಹೇಳಿಕೆಗೆ ವ್ಯಂಗ್ಯವಾಡಿದ ಸಿದ್ದರಾಮಯ್ಯ, ಇದೇ ಮಂಡ್ಯದಲ್ಲಿ ಮಗನನ್ನು ನಿಲ್ಲಿಸುವಾಗ ಯಾರ ಇಚ್ಛೆ ಇತ್ತು. ಈಗ ದೇವರ ಇಚ್ಛೆಯಾದರೆ ಆಗ ಯಾರ ಇಚ್ಛೆ ಇತ್ತು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಮಂಡ್ಯದಲ್ಲಿ ನನ್ನ ಮಗ ಸ್ಪರ್ಧೆ ಮಾಡಿದ್ದಾಗ ಕಾಂಗ್ರೆಸ್‌ನವರು ನಮ್ಮ ಬೆನ್ನಿಗೆ ಚೂರಿ ಹಾಕಿದರು ಎಂಬ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮೈಸೂರಿನಲ್ಲಿ ಜೆಡಿಎಸ್‌ನವರು ಕಾಂಗ್ರೆಸ್‌ಗೆ ಹಾಕಿದ್ದು ಯಾವ ಚೂರಿ ಎಂದು ಕುಮಾರಸ್ವಾಮಿಗೆ ಪ್ರಶ್ನೆಗಳ ಸುರಿಮಳೆಗೈಯ್ದರು.

ಕಳೆದ ಬಾರಿ ನಾನು ಹಾಸನಕ್ಕೆ ಹೋಗಿ ಚುನಾವಣಾ ಪ್ರಚಾರ ಮಾಡಿದ್ದಕ್ಕೆ ಪ್ರಜ್ವಲ್ ಗೆಲುವು ಸಾಧಿಸಲು ಸಾಧ್ಯವಾಯಿತು. ಆದರೆ ಈ ಬಾರಿ ನಾನು ಪ್ರಜ್ವಲ್ ಸೋಲಿಸುತ್ತೇನೆ. ಪ್ರಜ್ವಲ್ ಸೋಲಿಸಲೇಬೇಕೆಂದು ನಮ್ಮವರು ಪಣ ತೊಟ್ಟಿದ್ದಾರೆ ಎಂದು ಹೇಳಿದರು.

ವರುಣ ಕ್ಷೇತ್ರದ ಪ್ರಚಾರ ಸಭೆಯಲ್ಲಿ ನಿನ್ನೆ ಭಾವನಾತ್ಮಕವಾಗಿ ಮಾತನಾಡಿರುವುದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ 9 ಸಾವಿರ ಲೀಡ್ ಬಂದಿತ್ತು. ಈ ಬಾರಿ 60 ಸಾವಿರ ಲೀಡ್ ಕೊಡಿ ಎಂದು ಕೇಳಿದ್ದೇನೆ. ಬಿಜೆಪಿಯವರು ಬಂದರೆ ಬಡವರ ಕಾರ್ಯಕ್ರಮ ನಿಂತು ಹೋಗುತ್ತದೆ. ಆದ ಕಾರಣ ಕಾಂಗ್ರೆಸ್‌ಗೆ ಹೆಚ್ಚು ಲೀಡ್ ಕೊಡಿ ಎಂದು ಮನವಿ ಮಾಡಿದ್ದೇನೆ. ಅದು ನನ್ನ ಸಹಜ ಮಾತುಗಳಷ್ಟೆ ಎಂದು ಸ್ಪಷ್ಟಪಡಿಸಿದರು.

ಮೈಸೂರು ಮತ್ತು ಚಾಮರಾಜನಗರ ಮಾತ್ರವಲ್ಲದೆ ರಾಜ್ಯದ 28 ಕ್ಷೇತ್ರಗಳ ವಿಚಾರದಲ್ಲಿ ಕೂಡ ಗಂಭೀರವಾಗಿದ್ದು, ನಾವು 20 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು-ಕೊಡಗು ಮತ್ತು ಚಾಮರಾಜನಗರದಲ್ಲಿ ಏಪ್ರಿಲ್ 12ಕ್ಕೆ ಮೈಸೂರಿಗೆ ಬಂದು ಮೂರು ದಿನ ಮೂರು ಜಿಲ್ಲೆಗಳಲ್ಲಿ ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇನೆ ಎಂದು ಹೇಳಿದರು.

ಬಳ್ಳಾರಿ ಗಣಿ ಹಗರಣ ಸಂಬಂಧ ನಾನು ಪಾದಯಾತ್ರೆ ಮಾಡಿದ್ದೆ. ಅಂದಿನ ಲೋಕಾಯುಕ್ತ ಸಂತೋಷ್ ಹೆಗ್ಡೆ ವರದಿ ಉಲ್ಲೇಖಿಸಿ ಮಾತನಾಡಿದ್ದೆ. ಬೇಕಿದ್ದರೆ ಇದನ್ನು ಪ್ರಶ್ನಿಸಿ ಜನಾರ್ಧನ ರೆಡ್ಡಿ ಕೋರ್ಟ್‌ಗೆ ಹೋಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಅಮಿತ್ ಷಾ ಗೂಂಡಾ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ಮಗನಿಗೆ ಚುನಾವಣಾ ಆಯೋಗದಿಂದ ನೋಟಿಸ್ ಬಂದಿದೆ. ಅದಕ್ಕೆ ನನ್ನ ಮಗ ಉತ್ತರ ಕೊಡುತ್ತಾನೆ. ನೋಟಿಸ್‌ನಲ್ಲಿ ಏನಿದೆ ಎಂಬ ಬಗ್ಗೆ ಹೆಚ್ಚಿನ ವಿವರ ಗೊತ್ತಿಲ್ಲದ ಕಾರಣ, ಆ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನನಗೆ ಟೆನ್ಷನ್ ಇಲ್ಲ, ಕೂಲ್ ಆಗಿದ್ದೇನೆ!

ನನಗೆ ಟೆನ್ಷನ್ ಏಕೆ, ನಾನು ಕೂಲ್ ಆಗಿದ್ದೇನೆ. ಕೂಲ್ ಆಗಿರುವುದು ನನ್ನ ಆರೋಗ್ಯದ ಗುಟ್ಟು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ತೀರ್ಮಾನಿಸಿದ್ದೇನೆ. ಆದರೆ ಜನರು ಪ್ರೀತಿಯಿಂದ ಮತ್ತೆ ಸ್ಪರ್ಧಿಸುವಂತೆ ಕೋರಿದ್ದಾರೆ. ಆದರೆ ನಾನು ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗಲು ನಿರ್ಧರಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು. ಮುಂದಿನ ನಾಲ್ಕು ವರ್ಷಕ್ಕೆ ನನಗೆ 83 ವರ್ಷ ವಯಸ್ಸಾಗುತ್ತದೆ. ಆಗ ಈಗಿನಷ್ಟು ಉತ್ಸಾಹದಿಂದ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ನನ್ನ ದೇಹ ಸ್ಥಿತಿ ನನಗೆ ಮಾತ್ರ ಗೊತ್ತಿದೆ. ಆದ ಕಾರಣ ಚುನಾವಣೆಯಲ್ಲಿ ಸ್ಪರ್ಧೆ ಮಾಡದಿರಲು ತೀರ್ಮಾನಿಸಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಮಿತ್ರ

2 ಲಕ್ಷಕ್ಕೂ ಹೆಚ್ಚು ಮತಗಳಿಂದ ಹೆಚ್.ಡಿ.ಕುಮಾರಸ್ವಾಮಿ ಗೆಲ್ಲಿಸಿ

ಮಾಜಿ ಸಚಿವ ಸಾ.ರಾ.ಮಹೇಶ್ ಮನವಿ

ಕೆ.ಆರ್.ನಗರ, ಏ.2– ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬುದ್ಧಿ ಕಲಿಸಲು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಬುಡಸಮೇತ ಕಿತ್ತು ಹಾಕಲು ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು 2 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವಂತೆ ಮಾಜಿ ಸಚಿವ ಸಾ.ರಾ.ಮಹೇಶ್ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ 15 ವರ್ಷಗಳ ಅಧಿಕಾರವಧಿಯಲ್ಲಿ ಎಂದಿಗೂ ಯಾವುದೇ ಅಧಿಕಾರಿ ವರ್ಗಾವಣೆ ಹಾಗೂ ಗುತ್ತಿಗೆದಾರ ಮತ್ತು ಆಶ್ರಯ ಮನೆಗಳ ಹಂಚಿಕೆಯಲ್ಲಿ ಹಣ ಪಡೆದಿಲ್ಲ. ಇವರಿಂದ ಹಣ ಪಡೆಯುವ ಬದಲು ಬೀದಿಯಲ್ಲಿ ನಿಂತು ಭಿಕ್ಷೆ ಬೇಡುವುದು ಲೇಸು ಎಂದು ಶಾಸಕ ಡಿ.ರವಿಶಂಕರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಾನು ಕ್ಷೇತ್ರದಲ್ಲಿ ಶಾಸಕನಾಗಿ ಕೆಲಸ ಮಾಡಲಿಲ್ಲ. ಬದಲಿಗೆ ಜನಸೇವೆ ಮಾಡಿದ್ದೇನೆ. ನನ್ನ ಸ್ವಂತ ಹಣ 400 ಕೋಟಿಯನ್ನು ಬಡವರ, ದನಿ ಇಲ್ಲದವರ, ಸೂಕ್ಷ್ಮಾತಿಸೂಕ್ಷ್ಮ ಸಮಾಜದ ಅಭಿವೃದ್ಧಿಗೆ ನೀಡಿದ್ದೇನೆ. ಈಗಿನ ಶಾಸಕರ ಹಾಗೆ ನಮ್ಮ ತಂದೆಯನ್ನು ತೋಟದ ಮನೆಗೆ



ಬಿಜೆಪಿ–ಜೆಡಿಎಸ್ ಸಮ್ಮಿಲನ ಸಭೆಯನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಿದರು.

ಹೋಗಿ ನೋಡಿ ಎಂದು ಅಧಿಕಾರಿಗಳು ಹಾಗೂ ಕಾರ್ಯಕರ್ತರನ್ನು ಎಂದಿಗೂ ಕಳುಹಿಸಿರಲಿಲ್ಲ. ಇಂತಹವರಿಗೆ ಬುದ್ಧಿ ಕಲಿಸಲು ಜೆಡಿಎಸ್ ಅಭ್ಯರ್ಥಿ ಕುಮಾರಸ್ವಾಮಿ ಅವರಿಗೆ ಮತನೀಡಿ ಎಂದರು.

ತಾಲೂಕಿನ 60 ಹಳ್ಳಿಗಳ ರೈತರು ಬೆಳೆ ಬೆಳೆಯಲು ನೀರಾವರಿ ಸೌಲಭ್ಯ, ಕೆ.ಆರ್.ನಗರಕ್ಕೆ ರೈಲ್ವೆ ನಿಲ್ದಾಣ ಸೇರಿದಂತೆ ಹಲವು ಯೋಜನೆಗಳನ್ನು ಮಣ್ಣಿನ ಮಗ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಜಾರಿಗೊಳಿಸಿದರು. ಅಲ್ಲದೇ 28 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಗೆಲ್ಲಿಸುವಂತೆ ತಿಳಿಸಿದರು.

ಕಳೆದ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್ ನಾಯಕರಿಗೆ ಬುದ್ಧಿ ಕಲಿಸಲು, ಕಳೆದ ಚುನಾವಣೆ ಸೋಲಿನ ಸೋಡು ತೀರಿಸಿಕೊಳ್ಳಲು ಈ ಚುನಾವಣೆ ಪ್ರತಿಯೊಬ್ಬ ಕಾರ್ಯಕರ್ತರಿಗೂ ಒಂದು ಅವಕಾಶವಾಗಿದೆ. ಪ್ರತಿಯೊಬ್ಬ ಕಾರ್ಯಕರ್ತನೂ ತಾನೇ ಅಭ್ಯರ್ಥಿ ಎಂದು ಭಾವಿಸಿ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಪಕ್ಷ ತಾಯಿ ಇದ್ದಂತೆ. ಪಕ್ಷದ ನಾಯಕರು ತಂದೆ ಇದ್ದಂತೆ. ಅಧಿಕಾರಕ್ಕಾಗಿ ಪಕ್ಷದಿಂದ ಪಕ್ಷಕ್ಕೆ ಹೋಗುವ ಬದಲು ವಿಷ ಹಾಕುವುದು ಮೇಲೂ ಎಂದ ಅವರು, ನಾನು ಮನಸ್ಸು ಮಾಡಿದರೆ ಒಂದು ರಾಷ್ಟ್ರೀಯ ಪಕ್ಷದ ಅಭ್ಯರ್ಥಿ ಆಗಬಹುದಿತ್ತು. ಆದರೆ ನನ್ನನ್ನು ಕರೆದು ಶಾಸಕನಾಗಿ ಮಾಡಿದ ನಾಯಕರಿಗೆ ಮತ್ತು ಪಕ್ಷಕ್ಕೆ ದ್ರೋಹ ಮಾಡುವುದಿಲ್ಲವೆಂದು ತಿಳಿಸಿದರು.

ಮಾಜಿ ಜಿಪಂ ಉಪಾಧ್ಯಕ್ಷ ಎ.ಎಸ್.ಚೆನ್ನಬಸಪ್ಪ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ರಾಜ್ಯ ಜೆಡಿಎಸ್ ಕಾರ್ಯದರ್ಶಿ ಚಂದ್ರಶೇಖರ್, ಮಾಜಿ ಜಿಪಂ ಸದಸ್ಯ ಎಂ.ಟಿ.ಕುಮಾರ್, ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ವೆಂಕಟೇಶ್, ಕೆ.ಆರ್.ನಗರ ಮೋರ್ಚಾ ಅಧ್ಯಕ್ಷ ಧರ್ಮ, ಪುರಸಭಾ ಸದಸ್ಯ ಉಮೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಅಧ್ಯಕ್ಷ ಕುಮಾರ್, ರಾಜಣ್ಣ, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಪುರಸಭಾ ಸದಸ್ಯರಾದ ಕೆ.ಎಲ್.ಜಗದೀಶ್ ಸಂತೋಷ್‌ಗೌಡ, ನಾಗರಾಜ್, ವೈಆರ್.ಪ್ರಕಾಶ್, ಗಣೇಶ್, ತಮ್ಮಣ್ಣ ಸೇರಿದಂತೆ ಇನ್ನಿತರರಿದ್ದರು.

> ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಚುನಾವಣೆಯಲ್ಲಿ ಗೆದ್ದು ಕೇಂದ್ರ ಕೃಷಿ ಸಚಿವರಾಗಿ ರೈತರ ಕೃಷಿ ಸಾಲ ಮನ್ನಾ ಮಾಡುವ ಮೂಲಕ ಮತ್ತೊಮ್ಮೆ ಮಣ್ಣಿನ ಮಗ ಎಂಬುದಾಗಿ ಸಾಬೀತು ಪಡಿಸಲಿದ್ದಾರೆ. ಅವರನ್ನು ಆಯ್ಕೆ ಮಾಡುವ ನಾವೇ ಪುಣ್ಯವಂತರು. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಒಂದಾಗಿರುವುದರಿಂದ ಭಯಗೊಂಡ ಕಾಂಗ್ರೆಸ್ ಮುಖಂಡರು, ಸಚಿವರು, ಶಾಸಕರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ರಾಜ್ಯ ಸರ್ಕಾರ ದಿವಾಳಿಯಾಗಿದ್ದು, ಆಡಳಿತ ವ್ಯವಸ್ಥೆ ಕುಸಿದಿರುವುದರಿಂದ ಅಧಿಕಾರ ನಡೆಸಲು ಸಾಧ್ಯವಾಗದೇ ಕೇಂದ್ರದ ವಿರುದ್ಧ ಮಾತನಾಡುತ್ತಿದ್ದಾರೆ.
> - ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಟಿಲ್ಲು–2 (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಗಾಡ್ಜಿಲ್ಲಾ ಕಾಂಗ್ (ಇಂ)	4 ಪ್ರದರ್ಶನಗಳು
ಸಂಗಂ	
ಟಿಲ್ಲು–2 (ತೆ)	4 ಪ್ರದರ್ಶನಗಳು
ಲಿಡೋ	
Mr. & Mrs. ಮನ್ಮಥ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಗಧೀರ (ತೆ)	4 ಪ್ರದರ್ಶನಗಳು
ಪ್ರಭಾ	
ದಿ ಗೋಟ್ ಲೈಫ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.1.30ಕ್ಕೆ, ರಾ.7.05ಕ್ಕೆ, ಆಡುಜೀವಿತಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.50ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.12.50ಕ್ಕೆ, ಮ.2.50ಕ್ಕೆ, ಕ್ರೂವ್ (ಹಿಂ): ಸಂ.4.50ಕ್ಕೆ, ರಾ.7.20ಕ್ಕೆ, ಟಿಲ್ಲು ಸ್ಕ್ವೇರ್ (ತೆ): ರಾ.9.55ಕ್ಕೆ.
ಸ್ಕ್ರೀನ್ 3	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.10.25ಕ್ಕೆ, ರಾ.10.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.12.45ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.30ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.50ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಟಿಲ್ಲು ಸ್ಕ್ವೇರ್ (ತೆ): ಬೆ.9.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.12.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.2.45ಕ್ಕೆ, ಯುವ (ಕ): ಸಂ.6ಕ್ಕೆ, ಆಡುಜೀವಿತಂ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಕ್ರೂವ್ (ಹಿಂ): ಬೆ.10.55ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.25ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.11.25ಕ್ಕೆ, ಸಂ.5ಕ್ಕೆ, ರಾ.7.40ಕ್ಕೆ, ರಾ.10.20ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.2.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಝಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಧಿಕ ಮತಗಳಿಂದ ಸುನೀಲ್ ಬೋಸ್ ಗೆಲುವು

ತಿ.ನರಸೀಪುರ, ಏ.2– ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಜಿ.ಅಕ್ಷಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿ ಕಾಂಗ್ರೆಸ್ ಪಕ್ಷವನ್ನು ಹೆಮ್ಮರವಾಗಿ ಬೆಳೆಸಿದ್ದಾರೆ. ಅಲ್ಲದೇ ಅನ್ನಭಾಗ್ಯ, ಯುವಶಕ್ತಿ, ಯುವನಿಧಿ, ಗೃಹಜ್ಯೋತಿ ಹಾಗೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದಂತಹ ಯೋಜನೆ ಜಾರಿಗೆ ತರುವ ಮೂಲಕ ಕಾಂಗ್ರೆಸ್ ನುಡಿದಂತೆ ನಡೆದುಕೊಂಡಿದೆ ಎಂದರು.

ಸುನೀಲ್ ಬೋಸ್ ಅವರ ತಂದೆ ಡಾ.ಹೆಚ್.ಸಿ.ಮಹದೇವಪ್ಪ ಸಚಿವರಾಗಿ ಉತ್ತಮ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತಂದು ಹಿಂದೆಂದೂ ಕಾಣದ ರೀತಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದ್ದಾರೆ. ತಂದೆಯಂತೆಯೇ ಮಗ ಸುನೀಲ್ ಬೋಸ್ ಕೂಡ ಕ್ಷೇತ್ರದಲ್ಲಿ ಸಮಾಜಮುಖಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕ್ಷೇತ್ರದಲ್ಲಿ ಕಾರ್ಯಕರ್ತರು ಹಾಗೂ ಜನತೆ ಸಂಕಷ್ಟಗಳಿಗೆ ಸ್ಪಂದಿಸುವ ಮೂಲಕ ಜನಾನುರಾಗಿಯಾಗಿ ಕೆಲಸ ಮಾಡಿದ್ದಾರೆ. ಹಾಗಾಗಿ ಸುನೀಲ್ ಬೋಸ್ ಅವರ ಸೇವೆ ಪರಿಗಣಿಸಿ ಅವರನ್ನು ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಿಕೊಡಬೇಕು ಎಂದು ಮನವಿ ಮಾಡಿದರು.

ಮಲ್ಕುಂಡಿ: ಇಂದು, ನಾಳೆ ಜಾತ್ರಾ ಮಹೋತ್ಸವ

ಮಲ್ಕುಂಡಿ, ಏ.2– ಗ್ರಾಮದಲ್ಲಿ ಏ.3 ಗಡಿವೀರಪ್ಪಸ್ವಾಮಿ ಜಾತ್ರೆ ಮತ್ತು 4 ರಂದು ಶ್ರೀಕೆಂಡದ ಬಸವೇಶ್ವರಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಲಿದೆ. ಜಾತ್ರಾ ಮಹೋತ್ಸವಕ್ಕೆ ಈಗಾಗಲೇ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಜಾತ್ರೆ ಅಂಗವಾಗಿ ಕೊಂಡೋತ್ಸವ ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಬಿಜೆಪಿ, ಜೆಡಿಎಸ್ ಮುಖಂಡರು 'ಕೈ' ಸೇರ್ಪಡೆ



ತಿ.ನರಸೀಪುರ, ಏ.2– ಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ, ಜೆಡಿಎಸ್ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಸಭೆಯಲ್ಲಿ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಬೆಂಬಲಿಸಿ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಸಮ್ಮುಖದಲ್ಲಿ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ ಹಾಗೂ ಮಾಜಿ ಸಂಸದ ದಿ.ಎಸ್.ಎಂ.ಸಿದ್ದಯ್ಯ ಅವರ ಪುತ್ರ ಈಶ್ವರ್ ಪ್ರಸಾದ್, ಜಿಪಂ ಮಾಜಿ ಸದಸ್ಯೆ ಶಶಿಕಲಾ ನಾಗರಾಜ್ ಬೆಂಬಲಿಗರು, ಬೆನಕನಹಳ್ಳಿ ಗೌಡ್ರು ರಾಜಶೇಖರ ಮೂರ್ತಿ, ಸೋಸಲೆ ಮಧು, ಎಸ್.ಎಂ.ಚಿನ್ನಸ್ವಾಮಿ, ಕೆಬ್ಬೆ ರಂಗಸ್ವಾಮಿ, ಪ್ರಸಾದ್, ರಾಘವೇಂದ್ರ, ನರಗ್ಯಾತನಹಳ್ಳಿ ಡಿ.ಮಂಟೇಸ್ವಾಮಿ, ಮಹೇಶ್, ಕೆಬ್ಬೆಹುಂಡಿ ಬಸಪ್ಪ ಹಾಗೂ ಇನ್ನಿತರರು ಕಾಂಗ್ರೆಸ್ ಪಕ್ಷದ ಧ್ವಜ ಸ್ವೀಕರಿಸುವ ಮೂಲಕ ಪಕ್ಷಕ್ಕೆ ಸೇರ್ಪಡೆಯಾದರು.

ಧರ್ಮದ ಹೆಸರಿನಲ್ಲಿ ಸಂವಿಧಾನ ಬದಲಾವಣೆ ಹುನ್ನಾರ

ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ




ನಂಜನಗೂಡು, ಏ.2– ಬಿಜೆಪಿ ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿ ಸಂವಿಧಾನ ಬದಲಾವಣೆ ಮಾಡುವ ಹುನ್ನಾರ ನಡೆಸುತ್ತಿದೆ. ಆದ್ದರಿಂದ ಕೋಮುವಾದ, ಮತೀಯವಾದ ಅಳಿಸಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಸಲು ಕಾರ್ಯಕರ್ತರು ಈ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿ ಸುನೀಲ್ ಬೋಸ್ ಅವರನ್ನು ಗೆಲ್ಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಸಿಂಧುವಳ್ಳಿ ಗ್ರಾಮದ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ನಡೆದ ಚುನಾವಣಾ ಬಹಿರಂಗ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಇಡಿ, ಐಟಿ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಪ್ರತಿಪಕ್ಷಗಳ ಮೇಲೆ ದಾಳಿ ನಡೆಸಿ ಅವರ ಬಾಯಿ ಮುಚ್ಚಿಸಿ ಜೈಲಿಗೆ ಕಳುಹಿಸುವುದು ನಿರಂತರವಾಗಿ ನಡೆಯುತ್ತಿದೆ. ಅಲ್ಲದೇ ಕೋಮುದ್ವೇಷ, ಅಸಮಾನತೆ ಹೆಚ್ಚಾಗಿದೆ. ಒಂದು ದೇಶ, ಒಂದು ಚುನಾವಣೆ, ಒಂದು ಕಾನೂನು ಜಾರಿಗೊಳಿಸುವ ಹಿಂದೆ ಸಂವಿಧಾನ, ರಾಜಕೀಯ ವ್ಯವಸ್ಥೆ ನಾಶಗೊಳಿಸಿ ಸಂವಿಧಾನ ಬದಲಾವಣೆ ಮಾಡುವ ಹುನ್ನಾರವಿದೆ. ಮನಮೋಹನಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಪಾರದರ್ಶಕ ಆಡಳಿತವಿತ್ತು. ಆದರೆ ಬಿಜೆಪಿ ಆಡಳಿತದಲ್ಲಿ ರೈತರ, ದಲಿತರ, ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಿಲ್ಲ. ನಿರುದ್ಯೋಗ ಹೆಚ್ಚಾಗಿದೆ. ಆದ್ದರಿಂದ ಚುನಾವಣೆ ಸಮೀಕ್ಷೆಗಳು ಮುಂಚೆ ಕಾಂಗ್ರೆಸ್ 2, ಬಿಜೆಪಿಗೆ 23 ಸ್ಥಾನ ಎಂಬಂತಿತ್ತು. ಈಗ ಬಿಜೆಪಿ ಬಣ್ಣ ಬಯಲಾಗುತ್ತಿದ್ದು, 10 ಸ್ಥಾನಗಳಿಗಿಂತಲೂ ಕಡಿಮೆ ಎನ್ನುವಂತಾಗಿದೆ ಎಂದರು.

ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿದರು. ಸಮಾರಂಭದಲ್ಲಿ ಶಾಸಕರಾದ ಗಣೇಶ್ ಪ್ರಸಾದ್, ಅನಿಲ್, ಮಾಜಿ ಶಾಸಕ ಡಾ.ಯತೀಂದ್ರ, ಕಳಲೆ ಕೇಶವಮೂರ್ತಿ, ನಂಜುಂಡಸ್ವಾಮಿ, ಭಾರತೀಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ ಸಿದ್ದಶೆಟ್ಟಿ, ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ಮುಖಂಡರಾದ ನಾಗರಾಜು, ತಮ್ಮಣ್ಣೇಗೌಡ, ನಾಗೇಶ್‌ರಾಜ್, ಮಹದೇವಪ್ಪ, ಎನ್.ಟಿ.ಗಿರೀಶ್, ಇಂಧನ್ ಬಾಬು, ಕುಳ್ಳಯ್ಯ, ಚಾಮರಾಜು, ನಂದಕುಮಾರ್, ಚುನಾವಣಾ ಉಸ್ತುವಾರಿಗಳಾದ ಶ್ರೀಕಂಠು, ಸೋಮೇಶ್, ಮಾಜಿ ನಗರಸಭಾ ಉಪಾಧ್ಯಕ್ಷ ದೊರೆಸ್ವಾಮಿ ಸೇರಿದಂತೆ ಇತರರಿದ್ದರು.

> ಈ ಭಾಗದಲ್ಲಿ ನನ್ನ ತಂದೆ ಧ್ರುವನಾರಾಯಣ್ ಅವರನ್ನು ಹೆಚ್ಚು ಮತ ನೀಡಿ ಗೆಲ್ಲಿಸಿದ್ದರಿಂದಾಗಿ ಅವರು ಅಭಿವೃದ್ಧಿಯಲ್ಲಿ ರಾಜ್ಯದಲ್ಲೇ ನಂ.1 ಸಂಸದರೆಂದು ಹೆಸರು ಪಡೆದಿದ್ದರು. ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದ ಸರ್ಕಾರ ಎನಿಸಿದೆ. ಜೊತೆಗೆ ಸಿದ್ದರಾಮಯ್ಯರವರು ಕ್ಷೇತ್ರಕ್ಕೆ ಬಜೆಟ್‌ನಲ್ಲಿ 90 ಕೋಟಿ ಅನುದಾನ ನೀಡಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಯೋಜನೆಗಳನ್ನು ಜನರಿಗೆ ತಿಳಿಸಿ ಸುನೀಲ್ ಬೋಸ್ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿ ಸಂಸತ್ತಿಗೆ ಕಳುಹಿಸಿ.
> - ದರ್ಶನ್, ಶಾಸಕ.

ಪೇಜಾವರ ಶ್ರೀಗಳಿಂದ ಶ್ರೀಕೃಷ್ಣನಿಗೆ 108 ಕಳಶಾಭಿಷೇಕ



ನಂಜನಗೂಡು, ಏ.2– ನಗರದ ನಾರಾಯಣರಾವ್ ಅಗ್ರಹಾರದಲ್ಲಿರುವ ಶ್ರೀಕೃಷ್ಣ ಧ್ಯಾನ ಮಂದಿರದ 13ನೇ ವಾರ್ಷಿಕೋತ್ಸವ ಅಂಗವಾಗಿ ಮಂಗಳವಾರ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಶ್ರೀಕೃಷ್ಣನಿಗೆ 108 ಕಳಶಾಭಿಷೇಕ ನೆರವೇರಿಸಿದರು.

ನಂಜನಗೂಡು ಪುರ ಪ್ರವೇಶಿಸುತ್ತಿದ್ದಂತೆ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡ ಭಕ್ತರು, ಪ್ರಸನ್ನ ಚಿಂತಾಮಣಿ ಗಣಪತಿ ದೇವಾಲಯದಲ್ಲಿ ಆರತಿ ಬೆಳಗಿ ನೇರವಾಗಿ ಯುವ ಬ್ರಿಗೇಡ್ ಕಾರ್ಯಕರ್ತರ ಸಮ್ಮುಖದಲ್ಲಿ ಬೈಕ್ ರ‍್ಯಾಲಿ ಮೂಲಕ ಶ್ರೀಕೃಷ್ಣ ಧ್ಯಾನ ಮಂದಿರಕ್ಕೆ ಕರೆತಂದರು. ನಂತರ ಧ್ಯಾನ ಮಂದಿರದಲ್ಲಿ ಕೃಷ್ಣನಿಗೆ 108 ಕಳಶಾಭಿಷೇಕ ನೆರವೇರಿಸಿ ಧಾರ್ಮಿಕ ಪೂಜಾ ಕೈಂಕರ್ಯ ನೆರವೇರಿಸಿದರು.

ಪಕ್ಕದಲ್ಲೇ ಸೋಮವಾರವಷ್ಟೇ ಶೃಂಗೇರಿ ಮಠದ ವಿಧುಶೇಖರ ಭಾರತಿ ಶ್ರೀಗಳಿಂದ ಲೋಕಾರ್ಪಣೆಗೊಂಡ ಗಣಪತಿ ದೇವಾಲಯಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು. ನಂತರ ಭಕ್ತರಿಗೆ ಮಂತ್ರಾಕ್ಷತೆ, ಫಲಪುಷ್ಪ ನೀಡಿ ಆಶೀರ್ವದಿಸಿದರು. ಈ ಸಂದರ್ಭ ನೂರಾರು ಭಕ್ತರು ನೆರೆದಿದ್ದರು. ಆಶೀರ್ವಚನ ಬಳಿಕ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮೈಸೂರಿಗೆ ತೆರಳಿದರು.

ಚಾ.ನಗರದಲ್ಲಿ ಕಾಂಗ್ರೆಸ್ ಗೆಲುವು ಖಚಿತ: ಬೋಸ್



ಸರಗೂರು, ಏ.2– ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಗೆಲುವು ಖಚಿತ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುನೀಲ್ ಬೋಸ್ ತಿಳಿಸಿದರು.

ಮಂಗಳವಾರ ತಾಲೂಕಿನ ಚಿಕ್ಕದೇವಮ್ಮನ ಬೆಟ್ಟಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕಾರ್ಯಗಳು, ಗ್ಯಾರಂಟಿ ಯೋಜನೆಗಳು ಪಕ್ಷದ ಗೆಲುವಿಗೆ ಸಹಕಾರಿಯಾಗಲಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ವಿವಿಧ ಪಕ್ಷಗಳಿಂದ ಹಲವು ಮುಖಂಡರು ಸೇರ್ಪಡೆಗೊಳ್ಳುತ್ತಿರುವುದು ಪಕ್ಷಕ್ಕೆ ಬಲ ಬಂದಂತಾಗಿದೆ. ಅಲ್ಲದೇ ಕಾರ್ಯಕರ್ತರಲ್ಲಿ ಗೆಲುವಿನ ಉತ್ಸಾಹ ಹೆಚ್ಚಾಗಿದೆ. ತಾಯಿ ಚಿಕ್ಕದೇವಮ್ಮ ಹಾಗೂ ಕ್ಷೇತ್ರದ ಜನರ ಆಶೀರ್ವಾದದಿಂದ ಈ ಬಾರಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದರು.

ಈ ವೇಳೆ ಮುಖಂಡರಾದ ಮಹೇಶ್, ಪಿ.ರವಿ, ಚಿಕ್ಕವೀರನಾಯಕ, ಅಣ್ಣಯ್ಯಸ್ವಾಮಿ, ಶಂಭುಲಿಂಗನಾಯಕ, ಈರೇಗೌಡ, ಲಕ್ಷ್ಮಿನಾರಾಯಣ್, ಲಕ್ಷ್ಮಣ್, ಚಿಕ್ಕಣ್ಣ, ಬಸವರಾಜು, ಚಿನ್ನಸ್ವಾಮಿ, ಶಿವರಾಜು, ಕೆಂಡಗಣ್ಣಸ್ವಾಮಿ, ಸಿದ್ದರಾಜು, ಪ್ರಕಾಶ್, ನಾಗರಾಜು, ದೇವಸ್ಥಾನದ ಇಓ ರಘು, ಪಾರುಪತ್ತೇದಾರ ಮಹದೇವಸ್ವಾಮಿ, ರಾಕೇಶ್‌ಗೌಡ ಸೇರಿದಂತೆ ಅರ್ಚಕರು ಹಾಜರಿದ್ದರು.

ಕೋಟೆ ಅಭಿವೃದ್ಧಿಗೆ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲೇಬೇಕು

ಕಾರ್ಯಕರ್ತರ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ

ಹೆಚ್.ಡಿ.ಕೋಟೆ, ಏ.2– ಹಿಂದುಳಿದ ಹೆಚ್.ಡಿ.ಕೋಟೆ ತಾಲೂಕನ್ನು ಅಭಿವೃದ್ಧಿ ಪಡಿಸಲು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲೇಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ನಿಜವಾದ ಸಮಸ್ಯೆ ಎಲ್ಲಿದೆ ಎಂದು ಗಮನಿಸಿ ಅದನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದರು.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತಿದ್ದೆ ಆದಲ್ಲಿ, ಮುಂದಿನ ದಿನಗಳಲ್ಲಿ ಭಾರತದಲ್ಲಿ ಚುನಾವಣೆಗಳೇ ನಡೆಯುವುದಿಲ್ಲ. ಕೋಮುವಾದಿತನ ತಾಂಡವವಾಡಲು ಆರಂಭವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನಾನು 2ನೇ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಬೆಂಬಲಿಸಿದ ರೀತಿಯಲ್ಲೇ ಈ ಲೋಕಸಭಾ ಚುನಾವಣೆಯಲ್ಲಿ ಸುನೀಲ್ ಬೋಸ್ ಅವರನ್ನು ಬೆಂಬಲಿಸಬೇಕು. ನನಗೆ ನೀಡಿದ ಮತಗಳಿಗಿಂತಲೂ ಹೆಚ್ಚಿನ ಮತಗಳನ್ನು ನಮ್ಮ ವಿಧಾನಸಭಾ ಕ್ಷೇತ್ರದಿಂದ ನೀಡಬೇಕು ಎಂದು ಮನವಿ ಮಾಡಿದರು.



ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಅಂಬೇಡ್ಕರ್ ನಂತರದ ಸ್ಥಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಿಲ್ಲುತ್ತಾರೆ. ಅಂಬೇಡ್ಕರ್ ಅವರ ರೀತಿ ಯೋಚಿಸುವ ನಮ್ಮ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಸಮಾನತೆಗೆ ಹಲವು ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ್ದಾರೆ ಎಂದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿ, ರಾಜ್ಯದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ 9 ತಿಂಗಳಲ್ಲೇ ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ ಗ್ಯಾರಂಟಿಗಳನ್ನು ಜಾರಿಗೊಳಿಸಲಾಯಿತು. ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಅನೇಕ ಜನಪರ ಗ್ಯಾರಂಟಿ ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ತಿಳಿಸಿದ್ದು, ಈ ಗ್ಯಾರಂಟಿಗಳು ಸಾಕಾರಗೊಳ್ಳಬೇಕಾದರೆ ನನ್ನನ್ನು ಗೆಲ್ಲಿಸಿ ಎಂದರು.

ಪಕ್ಷದಿಂದ 8 ಮಂದಿ ಸಮರ್ಥ ಟಿಕೆಟ್ ಆಕಾಂಕ್ಷಿಗಳಿದರೂ, ಆ ಪೈಕಿ ನನ್ನನ್ನು ಆಯ್ಕೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದ ಅವರು, ಪಕ್ಷ ಸಂಘಟನೆಯಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರನ್ನು ಮೀರಿಸುವವರು ಯಾರೂ ಇಲ್ಲ. ಅವರ ದಾರಿಯಲ್ಲೇ ನಾನು ನಡೆಯುತ್ತೇನೆ ಎಂದರು.

ಮಾಜಿ ಸಚಿವ ಎಂ.ಶಿವಣ್ಣ ಮಾತನಾಡಿ, 17 ವರ್ಷಗಳ ವನವಾಸ ಅನುಭವಿಸಿ ಮತ್ತೆ ಕಾಂಗ್ರೆಸ್ ಸೇರ್ಪಡೆಗೊಂಡಿದ್ದೇನೆ. ಬಿಜೆಪಿಯಲ್ಲಿ ಉಸಿರುಗಟ್ಟಿದ ವಾತಾವರಣವಿತ್ತು. ಇದೀಗ ತವರು ಮನೆಗೆ ಬಂದಿದ್ದು, ಪಂಜರದಿಂದ ಹೊರಬಂದ ಅನುಭವವಾಗುತ್ತಿದೆ. ನನ್ನ ಕೊನೆ ಉಸಿರು ಇರುವ ತನಕ ಕಾಂಗ್ರೆಸ್ ಕಾರ್ಯಕರ್ತನಾಗಿ ಇರುತ್ತೇನೆ ಎಂದರು.

ಇದೇ ವೇಳೆ ಅನೇಕ ಬಿಜೆಪಿ ಮುಖಂಡರು ಹಾಗೂ ಮಾಜಿ ಸಚಿವ ಎಂ.ಶಿವಣ್ಣ ಬೆಂಬಲಿಗರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ಸಂದರ್ಭ ಶಾಸಕರಾದ ಅನಿಲ್, ದರ್ಶನ್, ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಡಾ.ಯತೀಂದ್ರ ಭಾರತಿ ಶಂಕರ್, ನಂಜುಂಡಸ್ವಾಮಿ, ಮಾಜಿ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಕೋಟೆ ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷ ಮಾದಪ್ಪ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮುಖಂಡರಾದ ಸತೀಶ್‌ಗೌಡ, ಈರೇಗೌಡ, ಪ್ರದೀಪ, ಚಿಕ್ಕವೀರನಾಯಕ, ಹೆಚ್.ಸಿ. ಮಂಜು, ಹೆಚ್.ಸಿ.ನರಸಿಂಹಮೂರ್ತಿ, ಜಿ.ವಿ.ಸೀತಾರಾಮು, ಸೋಮೇಶ್, ಮಂಜು, ನಾಗರಾಜು, ನಂದಿನಿ, ಬಾಗ್ಯಲಕ್ಷ್ಮಿ, ಮಧು, ರಾಜನಾಯಕ, ಪರಶಿವಮೂರ್ತಿ ಸೇರಿದಂತೆ ಇನ್ನಿತರರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಬೆಟ್ಟದಪುರ, ಏ.2– ಸಾಲಬಾಧೆ ತಾಳಲಾರದೇ ರೈತರೊಬ್ಬರು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಸುವಿನ ಕಾವಲು ಗ್ರಾಮದಲ್ಲಿ ನಡೆದಿದೆ. ಹಸುವಿನ ಕಾವಲು ಗ್ರಾಮದ ಮಹದೇವ್(52) ಆತ್ಮಹತ್ಯೆ ಮಾಡಿಕೊಂಡವರು. ಈತ ಕೃಷಿಗಾಗಿ 10ಲಕ್ಷಕ್ಕೂ ಹೆಚ್ಚು ಸಾಲ ಮಾಡಿದ್ದರಿಂದ ಸಾಲ ತೀರಿಸಲು ಸಾಧ್ಯವಾಗದೆ ಮನನೊಂದು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ರೈತನ ಪತ್ನಿ ನೇತ್ರಾವತಿ ನೀಡಿದ ದೂರಿನ ಮೇರೆಗೆ ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಎನ್ ಡಿ ಎ ಮೈತ್ರಿಕೂಟ
ಭಾರತೀಯ ಜನತಾ ಪಾರ್ಟಿ - ಜಾತ್ಯತೀತ ಜನತಾದಳ
ಮೈಸೂರು, ಚಾಮರಾಜನಗರ ಲೋಕಸಭಾ ಕ್ಷೇತ್ರದ
ಎನ್ ಡಿ ಎ ಅಭ್ಯರ್ಥಿಗಳ ನಾಮಪತ್ರ
ಸಲ್ಲಿಕೆಗೆ ಆಗಮಿಸುತ್ತಿರುವ
ಬಿಜೆಪಿ ರಾಜ್ಯಾಧ್ಯಕ್ಷ
ಶ್ರೀ ಬಿ.ವೈ ವಿಜಯೇಂದ್ರ
ಹಾಗೂ
ಮಾಜಿ ಸಿಎಂ
ಶ್ರೀ ಹೆಚ್.ಡಿ ಕುಮಾರಸ್ವಾಮಿ
ಅವರಿಗೆ
ಸುಸ್ವಾಗತ
ದಿನಾಂಕ : 03-04-2024 | ಬುಧವಾರ
ಸಮಯ : ಬೆಳಗ್ಗೆ 10 ಗಂಟೆಗೆ